ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬.

KARNATAKA STATE OPEN UNIVERSITY

Mukthgangothri. Mysore - 570 006.

# POLITICAL SCIENCE

## MA (FINAL)

## COURSE - 10

# ರಾಜ್ಯಶಾಸ್ತ್ರ


## ಎಂ.ಎ (ಅಂತಿಮ)

## ಕೋರ್ಸ್ – 10

## ಕನ್ನಡ ಮಾಧ್ಯಮ

# ಭಾರತ ಮತ್ತು ನೆರೆಹೊರೆಯ ರಾಷ್ಟ್ರಗಳು

# INDIA AND HER NEIGHBOURS




**Block : 1- 7**

**ಬ್ಲಾಕ್: 1- 7**

# ಕರಾಮುವಿ

## ರಾಷ್ಟ್ರೀಯ ಅಂತಾರಾಷ್ಟ್ರೀಯ ಮಾನ್ಯತೆ

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಜೂನ್ ೧, ೧೯೯೬ ರಂದು ಸರ್ಕಾರಿ ಅದೇಶ ಸಂಖ್ಯೆ : ED1/UOV/dated 12 February 1996 (Karnataka State Open University Act - 1992) ರ ಪ್ರಕಾರ ಕರ್ನಾಟಕ ರಾಜ್ಯಪಾಲರ ಅನುಮೋದನೆಯೊಂದಿಗೆ ಪೂರ್ಣಪ್ರಮಾಣದ ವಿಶ್ವವಿದ್ಯಾನಿಲಯವಾಗಿ ಸ್ಥಾಪನೆಗೊಂಡಿತು. ರಾಜ್ಯದ ಶೈಕ್ಷಣಿಕ ಪದ್ಧತಿಯಲ್ಲಿ 'ದೂರ ಶಿಕ್ಷಣ ಪದ್ಧತಿ'ಯನ್ನು ಆರಂಭಿಸುವ ಮತ್ತು ಉತ್ತೇಜಿಸುವ ದೃಷ್ಟಿಯಿಂದ ಈ ಮುಕ್ತ ವಿಶ್ವವಿದ್ಯಾನಿಲಯವನ್ನು ಅಧಿನಿಯಮದ ಮೂಲಕ ಸ್ಥಾಪಿಸಲಾಯಿತು.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ ೧೯೯೨ ರಂತೆ ಈ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ಒಳಗೆ ಸಂಸ್ಥೆಗಳನ್ನು, ಕಾಲೇಜುಗಳನ್ನು, ಪ್ರಾದೇಶಿಕ ಕೇಂದ್ರಗಳನ್ನು ಮತ್ತು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವ, ನಿರ್ವಹಿಸುವ ಮತ್ತು ಮಾನ್ಯತೆ ಕೊಡುವ ಅಧಿಕಾರವನ್ನು ಹೊಂದಿದೆ. ಅಗತ್ಯವಿದ್ದ ಸಂದರ್ಭಗಳಲ್ಲಿ ಕರ್ನಾಟಕ ರಾಜ್ಯದ ಹೊರಗಿನ ಸ್ಥಳಗಳಲ್ಲೂ ಪ್ರಾದೇಶಿಕ ಕೇಂದ್ರ ಮತ್ತು ಅಧ್ಯಯನ ಕೇಂದ್ರಗಳನ್ನು ತೆರೆಯಲು ಅಧಿಕಾರವನ್ನು ಪಡೆದಿದೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳು 'ದೂರ ಶಿಕ್ಷಣ ಮಂಡಳಿ' (DEC), ಮಾನವಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD), ನವದೆಹಲಿಯ ಮಾನ್ಯತೆಯನ್ನು ಪಡೆದಿವೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ ನವದೆಹಲಿಯಲ್ಲಿರುವ 'ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘ'ದ (AIU) ಖಾಯಂ ಸದಸ್ಯತ್ವವನ್ನು ಹೊಂದಿದೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ 'ಕಾಮನ್‌ವೆಲ್ತ್ ವಿಶ್ವವಿದ್ಯಾನಿಲಯಗಳ ಸಂಘ' (ACU), ಲಂಡನ್, ಯುನೈಟೆಡ್ ಕಿಂಗ್‌ಡಮ್‌ನ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ. ಸದಸ್ಯತ್ವದ ಸಂಖ್ಯೆ : ZKASOPENUINI.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ ರಿಂದ 'ಏಷಿಯಾದ ಮುಕ್ತ ವಿಶ್ವವಿದ್ಯಾನಿಲಯಗಳ ಸಂಘ' (AAOU), ಬೀಜಿಂಗ್, ಚೀನಾ – ಇದರ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' (COL) ಕೆನಡ, ಇದರ ಸಹಯೋಗವನ್ನು ೨೦೦೩ ರಿಂದ ಹೊಂದಿದೆ. 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' ಎನ್ನುವುದು ದೂರ ಶಿಕ್ಷಣದಲ್ಲಿ ಮುಕ್ತಕಲಿಕಾ ತಿಳಿವಳಿಕೆ, ಸಂಪನ್ಮೂಲಗಳು ಮತ್ತು ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಹಂಚುವಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕಾಮನ್‌ವೆಲ್ತ್ ದೇಶಗಳ ಸರ್ಕಾರಗಳಿಂದ ನಿರ್ಮಾಣಗೊಂಡ ಅಂತಾರಾಷ್ಟ್ರೀಯ ಸರ್ಕಾರಿ ಸಂಸ್ಥೆಯಾಗಿದೆ.

**ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ**

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-006.

## ಎಂ.ಎ., ರಾಜ್ಯಶಾಸ್ತ್ರ (ಅಂತಿಮ)

## ಪತ್ರಿಕೆ – 10 : ಭಾರತ ಮತ್ತು ನೆರೆಹೊರೆಯ ರಾಷ್ಟ್ರಗಳು


| | | | ಪುಟ ಸಂಖ್ಯೆ |
|---|---|---|---|
| **ಬ್ಲಾಕ್ – 1** | | | |
| ಘಟಕ – 1 | : | ಭಾರತ ವಿದೇಶಾಂಗ ನೀತಿಯ ವಿಕಾಸ | 01 – 12 |
| ಘಟಕ – 2 | : | ಭಾರತ ವಿದೇಶಾಂಗ ನೀತಿಯ ಮೂಲ ತತ್ವಗಳು | 13 – 24 |
| ಘಟಕ – 3 | : | ವಿವೇಚನಾಯುಕ್ತ ಭೌಗೋಳಿಕ ಪರಿಗಣನೆ ಆಧಾರಿತ ನೆರೆಹೊರೆಯ ರಾಷ್ಟ್ರಗಳೊಡನೆ ಭಾರತದ ರಾಯಭಾರತ್ವ | 25 – 36 |
| ಘಟಕ – 4 | : | ದಕ್ಷಿಣ ಏಷ್ಯಾದ ಪ್ರಭಾವೀ ಶಕ್ತಿ ರಾಷ್ಟ್ರವಾಗಿ ಭಾರತ | 37 – 48 |
| ಘಟಕ – 5 | : | ಪ್ರಾದೇಶಿಕ ಸಹಕಾರಕ್ಕೆ ಭಾರತದ ಕಾರ್ಯಕ್ರಮಗಳು | 49 – 61 |
| **ಬ್ಲಾಕ್ – 2** | | | |
| ಘಟಕ – 6 | : | ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಘರ್ಷಣಾತ್ಮಕ ಮತ್ತು ಸಹಕಾರಿ ಕ್ಷೇತ್ರಗಳು | 62 – 72 |
| ಘಟಕ – 7 | : | ಭಾರತ ಮತ್ತು ಪಾಕಿಸ್ತಾನಗಳ ನಡುವೆ ಪರಸ್ಪರ ಪ್ರತಿಕ್ರಿಯಿಸಲು ಪ್ರಭಾವ ಬೀರುವಂತ ಅಂಶಗಳು | 73 – 82 |
| ಘಟಕ – 8 | : | ತಾಷ್ಕೆಂಟ್ ಒಪ್ಪಂದ ಮತ್ತು ಸಿಮ್ಲಾ ಒಪ್ಪಂದ | 83 – 93 |
| ಘಟಕ – 9 | : | ಭಾರತ ಮತ್ತು ಪಾಕಿಸ್ತಾನಗಳ ಸಂಬಂಧಗಳು – ಇತ್ತೀಚಿನ ಬೆಳವಣಿಗೆಗಳು | 94 – 103 |
| **ಬ್ಲಾಕ್ – 3** | | | |
| ಘಟಕ – 10 | : | ಭಾರತ ಮತ್ತು ಚೀನಾ – ಎರಡು ರಾಷ್ಟ್ರಗಳ ನಡುವಿನ ಸಂಬಂಧ | 104 – 114 |
| ಘಟಕ – 11 | : | ಪಂಚಶೀಲ ತತ್ತ್ವಗಳ ಅನುಸರಣೆ ಮತ್ತು ನಂತರದ ಪರಿಣಾಮಗಳು | 115 – 126 |
| ಘಟಕ – 12 | : | 1962ರ ಘರ್ಷಣೆ ಎರಡೂ ರಾಷ್ಟ್ರಗಳ ಸಂಬಂಧದ ಮೇಲೆ ಇದರ ಪರಿಣಾಮ | 127 – 139 |
| ಘಟಕ – 13 | : | ಎರಡು ರಾಷ್ಟ್ರಗಳ ನಡುವಿನ ಸಂಬಂಧದ ಸಮಾಧಾನಕರ ಪ್ರಕ್ರಿಯೆಯಲ್ಲಿನ ಸಮಸ್ಯೆಗಳು ಮತ್ತು ನಿರೀಕ್ಷೆಗಳು | 140 – 150 |
| **ಬ್ಲಾಕ್ – 4** | | | |
| ಘಟಕ – 14 | : | ಭಾರತ ಮತ್ತು ಬಾಂಗ್ಲಾದೇಶ – ಬಾಂಗ್ಲಾದೇಶದ ಉದಯದಲ್ಲಿ ಭಾರತದ ಪಾತ್ರ | 151 – 160 |
| ಘಟಕ – 15 | : | ಸ್ನೇಹಯುತ ಒಪ್ಪಂದ (1972) | 161 – 170 |
| ಘಟಕ – 16 | : | ಎರಡು ರಾಷ್ಟ್ರಗಳ ನಡುವಿನ ಸಹಕಾರಿ ಕ್ಷೇತ್ರಗಳು ಮತ್ತು 1996ರ ನದಿ ನೀರಿನ ಹಂಚಿಕೆ | 171 – 181 |
| ಘಟಕ – 17 | : | ಫರಕ್ಕಾ ಅಣೆಕಟ್ಟು ಸಮಸ್ಯೆ ಮತ್ತು ಎರಡು ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧ | 182 – 195 |


VOP_FL_MA_Pol_Sci_C-10(1-7)_TF.18_F.No.91

91

## ಬ್ಲಾಕ್ – 5


| | | | |
|---|---|---|---|
| ಘಟಕ – 18 | : | ಭಾರತ ಮತ್ತು ಶ್ರೀಲಂಕಾ: ಸಹಕಾರ ಸಂಪರ್ಕಗಳು ಮತ್ತು ಘರ್ಷಣಾ ಮಾರ್ಗಗಳು | 196 – 201 |
| ಘಟಕ – 19 | : | ಜನಾಂಗೀಯ ಸಮಸ್ಯೆಗಳು | 202 – 207 |
| ಘಟಕ – 20 | : | ಶಾಸ್ತ್ರಿ – ಸಿರಿಮಾವೊ ಒಪ್ಪಂದ (1964) | 208 – 213 |
| ಘಟಕ – 21 | : | 1987ರ ಭಾರತ – ಶ್ರೀಲಂಕಾ ಒಪ್ಪಂದ | 214 – 219 |
| ಘಟಕ – 22 | : | ಇತ್ತೀಚಿನ ಬೆಳವಣಿಗೆಗಳು | 220 – 225 |


## ಬ್ಲಾಕ್ – 6


| | | | |
|---|---|---|---|
| ಘಟಕ – 23 | : | ಭಾರತ ಮತ್ತು ನೇಪಾಳ–ಸಾಮಾನ್ಯ ಸಂಸ್ಕೃತಿ ಹಾಗೂ ಧಾರ್ಮಿಕ ಪದ್ಧತಿಗಳು | 226 – 231 |
| ಘಟಕ – 24 | : | 1950ರ ನೇಪಾಳ ಒಪ್ಪಂದ, ನೇಪಾಳದ ರಾಜಕೀಯ ಬೆಳವಣಿಗೆ ಮತ್ತು ಎರಡು ರಾಷ್ಟ್ರಗಳ ನಡುವಿನ ಪ್ರತಿಕ್ರಿಯೆ | 232 – 239 |
| ಘಟಕ – 25 | : | ಸಹಕಾರಿ ಕ್ಷೇತ್ರಗಳು ಹಾಗೂ ಎರಡು ರಾಷ್ಟ್ರಗಳ ನಡುವಿನ ವ್ಯತ್ಯಾಸಗಳು ಹಾಗೂ ಇತ್ತೀಚಿನ ವಿದ್ಯಮಾನಗಳು | 240 – 249 |


## ಬ್ಲಾಕ್ – 7


| | | | |
|---|---|---|---|
| ಘಟಕ – 26 | : | ಭಾರತ ಮತ್ತು ಭೂತಾನ್ | 250 – 258 |
| ಘಟಕ – 27 | : | ಭಾರತ ಮತ್ತು ಸಾರ್ಕ್ | 259 – 267 |
| ಘಟಕ – 28 | : | ನೆರೆಹೊರೆಯ ರಾಷ್ಟ್ರಗಳೊಡನೆ ಇರುವ ಭಾರತದ ವಿದೇಶಾಂಗ ನೀತಿಯ ಮೌಲೀಕರಣ | 268 – 272 |

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು

**ಪ್ರೊ. ಟಿ.ಡಿ.ದೇವೇಗೌಡ**
ಪ್ರಭಾರ ಡೀನ್ (ಶೈಕ್ಷಣಿಕ) ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು

***ಡಾ. ಕೆ.ಜಿ. ಸುರೇಶ್***
ಅಧ್ಯಕ್ಷರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು – 06

**ವಿಷಯ ಸಂಯೋಜಕರು**

## ಪಠ್ಯಕ್ರಮ ನಿರೂಪಕರು

**ಘಟಕಗಳು**

***ಡಾ. ಪಿ.ಎಸ್. ಜಯರಾಮು***
ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಬೆಂಗಳೂರು ವಿಶ್ವವಿದ್ಯಾನಿಲಯ
ಬೆಂಗಳೂರು.
ಘಟಕ 1 – 5
ಘಟಕ 6 – 9

***ಪ್ರೊ. ಸದಾನಂದ ಜೆ.ಎಸ್.***
ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕುವೆಂಪು ವಿಶ್ವವಿದ್ಯಾನಿಲಯ
ಶಿವಮೊಗ್ಗ
ಘಟಕ 10 – 13
ಘಟಕ 14 – 17

***ಡಾ. ಹೆಚ್.ಎಂ. ರಾಜಶೇಖರ***
ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
ಘಟಕ 18 – 22

***ಡಾ. ಟಿ.ಡಿ. ದೇವೇಗೌಡ***
ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು – 06
ಘಟಕ 23 – 25
ಘಟಕ 26 – 28

## ಕುಲಸಚಿವರು



ಕ.ರಾ.ಮು.ವಿ., ಯ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2014

ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸ್‌ಗಳ ಹೆಚ್ಚಿನ ವಿವರಗಳನ್ನು ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮುಕ್ತಗಂಗೋತ್ರಿ, ಮೈಸೂರು – 6 ಇಲ್ಲಿಂದ ಪಡೆಯಬಹುದು.

# ಕೋರ್ಸ್ – 5ರ ಪರಿಚಯ
# ಭಾರತ ಮತ್ತು ನೆರೆಹೊರೆಯ ರಾಷ್ಟ್ರಗಳು

ರಾಜ್ಯಶಾಸ್ತ್ರದ ಅಂತಿಮ ಎಂ.ಎ. ವಿದ್ಯಾರ್ಥಿಗಳಿಗಾಗಿ ಭಾರತ ಮತ್ತು ನೆರೆಹೊರೆಯ ರಾಷ್ಟ್ರಗಳು ಎಂಬುದನ್ನು ಐದನೆಯ ಕೋರ್ಸ್ (ಪತ್ರಿಕೆ) ಆಗಿ ಇಡಲಾಗಿದೆ. ಇದು ಭಾರತ ಮತ್ತು ನೆರೆಹೊರೆಯ ರಾಷ್ಟ್ರಗಳ ನಡುವಿನ ಸಮಸ್ಯೆಗಳು, ಪ್ರತಿಕ್ರಿಯೆಗಳು, ಸಹಕಾರಿ ಕ್ಷೇತ್ರಗಳು, ಘರ್ಷಣಾ ಕ್ಷೇತ್ರಗಳು ಮೊದಲಾದ ವೈಚಾರಿಕ ಅಂಶಗಳನ್ನು ಚರ್ಚಿಸುತ್ತದೆ. ಇದಕ್ಕೂ ಮಿಗಿಲಾಗಿ ಈ ಕೋರ್ಸ್‌ನಲ್ಲಿ ಭಾರತ ಮತ್ತು ನೆರೆಹೊರೆಯ ರಾಷ್ಟ್ರಗಳ ನಡುವಿನ ಸಮಸ್ಯೆಗಳು ಹೇಗೆ ಉಗಮಗೊಂಡವು ಹಾಗು ಯಾವ ರೀತಿ ಮುಂದುವರಿಯುತ್ತಿವೆ ಎಂಬ ಅಂಶಗಳ ಮೇಲೆ ಹೆಚ್ಚು ಗಮನ ಹರಿಸಲಾಗಿದೆ. ಇದಲ್ಲದೆ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರಗಳೇನು, ಇದಕ್ಕಾಗಿ ನಡೆದಿರುವಂತ ಪ್ರಯತ್ನಗಳಾವುವು ಎಂಬ ಅಂಶಗಳ ವಿವರವನ್ನು ನೀಡಲಾಗಿದೆ.

ಯಾವುದೇ ಒಂದು ರಾಷ್ಟ್ರದ ಅಂತರರಾಷ್ಟ್ರೀಯ ಸಂಬಂಧವು ಆ ರಾಷ್ಟ್ರ ತನ್ನ ನೆರೆಹೊರೆಯ ರಾಷ್ಟ್ರಗಳೊಡನೆ ಯಾವ ರೀತಿಯ ಸಂಬಂಧವನ್ನು ಹೊಂದಿದೆ ಎಂಬ ಅಂಶಗಳನ್ನು ಆಧರಿಸಿಕೊಂಡಿರುತ್ತದೆ. ಈ ಅಂಶವನ್ನು ಆಧರಿಸಿಕೊಂಡು ಭಾರತವು ತನ್ನ ನೆರೆಹೊರೆಯ ರಾಷ್ಟ್ರಗಳಾದ ಪಾಕಿಸ್ತಾನ, ಚೀನಾ, ಬಾಂಗ್ಲಾದೇಶ, ಭೂತಾನ್, ನೇಪಾಳ ಮತ್ತು ಶ್ರೀಲಂಕಾ ರಾಷ್ಟ್ರಗಳೊಡನೆ ಯಾವ ರೀತಿಯ ಸಂಬಂಧವನ್ನು ಹೊಂದಿದೆ ಎಂಬ ಅಂಶಗಳನ್ನು ಮನದಟ್ಟಾಗುವ ರೀತಿಯಲ್ಲಿ ವಿಶ್ಲೇಷಿಸಲಾಗಿದೆ. ಈ ಅಂಶಗಳನ್ನು ಆಧರಿಸಿಕೊಂಡು ಈ ಕೋರ್ಸ್‌ನ್ನು ಅಧ್ಯಯನ ಮಾಡುವುದು ರಾಜ್ಯಶಾಸ್ತ್ರ ವಿದ್ಯಾರ್ಥಿಗಳಾದವರಿಗೆ ಅತಿ ಮುಖ್ಯವಾದುದು.

ಬ್ಲಾಕ್ ಒಂದರಲ್ಲಿ ಒಟ್ಟು ಐದು ಘಟಕಗಳಿದ್ದು, ಅವುಗಳು 1 ರಿಂದ 5 ಆಗಿವೆ. ಒಂದನೇ ಘಟಕದಲ್ಲಿ ಭಾರತದ ವಿದೇಶಾಂಗ ನೀತಿಯ ವಿಕಾಸಕ್ಕೆ ಅಥವಾ ರಚನೆಗೆ ಪ್ರಭಾವಬೀರಿದಂತ ಮುಖ್ಯ ಅಂಶಗಳನ್ನು ವಿವರಿಸಲಾಗಿದೆ. ಘಟಕ ಎರಡರಲ್ಲಿ ಭಾರತದ ವಿದೇಶಾಂಗ ನೀತಿಯಲ್ಲಿ ಅಡಕವಾಗಿರುವಂತ ಮೂಲತತ್ವಗಳನ್ನು ಚರ್ಚಿಸಲಾಗಿದೆ. ಘಟಕ ಮೂರರಲ್ಲಿ ಭಾರತದ ವಿದೇಶಾಂಗ ನೀತಿಯಲ್ಲಿನ ವಿವೇಚನಾಯುಕ್ತ ಭೌಗೋಳಿಕ ಪರಿಗಣನೆಗೆ ಆಧಾರಿತ ನೆರೆಹೊರೆಯ ರಾಷ್ಟ್ರಗಳೊಡನೆ ಭಾರತವು ಹೊಂದಿರುವಂತ ರಾಯಭಾರತ್ವವನ್ನು ವಿಮರ್ಶಿಸಲಾಗಿದೆ. ಘಟಕ ನಾಲ್ಕರಲ್ಲಿ ಭಾರತವು ದಕ್ಷಿಣ ಏಷ್ಯಾದ ಪ್ರಭಾವಿ ಶಕ್ತಿಶಾಲಿ ರಾಷ್ಟ್ರವಾಗಿ ಹೇಗೆ ಪಾತ್ರವಹಿಸುತ್ತಿದೆ ಎಂಬುದನ್ನು ವಿವರಿಸಲಾಗಿದೆ. ಘಟಕ ಐದರಲ್ಲಿ ಭಾರತವು ತನ್ನ ನೆರೆಹೊರೆಯ ರಾಷ್ಟ್ರಗಳೊಡನೆ ಪ್ರಾದೇಶಿಕ ಸಹಕಾರಕ್ಕೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ಚರ್ಚಿಸಲಾಗಿದೆ.

## ಬ್ಲಾಕ್ –2ರ ಪರಿಚಯ:–

ಬ್ಲಾಕ್ ಎರಡು ಒಟ್ಟು ನಾಲ್ಕು ಘಟಕಗಳನ್ನು ಹೊಂದಿದೆ. ಅವುಗಳೆಂದರೆ 6 ರಿಂದ 9 ಎಂಬುವುಗಳು. ಘಟಕ 6ರಲ್ಲಿ ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಘರ್ಷಣಾತ್ಮಕ ಮತ್ತು ಸಹಕಾರಿ ಕ್ಷೇತ್ರಗಳ ಬಗೆಗೆ ವಿವರಿಸಲಾಗಿದೆ. ಘಟಕ 7ರಲ್ಲಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಪರಸ್ಪರ ಪ್ರತಿಕ್ರಿಯಿಸಲು ಪ್ರಭಾವ ಬೀರುವಂತ ಅಂಶಗಳನ್ನು ಚರ್ಚಿಸಲಾಗಿದೆ. ಘಟಕ 8ರಲ್ಲಿ ತಾಷ್ಕೆಂಟ್ ಒಪ್ಪಂದ ಮತ್ತು ಸಿಮ್ಲಾ ಒಪ್ಪಂದಗಳ ಮಹತ್ವವನ್ನು ವಿವರಿಸಲಾಗಿದೆ. ಘಟಕ 9ರಲ್ಲಿ ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಇತ್ತೀಚಿನ ಬೆಳವಣಿಗೆಗಳ ಬಗೆಗೆ ವಿವರಿಸಲಾಗಿದೆ. ಒಟ್ಟಾರೆ ಈ ಎರಡನೆ ಬ್ಲಾಕ್ ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಸಂಬಂಧದ ಬಗೆಗಿನ ಎಲ್ಲ ಅಂಶಗಳನ್ನು ಚರ್ಚಿಸುತ್ತದೆ.

## ಬ್ಲಾಕ್ –3ರ ಪರಿಚಯ:–

ಬ್ಲಾಕ್ ಮೂರರಲ್ಲಿ ಒಟ್ಟು ನಾಲ್ಕು ಘಟಕಗಳಿದ್ದು, ಅವುಗಳು 10 ರಿಂದ 13 ಆಗಿವೆ. ಈ ಬ್ಲಾಕ್‌ನ ನಾಲ್ಕು ಘಟಕಗಳು ಭಾರತ ಮತ್ತು ಚೀನಾ ರಾಷ್ಟ್ರಗಳ ನಡುವಿನ ಸಂಬಂಧದ ಬಗ್ಗೆ ವಿವರಿಸಲಾಗಿದೆ. ಘಟಕ 10ರಲ್ಲಿ ಈ ಎರಡು

ರಾಷ್ಟ್ರಗಳ ನಡುವಿನ ಸಂಬಂಧವು ಹೇಗೆ ಬೆಳವಣಿಗೆ ಹೊಂದಿದೆ ಎಂಬುದನ್ನು ವಿವರಿಸಲಾಗಿದೆ. ಘಟಕ 11ರಲ್ಲಿ ಪಂಚಶೀಲ ತತ್ವಗಳು ಮತ್ತು ಅವುಗಳ ಅನುಷ್ಠಾನದ ಬಗ್ಗೆ ವಿವರಣೆ ನೀಡಲಾಗಿದೆ. ಘಟಕ 12ರಲ್ಲಿ 1962ರಲ್ಲಿ ನಡೆದ ಗಡಿವಿವಾದದ ಘರ್ಷಣೆ ಮತ್ತು ಅದರ ನಂತರದ ಎರಡು ರಾಷ್ಟ್ರಗಳ ನಡುವಿನ ಸಂಬಂಧದ ಬಗ್ಗೆ ಚಿತ್ರಿಸಲಾಗಿದೆ. ಘಟಕ 13ರಲ್ಲಿ ಈ ಎರಡು ರಾಷ್ಟ್ರಗಳ ನಡುವಿನ ಸಂಬಂಧದ ಉತ್ತಮತೆಗೆ ಪ್ರಯತ್ನಗಳು ಹಾಗು ಅದಕ್ಕಿರುವ ಸಮಸ್ಯೆಗಳು ಮತ್ತು ಪರಿಹಾರಗಳ ವಿವರಣೆಯನ್ನು ನೀಡಲಾಗಿದೆ. ಒಟ್ಟಾರೆ ಈ ನಾಲ್ಕು ಘಟಕಗಳು ಭಾರತ ಮತ್ತು ಚೀನಾ ರಾಷ್ಟ್ರಗಳ ನಡುವಿನ ಸಂಬಂಧದ ಬಗ್ಗೆ ವಿವರಣೆಯನ್ನು ನೀಡುತ್ತವೆ.

**ಬ್ಲಾಕ್ – 4ರ ಪರಿಚಯ :–**

ಬ್ಲಾಕ್ ನಾಲ್ಕರಲ್ಲಿ ಭಾರತ ಮತ್ತು ಬಾಂಗ್ಲಾದೇಶಗಳ ಸಂಬಂಧದ ಬಗ್ಗೆ ವಿವರಿಸಲಾಗಿದೆ. ಈ ಬ್ಲಾಕ್‌ನಲ್ಲಿ ಒಟ್ಟು ನಾಲ್ಕು ಘಟಕಗಳಿದ್ದು, ಅವುಗಳು 14 ರಿಂದ 17 ಘಟಕಗಳು ಎಂದು ವಿಂಗಡಿಸಲಾಗಿದೆ. ಘಟಕ 14ರಲ್ಲಿ ಬಾಂಗ್ಲಾದೇಶದ ಉದಯಕ್ಕೆ ಭಾರತದ ಪಾತ್ರವೇನು ಎಂಬುದನ್ನು ವಿವರಿಸಲಾಗಿದೆ. ಘಟಕ 15ರಲ್ಲಿ 1972ರಲ್ಲಿ ಭಾರತ ಮತ್ತು ಬಾಂಗ್ಲಾದೇಶಗಳ ನಡುವೆ ನಡೆದಂತ ಸ್ನೇಹ ಒಪ್ಪಂದ ಸವಿವರಣೆಯನ್ನು ಕೊಡಲಾಗಿದೆ. ಘಟಕ 16ರಲ್ಲಿ ಎರಡು ರಾಷ್ಟ್ರಗಳ ನಡುವಿನ ಸಹಕಾರಿ ಅಂಶಗಳು ಅಥವಾ ಕ್ಷೇತ್ರಗಳನ್ನು ಹಾಗು 1996ರಲ್ಲಿ ನಡೆದಂತ ನದಿ ನೀರು ಹಂಚಿಕೆಯ ಒಪ್ಪಂದದ ರೂಪುರೇಷೆಗಳನ್ನು ವಿವರಿಸಲಾಗಿದೆ. ಘಟಕ 17ರಲ್ಲಿ ಫರಕ್ಕಾ ಅಣೆಕಟ್ಟಿನ ವಿವಾದ ಹಾಗು ಈ ಎರಡು ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧದ ಬಗ್ಗೆ ಇರುವಂತ ಅಂಶಗಳ ಬಗ್ಗೆ ವಿವರಿಸಲಾಗಿದೆ. ಒಟ್ಟಾರೆ ಈ ನಾಲ್ಕು ಘಟಕಗಳು ಭಾರತ ಮತ್ತು ಬಾಂಗ್ಲಾದೇಶಗಳ ನಡುವಿನ ಸಂಬಂಧದಲ್ಲಿ ಉಂಟಾಗಿರುವ ಏರಿಳಿತಗಳ ಸವಿವರಣೆಯನ್ನು ನೀಡಲಾಗಿದೆ.

**ಬ್ಲಾಕ್ –5ರ ಪರಿಚಯ:–**

ಬ್ಲಾಕ್ ಐದರಲ್ಲಿ ಒಟ್ಟು ಆರು ಘಟಕಗಳಿದ್ದು, ಅವುಗಳನ್ನು 18 ರಿಂದ 22 ಎಂದು ವಿಭಾಗಿಸಲಾಗಿದೆ. ಘಟಕ 18ರಲ್ಲಿ ಭಾರತ ಹಾಗು ಶ್ರೀಲಂಕಾಗಳ ನಡುವಿನ ಸಾಮಾನ್ಯ ಸಂಬಂಧಗಳು ಹಾಗು ವಿರೋಧಾಂಶಗಳನ್ನು ವಿವರಿಸಲಾಗಿದೆ. ಘಟಕ 19 ಶ್ರೀಲಂಕಾದಲ್ಲಿನ ಜನಾಂಗೀಯ ಸಮಸ್ಯೆಯ ಬಗ್ಗೆ ಸಂಬಂಧಿಸಿದ್ದಾಗಿದ್ದು, ಎರಡು ರಾಷ್ಟ್ರಗಳ ಸಂಬಂಧದ ಮೇಲೆ ಉಂಟಾದ ಪರಿಣಾಮಗಳನ್ನು ಕುರಿತು ಚರ್ಚಿಸಲಾಗಿದೆ. ಘಟಕ 20ರಲ್ಲಿ ಶಾಸ್ತ್ರಿ – ಸಿರಿಮಾವೊ ಒಪ್ಪಂದದ ನಿಯಮಗಳು ಹಾಗು ಮಹತ್ವವನ್ನು ಚರ್ಚಿಸಲಾಗಿದೆ. ಘಟಕ 21 ರಲ್ಲಿ 1987ರ ಭಾರತ ಮತ್ತು ಶ್ರೀಲಂಕಾ ನಡುವೆ ಆದ ಒಪ್ಪಂದದ ನಿಯಮಗಳು ಹಾಗು ಮುಖ್ಯಾಂಶಗಳನ್ನು ವಿಶ್ಲೇಷಿಸಲಾಗಿದೆ. ಘಟಕ 22 ರಲ್ಲಿ ಭಾರತ ಮತ್ತು ಶ್ರೀಲಂಕಾ ರಾಷ್ಟ್ರಗಳ ನಡುವಿನ ಇತ್ತೀಚಿನ ಸಂಬಂಧವನ್ನು ಚರ್ಚಿಸಲಾಗಿದೆ. ಒಟ್ಟಾರೆ ಈ ಬ್ಲಾಕ್ ಐದರ ಐದೂ ಘಟಕಗಳು ಭಾರತ ಮತ್ತು ಶ್ರೀಲಂಕಾ ರಾಷ್ಟ್ರಗಳ ನಡುವಿನ ಸಂಬಂಧವನ್ನು ಪರಿಶೀಲಿಸುವುದಾಗಿದೆ.

**ಬ್ಲಾಕ್ –6ರ ಪರಿಚಯ:–**

ಬ್ಲಾಕ್ ಆರರಲ್ಲಿ ಒಟ್ಟು ಮೂರು ಘಟಕಗಳಿದ್ದು, ಅವುಗಳನ್ನು 23 ರಿಂದ 25 ಎಂದು ವಿಭಾಗಿಸಲಾಗಿದೆ. ಘಟಕ 23ರಲ್ಲಿ ಭಾರತ ಮತ್ತು ನೇಪಾಳ ರಾಷ್ಟ್ರಗಳ ನಡುವಿನ ಸಂಬಂಧ ಕುರಿತು ವಿವರಿಸಲಾಗಿದೆ. ಈ ಸಂಬಂಧದಲ್ಲಿ ಎರಡು ರಾಷ್ಟ್ರಗಳ ನಡುವಿನ ಸಾಮಾನ್ಯ ಸಂಸ್ಕೃತಿ ಹಾಗು ಧಾರ್ಮಿಕ ಪದ್ಧತಿಗಳು ಹೇಗೆ ಈ ರಾಷ್ಟ್ರಗಳ ನಡುವಿನ ಸಂಬಂಧದಲ್ಲಿ ಪಾತ್ರವಹಿಸಿವೆ ಎಂಬುದನ್ನು ವಿವರಿಸಲಾಗಿದೆ. ಘಟಕ 24ರಲ್ಲಿ ಭಾರತ ಮತ್ತು ನೇಪಾಳ ನಡುವೆ 1950ರಲ್ಲಿ ನಡೆದಂತ ಒಪ್ಪಂದದ ಮುಖ್ಯಾಂಶಗಳು ಹಾಗು ಮಹತ್ವವನ್ನು ವಿವರಿಸಲಾಗಿದೆ. ಇದರ ಜೊತೆಗೆ ನೇಪಾಳದಲ್ಲಿ ಆದಂತಹ ರಾಜಕೀಯ ಬೆಳವಣಿಗೆ, ಈ ಬೆಳವಣಿಗೆಗೆ ಎರಡು ರಾಷ್ಟ್ರಗಳ ಪ್ರತಿಕ್ರಿಯೆ ಮೊದಲಾದ ಅಂಶಗಳನ್ನು ವಿವರಿಸಲಾಗಿದೆ. ಘಟಕ 25ರಲ್ಲಿ ಭಾರತ ಮತ್ತು ನೇಪಾಳ ರಾಷ್ಟ್ರಗಳ ಸಂಬಂಧದಲ್ಲಿನ ಸಹಕಾರಿ ಕ್ಷೇತ್ರಗಳನ್ನು ಗುರುತಿಸಲಾಗಿದೆ. ಇದರ ಜೊತೆಯಲ್ಲಿಯೇ

ಎರಡೂ ರಾಷ್ಟ್ರಗಳ ನಡುವಿನ ಭಿನ್ನಾಭಿಪ್ರಾಯಗಳಿಗೆ ಕಾರಣವಾದ ಅಂಶಗಳನ್ನು ಪರಿಶೀಲಿಸಿ ಎರಡು ರಾಷ್ಟ್ರಗಳ ನಡುವಿನ ಇತ್ತೀಚಿನ ಬೆಳವಣಿಗೆಗಳನ್ನು ನಮೂದಿಸಲಾಗಿದೆ. ಒಟ್ಟಾರೆ ಈ ಬ್ಲಾಕ್ ಭಾರತ ಹಾಗೂ ನೇಪಾಳ ರಾಷ್ಟ್ರಗಳ ನಡುವಿನ ಸಂಬಂಧದ ಸವಿವರವನ್ನು ನೀಡುತ್ತದೆ.

## ಬ್ಲಾಕ್ –7ರ ಪರಿಚಯ:–

ಬ್ಲಾಕ್ ಏಳರಲ್ಲಿ ಒಟ್ಟು ಮೂರು ಘಟಕಗಳಿದ್ದು, ಅವುಗಳು 26 ರಿಂದ 28 ಘಟಕಗಳು ಎಂದು ವಿಂಗಡಿಸಲಾಗಿದೆ. ಘಟಕ 26ರಲ್ಲಿ ಭಾರತ ಮತ್ತು ಭೂತಾನ್ ರಾಷ್ಟ್ರಗಳ ನಡುವಿನ ಸಂಬಂಧದ ಬಗ್ಗೆ ವಿವರಿಸಲಾಗಿದೆ. ಮುಖ್ಯವಾಗಿ 1949ರಲ್ಲಿ ಭಾರತ ಮತ್ತು ಭೂತಾನ್ ನಡುವೆ ಆದಂತಹ ಒಪ್ಪಂದ ಹಾಗು ಅದರ ಮಹತ್ವವನ್ನು ಚರ್ಚಿಸಲಾಗಿದೆ. ಇದಲ್ಲದೆ ಭಾರತವು ಭೂತಾನ್‌ನ ಅಭಿವೃದ್ಧಿಗೆ ಯಾವ ರೀತಿ ಸ್ಪಂದಿಸಿತು ಹಾಗು ಅದರ ಪರಿಣಾಮವೇನಾಯಿತು ಎಂಬುದರ ಆಧಾರದ ಮೇಲೆ ಇತ್ತೀಚಿನವರೆಗೆ ಎರಡು ರಾಷ್ಟ್ರಗಳ ನಡುವಿನ ಸಂಬಂಧವನ್ನು ವಿವರಿಸಲಾಗಿದೆ. ಘಟಕ 27ರಲ್ಲಿ ಭಾರತ ಮತ್ತು ಸಾರ್ಕ್ ಎಂಬ ಶೀರ್ಷಿಕೆಯಡಿಯಲ್ಲಿ ಸಾರ್ಕ್‌ನ ಹಿನ್ನೆಲೆ, ಉಗಮ, ಸಾರ್ಕ್‌ನಲ್ಲಿ ಭಾರತದ ಸ್ಥಾನ, ಭಾರತ ಮತ್ತು ಸಾರ್ಕ್‌ನ ಕಾರ್ಯ, ಭಾರತದ ಬಗ್ಗೆ ಸಾರ್ಕ್ ರಾಷ್ಟ್ರಗಳ ಭಯಕ್ಕೆ ಕಾರಣಗಳು ಮೊದಲಾದವುಗಳನ್ನು ಚರ್ಚಿಸಲಾಗಿದೆ. ಘಟಕ 28ರಲ್ಲಿ ಭಾರತವು ತನ್ನ ನೆರೆಯ ರಾಷ್ಟ್ರಗಳೊಡನೆ ಯಾವ ರೀತಿಯ ಸಂಬಂಧವನ್ನು ಹೊಂದಿದೆ ಎಂಬುದನ್ನು ಮೌಲೀಕರಿಸಿ ವಿವರಿಸಲಾಗಿದೆ.

**ನಿಮಗೆಲ್ಲಾ ಶುಭವನ್ನು ಹಾರೈಸುವ**


**ಅಧ್ಯಕ್ಷರು**
**ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**
**ಮುಕ್ತಗಂಗೋತ್ರಿ, ಮೈಸೂರು**

# ಘಟಕ -1 ಭಾರತ ವಿದೇಶಾಂಗ ನೀತಿಯ ವಿಕಾಸ

## ರಚನೆ

1.0 ಉದ್ದೇಶಗಳು

1.1 ಪ್ರಸ್ತಾವನೆ

1.2 ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಬ್ರಿಟೀಷ್ ಸರ್ಕಾರ ಮತ್ತು ಭಾರತದ ವಿದೇಶಾಂಗ ನೀತಿ

1.3 ಭಾರತದ ವಿದೇಶಾಂಗ ನೀತಿಯ ರಚನೆಯಲ್ಲಿ ಜವಹರಲಾಲ್ ನೆಹರೂರವರ ಪಾತ್ರ

1.4 ಗಾಂಧಿ,ನೆಹರು ಮತ್ತು ಭಾರತದ ವಿದೇಶಾಂಗ ನೀತಿ

1.5 ಸಮಾಪ್ತಿಗೊಳಿಸೋಣ

1.6 ಕಠಿಣ ಪದಗಳು

1.7 ಕೆಲವು ಉಪಯುಕ್ತ ಗ್ರಂಥಗಳು

1.8 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 1.0 ಉದ್ದೇಶಗಳು

ಈ ಪಾಠವನ್ನು ಓದುವುದರಿಂದ ನಿಮಗೆ, ಈ ಕೆಳಕಂಡ ವಿಷಯಗಳು ಅರ್ಥವಾಗುತ್ತದೆ.

* ಭಾರತ ವಿದೇಶಾಂಗ ನೀತಿಯ ವಿಕಾಸ
* ಸ್ವಾತಂತ್ರ್ಯ ಪೂರ್ವದಲ್ಲಿ ಸುಮಾರು 62 ವರ್ಷಗಳ ಅವಧಿಯಲ್ಲಿ ಅಂತರರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದಂತೆ, ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ನಿಲುವು.
* ಭಾರತದ ವಿದೇಶಾಂಗ ನೀತಿಯ ಆಧಾರ ಮತ್ತು ನಿರೂಪಣೆಯಲ್ಲಿ ಜವಹರಲಾಲ್ ನೆಹರೂರವರು ವಹಿಸಿದ ಪಾತ್ರ.

## 1.1 ಪ್ರಸ್ತಾವನೆ

ಭಾರತದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿನ ನಿರ್ಣಾಯಕ ಅಂಶಗಳು ಮತ್ತು ಪ್ರೇರಣೆಗಳು ಹಲವಾರು ಸಮ್ಮಿಶ್ರಿತ ಅಂಶಗಳಿಂದ ಕೂಡಿದೆ. ಬುದ್ಧ ಮತ್ತು ಅಶೋತ್ತರಗಳನ್ನೊಳಗೊಂಡ ಪ್ರಾಚೀನ ಭಾರತದ ಪರಂಪರೆ, ಸ್ವಾತಂತ್ರ ಸಮರದ ಮೇಲೆ ಗಾಂಧೀಜಿಯವರ ಪ್ರಭಾವ, ರಾಷ್ಟ್ರ ಹಿತಾಸಕ್ತಿ ಹಾಗೂ ಅಂತರರಾಷ್ಟ್ರೀಯ ಸ್ಥಿತಿಯು ಎರಡನೇ ಮಹಾಯುದ್ಧದ ನಂತರದಲ್ಲಿ ಬೆಳೆದು ಬಂದ ರೀತಿ, ಇವೆಲ್ಲವೂ ಭಾರತದ ವಿದೇಶಾಂಗ ನೀತಿಯನ್ನು ಪ್ರಭಾವಿಸಿದವು. ಔಪಚಾರಿಕವಾಗಿ ಭಾರತದ ವಿದೇಶಾಂಗ ನೀತಿಯ ಧೋರಣೆಗಳನ್ನು 1947ರ ನಂತರಕ್ಕೆ ಗುರುತಿಸಿದರೂ ಕೂಡ, ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಅವೆಲ್ಲವುಗಳ ಮೇಲೆ ಭಾರತದ ರಾಷ್ಟ್ರೀಯ ಕಾಂಗ್ರೆಸ್ ತನ್ನದೇ ಆದ ನಿರ್ದಿಷ್ಟ ನಿಲುವನ್ನು ಹಾಕಿಕೊಂಡಿತ್ತು. ವಿಶ್ವಶಾಂತಿ, ವಸಾಹತುಶಾಹಿ ಮತ್ತು ವರ್ಣಭೇದ ನೀತಿ ವಿರೋಧವು ಮುಖ್ಯವಾದ ವಿಷಯಗಳಿಗಾಗಿ ಅವೆಲ್ಲವುಗಳ ಬಗ್ಗೆ ಕಾಂಗ್ರೆಸ್ ತನ್ನ ನಿಲುವನ್ನು ಹಿಂದೆಯೇ ಸ್ಪಷ್ಟಪಡಿಸಿತ್ತು. ವಿದೇಶಾಂಗ ನೀತಿಯ ಆಧಾರ/ತಳಹದಿಯನ್ನು ಹಾಗೂ ಅದರ ನೈತಿಕ ಆಯಾಮಗಳನ್ನು ನಿರ್ಧರಿಸುವಲ್ಲಿ ಯಾರಾದರೂ ಒಬ್ಬ ವ್ಯಕ್ತಿಯು ಅಮೂಲಾಗ್ರ ಪಾತ್ರವನ್ನು ನಿಭಾಯಿಸಿದ್ದರೆ ಅವರು ನಿಸ್ಸಂದೇಹವಾಗಿ ಪಂಡಿತ್ ಜವಹರಲಾಲ್ ನೆಹರೂರವರು.

ಈ ಮೇಲಿನ ಅಂಶಗಳನ್ನು ಮನ್ನಿಸಿದರೆ, ಆ ಕೆಳಕಂಡ ಮೂರು ವಿಷಯಗಳು ಹೊರಹೊಮ್ಮುತ್ತವೆ.

1. ಸ್ವಾತಂತ್ರಪೂರ್ವದಲ್ಲಿಯೂ ಭಾರತದ ವಿದೇಶಾಂಗ ನೀತಿಯ ಕಲ್ಪನೆ ಹಾಗೂ ತತ್ವಗಳನ್ನು ಗುರುತಿಸಲಾಗಿತ್ತು.
2. ಎರಡನೇ ಮಹಾಯುದ್ಧದ ನಂತರದ ವಿಶ್ವದಲ್ಲಿ ಭಾರತವು ತನ್ನದೇ ಆದ ವೈಶಿಷ್ಟತೆಯ ಪಾತ್ರವನ್ನು ನಿಭಾಯಿಸಲು ನೆಹರೂರವರು ತಮ್ಮ ಅಪಾರ ಅನುಭವದ ಧಾರೆ ಎರೆದಿದ್ದರು.
3. ರಾಷ್ಟ್ರ ಹಿತಾಸಕ್ತಿಯನ್ನು ಕಾಪಾಡುವಲ್ಲಿಯೂ, ಭಾರತದ ವಿದೇಶಾಂಗ ನೀತಿಯ ನೀತಿ ತತ್ವಗಳನ್ನು ಮತ್ತು ಮೌಲ್ಯಗಳನ್ನು ಎತ್ತಿಹಿಡಿಯಿತು.

## 1.2 ಬ್ರಿಟೀಷರ ಕಾಲದಲ್ಲಿ ಭಾರತದ ವಿದೇಶಾಂಗ ನೀತಿಯ ಮತ್ತು ರಾಷ್ಟ್ರೀಯ ಕಾಂಗ್ರೆಸ್

ಈ ಹಿಂದೆಯೇ ತಿಳಿಸಿರುವಂತೆ ಭಾರತದ ವಿದೇಶಾಂಗ ನೀತಿಯನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕಾದರೆ, ರಾಷ್ಟ್ರೀಯ ಕಾಂಗ್ರೆಸ್ಸಿನ ಪಾತ್ರವನ್ನು, ವಿಶೇಷವಾಗಿ ಅದಪ ಅಸ್ತಿತ್ವದಿಂದ, ಅಧ್ಯಯನ ಮಾಡಬೇಕಾಗುತ್ತದೆ. ನಾರ್ಮನ್ ಡಿ.ಪಾಮಾರ್‌ರವರು ತಿಳಿಸಿರುವಂತೆ ಭಾರತದ ವಿದೇಶಾಂಗ ನೀತಿಯ ಬೇರು, ರಾಷ್ಟ್ರೀಯ ಕಾಂಗ್ರೆಸ್ ತನ್ನ 62 ವರ್ಷಗಳ ಜೀವಮಾನದಲ್ಲಿ ಅಂತರರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದಂತೆ ಹೇಗೆ ಸ್ಪಂದಿಸಿತೆನ್ನುವುದರಿಂದ ತಿಳಿಯುತ್ತದೆ.

ರಾಷ್ಟ್ರೀಯ ಕಾಂಗ್ರೆಸ್ ಯಾವ ರೀತಿಯಲ್ಲಿ ಬಾಹ್ಯ ವಿಷಯಗಳಿಗೆ ಪ್ರತಿಕ್ರಿಯಿಸಿತೆನ್ನುವುದನ್ನು ಅದು ನಿರೂಪಿಸಿದ ನಿಲುವಳಿಗಳನ್ನು ವಿಶ್ಲೇಷಿಸುವುದರಿಂದ ಅರಿವಾಗುತ್ತದೆ. ಅಂದಿನ ಕಾಂಗ್ರೆಸ್ಸಿನ ನಿಲುವುಗಳು ವಿದೇಶಾಂಗ ನೀತಿಯ ಮೂಲಭೂತ ತತ್ವಗಳನ್ನು ರೂಪಿಸಿದವು.

ಬ್ರಿಟೀಷರು ಬರ್ಮದ ಮೇಲ್ಭಾಗವನ್ನು ಕಬಳಿಸಿಕೊಂಡಿದ್ದನ್ನು ರಾಷ್ಟ್ರೀಯ ಕಾಂಗ್ರೆಸ್ 1885ರಲ್ಲಿ ತನ್ನ ಮೊದಲ ಅಧಿವೇಶನದಲ್ಲಿ ಖಂಡಿಸಿತು.

ಬ್ರಿಟೀಷ್ ಸರ್ಕಾರವು ತನ್ನ ಸಾಮ್ರಾಜ್ಯಶಾಹೀ ನೀತಿಗೆ ಅನುಗುಣವಾಗಿ, ಭಾರತದ ಸ್ವಾಭಾವಿಕ ರಕ್ಷಣಾ ರೇಖೆಗಳ ಹೊರಗೆ ನಡೆಸುತ್ತಿದ್ದ ಮಿಲಿಟರಿ ಕಾರ್ಯಾಚರಣೆಯನ್ನು 1892ರಲ್ಲಿ ವಿರೋಧಿಸಿತು.

1904ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಬ್ರಿಟೀಷ್ ಸರ್ಕಾರವು ಭಾರತವನ್ನು ನೆಲೆಯಾಗಿ ಉಪಯೋಗಿಸಿಕೊಂಡು ಟಿಬೆಟ್, ಬರ್ಮಾ, ಆಫ್ಘಾನಿಸ್ತಾನ್ ಮತ್ತು ಪರ್ಷಿಯ ವಿರುದ್ಧ ನಡೆಸುತ್ತಿದ್ದ ಮಿಲಿಟರಿ ಕಾರ್ಯಾಚರಣೆಯನ್ನು ವಿರೋಧಿಸಿತು. ಬ್ರಿಟೀಷ್ ಸರ್ಕಾರದ ಚಟುವಟಿಕೆಗಳು ಆಕ್ರಮಣಕಾರಿ ಎಂದು, ಭಾರತವನ್ನು ಅಂತಹ ಕಾರ್ಯಗಳಲ್ಲಿ ಪಾಲುದಾರರನ್ನಾಗಿ ಮಾಡಬಾರದೆಂದು ಕಾಂಗ್ರೆಸ್ ತನ್ನ ನಿಲುವಳಿಯ ಮೂಲಕ ಪ್ರತಿಭಟಿಸಿತು. ಈ ತರಹದ ವಿಶ್ಲೇಷಣೆಯನ್ನು ರಾಷ್ಟ್ರೀಯ ಕಾಂಗ್ರೆಸ್ಸಿನ ವಿದೇಶಾಂಗ ಕಾರ್ಯಾದರ್ಶಿಯಾಗಿದ್ದ ಡಾ||ಎನ್.ವಿ.ರಾಜ್‌ಕುಮಾರ್‌ರವರು ನೀಡಿದ್ದಾರೆ.

1920ರಲ್ಲಿ ಐರಿಶರು ತಮ್ಮ ಸ್ವಾತಂತ್ರಕ್ಕಾಗಿ ನಡೆಸುತ್ತಿದ್ದ ಹೋರಾಟಕ್ಕೆ ಕಾಂಗ್ರೆಸ್ ತನ್ನ ಸಹಾಯಕ ಸಂದೇಶವನ್ನು ಕಳುಹಿಸಿತು.

1921ರಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಮ್ಮೇಳನವು ಭಾರತದ ವಿದೇಶಾಂಗ ನೀತಿಯ ಚರಿತ್ರೆಯಲ್ಲಿ ಒಂದು ಮೈಲಿಗಲ್ಲಾಯಿತು.

ಎ) ಮೊದಲ ಬಾರಿಗೆ ರಾಷ್ಟ್ರೀಯ ಕಾಂಗ್ರೆಸ್ ಸಾಮಾನ್ಯ ನಿಲುವಳಿಯನ್ನು ಅಂಗೀಕರಿಸಿ ಅದರ ಮೂಲಕ ಅಂದಿನ ಬ್ರಿಟಿಷ್ ಸರ್ಕಾರವು ಭಾರತದ ಅಭಿಪ್ರಾಯಗಳನ್ನು ಯಾವ ರೀತಿಯಲ್ಲಿಯೂ ಪ್ರತಿನಿಧಿಸುತ್ತಿಲ್ಲ ಎಂದು ಘೋಷಿಸಿತು.

ಬಿ) ಸಮ್ಮೇಳನವು ಸ್ವತಂತ್ರ ಭಾರತದ ವಿದೇಶಾಂಗ ನೀತಿಯ ಆಧಾರ ಸ್ತಂಭ ಹಾಗೂ ತತ್ವಗಳಾದ ಸಾಮ್ರಾಜ್ಯಶಾಹಿ ವಿರೋಧ ಉದಾರ ಅಂತರರಾಷ್ಟ್ರೀಯತೆ ಇತ್ಯಾದಿಗಳನ್ನು ಮುಂದಿಟ್ಟಿತು.

ಸ್ವತಂತ್ರ ಭಾರತದ ವಿದೇಶಾಂಗ ನೀತಿಯ ಮೂಲಭೂತ ತತ್ವಗಳನ್ನು ಈ ಮೇಲೆ ತಿಳಿಸಿದ ನಿಲುವಳಿಯು ಯಾವ ರೀತಿಯಲ್ಲಿ ಪ್ರಭಾವಿಸಿತೆನ್ನುವುದನ್ನು ಕೆಳಕಂಡ ವಿಶ್ಲೇಷಣೆಯಿಂದ ಅರಿತುಕೊಳ್ಳಬಹುದು.

1925ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಒಂದು ನಿಲುವಳಿಯನ್ನು ಅಂಗೀಕರಿಸಿ, ಅದರ ಮುಖೇನ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ವಿದೇಶಾಂಗ ಇಲಾಖೆಯನ್ನು ಸ್ಥಾಪಿಸಬೇಕೆಂದು ಆದೇಶಿಸಿತು. ಹೊರದೇಶಗಳಲ್ಲಿ ಭಾರತೀಯರ ಹಿತಾಸಕ್ತಿಗಳನ್ನು ಮತ್ತು ಕಾಂಗ್ರೆಸ್ಸಿನ ನಿಲುವುಗಳ ಬಗ್ಗೆ ಅರಿವು ಮೂಡಿಸುವುದು. ವಿದೇಶಾಂಗ ಇಲಾಖೆಯ ಕೆಲಸವಾಯಿತು. ಮೂರು ವರ್ಷಗಳ ನಂತರದಲ್ಲಿ 1928ರಲ್ಲಿ ವಿದೇಶಾಂಗ ಇಲಾಖೆ ಅಸ್ತಿತ್ವಕ್ಕೆ ಬಂದಿತು. ನೆಹರೂರವರು ಅದರ ಮುಖ್ಯ ಕಾರ್ಯನಿರ್ವಾಹಕರಾದರು. 20ನೇ ಶತಮಾನದಲ್ಲಿ ಯಾವ ರಾಷ್ಟ್ರವೂ ಅಥವಾ ನಾಯಕರೂ ಕೂಡ ಇಂತಹ ಸಾಧನೆಯನ್ನು ಮಾಡಿರಲಿಲ್ಲ.

1927 ರ ಮದ್ರಾಸ್ ಅಧಿವೇಶನದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಒಂದು ನಿಲುವಳಿಯನ್ನು ಅಂಗೀಕರಿಸಿ ಅದರ ಮೂಲಕ ಬ್ರಿಟೀಷ್ ಸರ್ಕಾರವು ಭಾರತದ ಸೈನಿಕರನ್ನು ಚೀನಾ, ಪರ್ಸಿಯಾ ಮತ್ತು ಮೆಸುಪುಟೋಮಿಯಾ ರಾಷ್ಟ್ರಗಳಲ್ಲಿ ಉಪಯೋಗಿಸಕೂಡದೆಂದು

ಎಚ್ಚರಿಸಿತು. 30 ವರ್ಷಗಳ ತರುವಾಯ ಜವಹರಲಾಲ್‌ರವರು 'ಮದ್ರಾಸ್ ಅಧಿವೇಶನವು ಭಾರತದ ವಿದೇಶಾಂಗ ನೀತಿಯ ಅಡಿಪಾಯವನ್ನು ಹಾಕಿತು' ಎಂದು ಘೋಷಿಸಿದರು.

1928ರಲ್ಲಿ ಕಲ್ಕತ್ತಾದಲ್ಲಿ ಜರುಗಿದ ಅಧಿವೇಶನದಲ್ಲಿ, ಈಜಿಪ್ಟ್, ಸಿರಿಯಾ, ಪ್ಯಾಲೆಸ್ಟೇನ್ ಮತ್ತು ಇರಾಕ್‌ನ ಪ್ರಜೆಗಳು ಸಾಮ್ರಾಜ್ಯಶಾಹೀ ರಾಷ್ಟ್ರಗಳ ವಿರುದ್ಧ ನಡೆಸುತ್ತಿದ್ದ ಹೋರಾಟಕ್ಕೆ, ರಾಷ್ಟ್ರೀಯ ಕಾಂಗ್ರೆಸ್ ತನ್ನ ಬೆಂಬಲ ಮತ್ತು ಶುಭಾಶಯಗಳನ್ನು ಸೂಚಿಸಿತು. ಈ ಎಲ್ಲಾ ನಿಲುವಳಿಗಳಿಂದ ಸಾಬೀತಾಗುವುದೇನೆಂದರೆ 'ಭಾರಹತದ ನಾಯಕರು ಯುರೋಪ್ ಸಾಮ್ರಾಜ್ಯಶಾಹೀ ರಾಷ್ಟ್ರಗಳ ವಿರುದ್ಧ ಏಷ್ಯಾದಾದ್ಯಂತ ಚಳುವಳಿಯನ್ನು ಪ್ರಾರಂಭಿಸಲು ಸನ್ನದ್ಧರಾಗುತ್ತಿದ್ದರೆಂಬುದು'(ಡಾ||ರಾಜ್‌ಕುಮಾರ್ ಎನ್.ವಿ)

1930ರ ಹಲವಾರು ನಿಲುವಳಿಗಳ ಮೂಲಕ, ನಾಜಿಸ್ಟ್ ಮತ್ತು ಫಾಸಿಸ್ಟ್ ನಾಯಕರ ಆಕ್ರಮಣಕಾರೀ ಕೃತ್ಯಗಳನ್ನು ಕಾಂಗ್ರೆಸ್ ಬಲವಾಗಿ ಖಂಡಿಸಿತು. ತ್ರಿಪುರದಲ್ಲಿ ನಡೆದ ಅಧಿವೇಶನದಲ್ಲಿ (1939) ರಾಷ್ಟ್ರೀಯ ಕಾಂಗ್ರೆಸ್ ಬ್ರಿಟೀಷರ ವಿದೇಶಾಂಗ ನೀತಿಯಿಂದ ತಮ್ಮನ್ನು ತಾವು ಸಂಪೂರ್ಣವಾಗಿ ಬೇರ್ಪಡಿಸಿಕೊಂಡಿತು. ನಿಲುವಳಿಯ ತಿರುಳು ಹೀಗಿತ್ತು. 'ಸಾಮ್ರಾಜ್ಯಶಾಹೀ ಮತ್ತು ಪಾಜೀ ತತ್ವಗಳಿಂದ ಹೊರಗಿದ್ದು, ಶಾಂತಿ ಮತ್ತು ಸ್ವತಂತ್ರಕ್ಕಾಗಿ, ಕಾಂಗ್ರೆಸ್ ತನ್ನದೇ ಆದ ವಿದೇಶಾಂಗ ನೀತಿಯನ್ನು ಅತಿ ಶೀಘ್ರುವಾಗಿ ನಿರೂಪಿಸಿಕೊಳ್ಳಬೇಕಾಗಿದೆ".

ಎರಡನೇ ಮಹಾಯುದ್ಧವು ಪ್ರಾರಂಭವಾದಾಗ (1939) ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಒಂದು ನಿಲುವಳಿಯನ್ನು ಈ ಕೆಳಕಂಡಂತೆ ಅಂಗೀಕರಿಸಿತು.

'ಯುದ್ಧ ಮತ್ತು ಶಾಂತಿಗೆ ಸಂಬಂಧಿಸಿದ ವಿಷಯಗಳಲ್ಲಿ ಭಾರತೀಯರು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಬೇಕು. ಭಾರತವು ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರದ ಪರವಾಗಿದೆ. ತಾವೇ ಸ್ವಾತಂತ್ರ ಮತ್ತು ಪ್ರಜಾಪ್ರಭುತ್ವರೆಂದು ಹೋರಾಡುತ್ತಿರುವಾಗ ಯುದ್ಧದಲ್ಲಿ ಭಾರತ ತನ್ನನ್ನು ತಾನು ತೊಡಗಿಸಿಕೊಳ್ಳಲಾರದು'.

ಈ ನಿಲುವಳಿಗೆ ಪೂರಕವಾಗಿ ಬ್ರಿಟೀಷ್ ಪ್ರಾಂತ್ಯಗಳಲ್ಲಿದ್ದ ಕಾಂಗ್ರೆಸ್ ಮಂತ್ರಿಮಂಡಲಗಳು ಸರ್ಕಾರದಿಂದ ರಾಜೀನಾಮೆಕೊಟ್ಟವು.

ಗಾಂಧೀಜಿಯವರು 'ಅಹಿಂಸೆಯು ಯುದ್ಧಕ್ಕೆ ಪರ್ಯಾಯ' ಎಂದು ಬಲವಾಗಿ ವಾದಿಸಿದರು. 'ಭಾರತ ಬಿಟ್ಟು ತೊಲಗಿ'(1942) ನಿಲುವಳಿಯು ಕಾಂಗ್ರೆಸ್ಸಿನ ಸ್ವಾತಂತ್ರಪರ ಹೋರಾಟವನ್ನು ಪೂರ್ಣವಾಗಿ ಪ್ರತಿಬಿಂಬಿಸಿತು.

1945ರಲ್ಲಿ ಕಾಂಗ್ರೆಸ್ ನಾಯಕರು ಜೈಲಿನಿಂದ ಬಿಡುಗಡೆಯಾದಾಗ, ರಾಷ್ಟ್ರೀಯ ಕಾಂಗ್ರೆಸ್ ಸಂಗ್ರಾಮವನ್ನು ಪುನರಾರಂಭಿಸಿತು. ಜೂನ್ 1945ರ ಚಳುವಳಿಯು ಈ ಕೆಳಕಂಡಂತೆ ಘೋಷಿಸಿತು.

ಅ) ವಿಶ್ವಶಾಂತಿ ಮತ್ತು ನೂತನ ಅಂತರರಾ,ಟ್ರೀಯ ವ್ಯವಸ್ಥೆಯು ವಿಶ್ವದ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಅವಲಂಬಿಸಿರುತ್ತದೆ.

ಆ) ಎಲ್ಲಾ ಮಾರ್ಗಗಳನ್ನು ಅನುಸರಿಸಿ, ವಿಶ್ವದಾದ್ಯಂತ ಸಾಮ್ರಾಜ್ಯಶಾಹೀ ರಾಷ್ಟ್ರಗಳ ಹಿಡಿತವನ್ನು ತೊಡೆದುಹಾಕುವುದು.

ವಿಶ್ವಸಂಸ್ಥೆಯ ಸ್ಥಾಪನೆಯನ್ನು ಕಾಂಗ್ರೆಸ್ ಸ್ವಾಗಸಿತಿದಾದರೂ, ಸಂಸ್ಥೆಯ ರಚನೆಯ ಬಗ್ಗೆ ಎರಡು ಮುಖ್ಯ ಆಪೇಕ್ಷಣೆಗಳನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಜುಲೈ 1945ಲ್ಲಿ ಮುಂದಿಟ್ಟಿತು.

1. ಬೃಹತ್ ರಾಷ್ಟ್ರಗಳಿಗೆ ನೂತನ ಸಂಸ್ಥೆಯಲ್ಲಿ ಕಾದಿಡಲಾದ ಪ್ರಬಲ ಸ್ಥಾನದ ವಿರೋಧ, ಬೃಹತ್ ರಾಷ್ಟ್ರಗಳು ತಾವೇ ರಚಿಸಿದ ಸಂಸ್ಥೆಯಲ್ಲಿ ತಮಗೆ ಬಲಾಢ್ಯ ಸ್ಥಾನ ದೊರಕಿಸಿಕೊಳ್ಳುವುದನ್ನು ಕಾಂಗ್ರೆಸ್ ವಿರೋಧಿಸಿತು. ಇದರಿಂದಾಗಿ ಸಣ್ಣ ರಾಷ್ಟ್ರಗಳು

ಯಾವುದೇ ತರಹದ ಪರಿಣಾಮಕಾರಿ ಪಾತ್ರವನ್ನು ವಿಶ್ವಸಂಸ್ಥೆಯಲ್ಲಿ ವಹಿಸಲಾಗುವುದಿಲ್ಲವೆಂಬ ಶಂಕೆಯನ್ನು ಕಾಂಗ್ರೆಸ್ ನೇತಾರರು ವ್ಯಕ್ತಪಡಿಸಿದರು.

2. ವಿಶ್ವಸಂಸ್ಥೆಯಲ್ಲಿ ಪ್ರಣಾಳಿಕೆಯಲ್ಲಿ ಸ್ವಯಂ ಆಳ್ವಿಕೆರಹಿತ ಗಡಿ ಪ್ರದೇಶಗಳ ಬಗ್ಗೆ ಅಸ್ಪಷ್ಟ ಮತ್ತು ಅಸಮಾಧಾನಕರ ಘೋಷಣೆಗಳು ಮಾಡಿವೆಯೆಂದು ಕಾಂಗ್ರೆಸ್ ಟೀಕಿಸಿತು. ಆದರೆ ದೃಷ್ಟಿಯಲ್ಲಿ ಸಂಪೂರ್ಣ ಸ್ವಾತಂತ್ರವೇ ಸೂಕ್ತವಾದ ಪರಿಹಾರವಾಗಿತ್ತು.

1945 ಮತ್ತು 1946ರಲ್ಲಿ ಮಂಡಿಸಿದ ಕೆಲವು ನಿಲುವಳಿಗಳ ಮೂಲಕ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಣುಬಾಂಬ್‌ನ ತಯಾರಿಕೆ, ಉಪಯೋಗ ಹಾಗೂ ಅದರ ಪರಿಣಾಮದ ಬಗ್ಗೆ ತನ್ನ ಆತಂಕವನ್ನು ವ್ಯಕ್ತಪಡಿಸಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಶಕ್ತಿ ಮತ್ತು ದಬ್ಬಾಳಿಕೆಯ ಮೂಲಕ ಬಿಕ್ಕಟ್ಟನ್ನು ಉಂಟುಮಾಡಿ, ವಸಾಹತು ಪ್ರದೇಶಗಳನ್ನು ತಮ್ಮ ಅನುಯಾಯಿಗಳನ್ನಾಗಿ ಮಾಡಿಕೊಳ್ಳುವ ಬೃಹತ್ ರಾಷ್ಟ್ರಗಳ ಪ್ರವೃತ್ತಿಯನ್ನು ಕಾಂಗ್ರೆಸ್ ತೀವ್ರವಾಗಿ ಖಂಡಿಸಿತು.

ಏಷ್ಯಾ ಮತ್ತು ಆಫ್ರಿಕಾ ಖಂಡಗಳ ಮೇಲೆ ವಿದೇಶೀಯರ ದಬ್ಬಾಳಿಕೆ ಅಂತ್ಯವಾಗಬೇಕೆಂದು ಕಾಂಗ್ರೆಸ್ ಆಗ್ರಹಪಡಿಸಿತು. ಈ ನಿಟ್ಟಿನಲ್ಲಿ ಇಂಡೋನೇಷ್ಯ, ಇಂಡೋ-ಚೀನಾ ಪ್ರದೇಶಗಳಲ್ಲಿನ ಸ್ವಾತಂತ್ರ ಚಳುವಳಿಗೆ ಕಾಂಗ್ರೆಸ್ ತನ್ನ ಬೆಂಬಲವನ್ನು ಘೋಷಿಸಿತು. ವಿಶೇಷವಾಗಿ ಭಾರತಕ್ಕೆ ತಕ್ಷಣವೇ ಸ್ವಾತಂತ್ರವನ್ನು ಕೊಡಬೇಕೆಂದು ಒತ್ತಾಯಿಸಿತು. ಮಾರ್ಚ್ 1946ರಲ್ಲಿ ಅಂಗೀಕರಿಸಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿಲುವಳಿಯು ಈ ಕೆಳಕಂಡಂತೆ ಮೂಡಿಬಂದಿತು.

'ಏಷ್ಯಾ ಖಂಡದ ಸ್ವಾತಂತ್ರದ ಮೂಲ ಸಮಸ್ಯೆಯಾಗಿ ಭಾರತ ಮುಂದುವರೆದಿದೆ. ಭಾರತದ ಸ್ವಾತಂತ್ರದ ಮೇಲೆ ಹಲವಾರು ರಾಷ್ಟ್ರಗಳ ಸ್ವಾತಂತ್ರ ಮತ್ತು ವಿಶ್ವಶಾಂತಿ ಅವಲಂಬಿತವಾಗಿದೆ'.

ಅನ್ಯ ರಾಷ್ಟ್ರಗಳ ಸ್ವಾತಂತ್ರ ಚಳುವಳಿಗಳಿಂದ ವಿಭಿನ್ನವಾಗಿ, ಭಾರತದ ರಾಷ್ಟ್ರೀಯ ಕಾಂಗ್ರೆಸ್ ವಿಶ್ವ ರಾಜಕಾರಣದಲ್ಲಿ ಸಕ್ರಿಯವಾದ ಅಭಿರುಚಿಯನ್ನು ಬೆಳೆಸಿಕೊಂಡು ಕ್ರಮೇಣ ತನ್ನದೇ ಆದ ವಿದೇಶಾಂಗ ನೀತಿಯನ್ನು ರೂಪಿಸಿಕೊಂಡರು. ಸ್ವರಾಜ್ಯ ಕಲ್ಪನೆಗೂ, ಸ್ವಾತಂತ್ರ ಹೋರಾಟಕ್ಕೂ ಹೊಂದಾಣಿಕೆಯುಂಟಾಗಿ, ಕಾಂಗ್ರೆಸ್ ತನ್ನ ಪಾತ್ರವನ್ನು ಪರಿಣಾಮಕಾರಿಯಾಗಿ ನಿಭಾಯಿಸಿತು. ರಾಷ್ಟ್ರೀಯ ಕಾಂಗ್ರೆಸ್ಸಿನ ವಿದೇಶಾಂಗ ನೀತಿಯ ತಿರುಳನ್ನು ಈ ಕೆಳಕಂಡಂತೆ ಅರ್ಥೈಸಬಹುದು.

1. ವಿಶ್ವದಾದ್ಯಂತ ರಾಜಕೀಯ ಹಾಗೂ ಆರ್ಥಿಕ ಸಾಮ್ರಾಜ್ಯಶಾಹಿತ್ವವು ಕೊನೆಗೊಂಡು ರಾಷ್ಟ್ರಗಳ ನಡುವೆ ಸಮಾನತೆಯಿಂದ ಕೂಡಿದ ಸಂಬಂಧ ಮತ್ತು ಸಹಕಾರವನ್ನು ಬೆಳೆಸುವುದು.
2. ತುಳಿತಕ್ಕೆ ಸಿಲುಕಿದ್ದ ಎಲ್ಲಾ ರಾಷ್ಟ್ರಗಳಿಗೂ ತಮ್ಮ ಭವಿಷ್ಯವನ್ನು ತಾವೇ ನಿರ್ಧರಿಸಿಕೊಳ್ಳುವ ಹಕ್ಕನ್ನು ಕಲ್ಪಿಸುವುದು.
3. ಶಾಂತಿ, ನಿಶ್ಯಸ್ತ್ರೀಕರಣ, ಏಷ್ಯನ್ನರ ಸಹಬಾಳ್ವೆ ಮತ್ತು ವಿಶ್ವ ಒಕ್ಕೂಟದ ರಚನೆಯಾಗುವುದು.
4. ಶಕ್ತಿರಾಜಕೀಯದಿಂದ ಹೊರಗಿರಲು ಅಲಿಪ್ತ ನೀತಿಯನ್ನು ಬೆಳೆಸಿಕೊಳ್ಳುವುದು.

ಕಾಂಗ್ರೆಸ್ ನಡೆಸಿದ ಮೌಲ್ಯಾಧಾರಿತ ಹೋರಾಟ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೃಹತ್ ರಾಷ್ಟ್ರಗಳ ಮೇಲಿನ ಅದರ ಒತ್ತಡವನ್ನು ವಿಶ್ವದಾದ್ಯಂತ ಶೋಷಣೆಗೊಳಗಾಗಿದ್ದ ರಾಷ್ಟ್ರಗಳೂ ಸ್ವಾಗತಿಸಿದವು. ಇದರಿಂದಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ವಸಾಹತುಶಾಹಿ, ಸಾಮ್ರಾಜ್ಯಶಾಹೀ ಹಾಗೂ ವರ್ಣಭೇದ ನೀತಿಯ ವಿರುದ್ಧ ಸಾರ್ವಜನಿಕ ಅಭಿಪ್ರಾಯ ಮೂಡಿಬಂತು.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ವಿದೇಶಾಂಗ ನೀತಿಯ ವಿಷಯಗಳಲ್ಲಿ ಕಾಂಗ್ರೆಸ್ ತಳೆದ ನಿಲುವುಗಳನ್ನು ವಿವರಿಸಿ.**

...........................................................................................................

...........................................................................................................

...........................................................................................................

...........................................................................................................

...........................................................................................................

...........................................................................................................

...........................................................................................................

**2. ರಾಷ್ಟ್ರೀಯ ಕಾಂಗ್ರೆಸ್ಸಿನ ನೇತಾರರಾಗಿ ಜವಹರಲಾಲ್‌ರವರು ನಿಭಾಯಿಸಿದ ಪಾತ್ರವನ್ನು ತಿಳಿಸಿ.**

...........................................................................................................

...........................................................................................................

...........................................................................................................

...........................................................................................................

...........................................................................................................

...........................................................................................................

...........................................................................................................

## 1.3 ಭಾರತದ ವಿದೇಶಾಂಗ ನೀತಿಯ ಅಡಿಪಾಯ ಹಾಕುವುದರಲ್ಲಿ ನೆಹರೂರವರ ಪಾತ್ರ

20ನೇ ಶತಮಾನದಲ್ಲಿ ಅಲ್ಪಸಂಖ್ಯೆಯಲ್ಲಿ ಮುತ್ಸದ್ಧಿಗಳು ಜವಹರಲಾಲ್ ನೆಹರೂರವರಷ್ಟು ಹಿರಿಮೆಯನ್ನು ಸಾಧಿಸಿದ್ದಾರೆ. ಭಾರತದ ಪರಿವರ್ತನೆಯ ಯುಗದಲ್ಲಿ, ನೆಹರೂರವರನ್ನು ರೂಸ್‌ವೆಲ್ಟ್, ಚರ್ಚಿಲ್, ಲೆನಿನ್ ಮತ್ತು ಮಾವೋರವರಿಗೆ ಹೋಲಿಸಬಹುದು. ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ, ರಾಷ್ಟ್ರಕ್ಕಾಗಿ ಶ್ರಮಿಸಿದ ಬೇರೆಲ್ಲಾ ಸಹೋದ್ಯೋಗಿಗಳಿಗಿಂತ ಮೇಲ್ಮಟ್ಟದಲ್ಲಿರುವವರು ಜವಹರಲಾಲ್"(ಮೈಕೇಲ್ ಬ್ರೆಚರ್)

ಅವರ ಸ್ಥಳದಲ್ಲಿ ಬೇರ್‍ಯಾರೂ ಅವರಷ್ಟು ಸಮರ್ಪಕವಾಗಿ ಕೆಲಸಮಾಡಲಿಲ್ಲ. 'ನೆಹರೂರವರ ನಾಯಕತ್ವವು ಆಂತರಿಕ ಮತ್ತು ವಿದೇಶಾಂಗ ನೀತಿಯಲ್ಲಿ ತನ್ನ ವೈಶಿಷ್ಟ್ಯತೆಯನ್ನುಬಿಟ್ಟಿದೆ"(ರಾಜಗೋಪಾಲಚಾರಿ)

ಈ ಮೇಲ್ಕಂಡ ರೀತಿಯಲ್ಲಿ ನೆಹರೂರವರ ನಾಯಕ್ತವ ಮತ್ತು ಮಹತ್ತರ ಪಾತ್ರವನ್ನು ಅಂತರರಾಷ್ಟ್ರೀಯ ಮಟ್ಟದ ವಿದ್ವಾಂಸರಾದ ಮೈಖೇಲ್ ಬ್ರೆಷರ್ ಮತ್ತು ಭಾರತದ ಅಂತಿಮ ಗೊವರ್ನರ್ ಜನರಲ್ ಆದ ಸಿ. ರಾಜಗೋಪಾಲಚಾರಿಯವರು ಬಣ್ಣಿಸಿದ್ದಾರೆ. ಹೀಗಾಗಿ, ಸೆಪ್ಟೆಂಬರ್ 1946 ಭಾರತದ ಮಧ್ಯಂತರ ಸರ್ಕಾರ ರಚನೆಯಾದಾಗ ನೆಹರೂರವರು ಕಾಮೆನ್‌ವೆಲ್ತ್ ಸಂಬಂಧಗಳ ಇಲಾಖೆಯನ್ನು ತಮ್ಮ ಕೈಯಲ್ಲೇ ಇರಿಸಿಕೊಂಡು 1947 ರಲ್ಲಿ ಭಾರತಕ್ಕೆ ಸ್ವಾತಂತ್ರ ಬಂದು ಪ್ರಥಮ ಸರ್ಕಾರ ರಚನೆಯಾದಾಗ

ವಿದೇಶಾಂಗ ಖಾತೆಯನ್ನು ನೆಹರೂ ತಾವೇ ನಿಭಾಯಿಸಲು ನಿರ್ಧರಿಸಿದಾಗ, ಇತರೇ ನಾಯಕರಾರಿಗೂ ಅದು ಆಶ್ಚರ್ಯಕರ ಸಂಗತಿಯಾಗಲಿಲ್ಲ. ಸುಮಾರು 20 ವರ್ಷಗಳು ಗಾಂಧಿ ಮತ್ತು ರಾಷ್ಟ್ರೀಯ ಕಾಂಗ್ರೆಸ್ಸಿಗೆ ಅಂತರರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದಂತೆ ನೆಹರೂರವರು ನಿಜಕ್ಕೂ ಗುರುಗಳೇ ಆಗಿದ್ದರು. ಅಧ್ಯಯನ, ಪ್ರವಾಸ ಮತ್ತು ಪತ್ರಗಳ ಮುಖೇನ ನೆಹರೂರವರು ವಿಶ್ವ ರಾಜಕೀರಣದ ವಿವಿಧ ಭಾಷೆಯ/ಸಮಸ್ಯೆಗಳ ಬಗ್ಗೆ ಅಪಾರ ಜ್ಞಾನವನ್ನು ಸಂಪಾದಿಸಿಕೊಂಡಿದ್ದರು. ಅವರ ನೇರ ಅಭಿಪ್ರಾಯದ ಮೇರೆಗೆ ರಾಷ್ಟ್ರೀಯ ಕಾಂಗ್ರೆಸ್ ಪಾಜೀ ಮತ್ತು ನಾಜಿ ವಾದಗಳ ವಿರುದ್ಧ ಪ್ರತಿಕ್ರಿಯಿಸಿತು. ಟೋಟಲಿಟೇರಿಯನ್ ರಾಷ್ಟ್ರಗಳ ಆಕ್ರಮಣಕ್ಕೊಳಗಾಗಿದ್ದ ಸ್ಪೈನ್, ಜೆಕೋಸ್ಲಾವಾಕಿಯಾ ಮತ್ತು ಚೀನಾ ದೇಶಗಳ ಜನರೊಡನೆ ಸಹಾನುಭೂತಿಯಿಂದ ನೆಹರೂರವರು ಸ್ಪಂದಿಸಿದರು. ಸ್ಪಾನಿಷ್ ಗಣತಂತ್ರದ ಭವಿಷ್ಯವು ಡೋಲಾಯಮಾನವಾದ ಪರಿಸ್ಥಿತಿಯಲ್ಲಿದ್ದಾಗ ನೆಹರೂರವರು ಬಾರ್ಸಿನೋನಾಕ್ಕೆ ಭೇಟಿ ನೀಡಿದರು. ಅದೇ ರೀತಿಯಲ್ಲಿ ನಾಜೀ ಆಕ್ರಣವಾದಾಗ, ಪ್ರಾಗ್‌ಗೆ ನೆಹರೂರವರು ಭೆಟಿನೀಡಿದರು. ಎರಡನೇ ಮಹಾಯುದ್ಧವು ಸೆಪ್ಟೆಂಬರ್ 1939ರಲ್ಲಿ ಆರಂಭಾದಾಗ, ಅವರು ಸ್ನೇಹ ಸಂಬಂಧದ ಮೇರೆಗೆ ಚುಗಂಕಿಂಗ್ ಪ್ರದೇಶದಲ್ಲಿದ್ದರು. ನಿರಂಕುಶ ಪ್ರಭುತ್ವವನ್ನು ಮನವೊಲಿಸಲು ಅಂತರರಾಷ್ಟ್ರೀಯ ಮಟ್ಟದಲ್ಲಿ ಆದ ಪ್ರಯತ್ನಗಳನ್ನು ನೆಹರೂ ನೇರವಾಗಿ ಟೀಕಿಸಿದರು. ಹಿಟ್ಲರನ್ನು ತಡೆಯುವಲ್ಲಿ, ಇಂಗ್ಲೆಂಡ್ ಮತ್ತು ಫ್ರಾನ್ಸ್ ಅನುಸರಿಸಿದ ದ್ವಂದ್ವ ನೀತಿಯ ಬಗ್ಗೆ ನೆಹರೂರವರಿಗೆ ತೀವ್ರ ಅಸಮಾಧಾನವಿತ್ತು. ಸೋವಿಯತ್ ರಷ್ಯಾವನ್ನು ಹಿಟ್ಲರ್ ಮತ್ತು ಮುಸಲೋನಿಯವರ ಧಾಳಿಯಿಂದ ತಡೆಯುವಲ್ಲಿ (ಪಾಶ್ಚಿಮಾತ್ಯ) ಮಿತ್ರ ಬಣವು ತೋರಿದ ನಿರುತ್ಸಾಹದಿಂದ ನೆಹರೂರವರು ಅತೀವ ವೇದನೆಗೆ ಒಳಗಾಗಿದ್ದರು. ರಷ್ಯಾದ ಬಗ್ಗೆ ಅವರಿಗಿದ್ದ ಮೆಚ್ಚುಗೆ ಅವರ 1927ರಲ್ಲಿನ ಪ್ರವಾಸದಿಂದ ಪ್ರಭಾವಿತವಾಗಿತ್ತು.

ವಸಾಹತುಶಾಹಿಯ ವಿರುದ್ಧ ತೀವ್ರವಾದ ಮನೋಭಾವವನ್ನು ಹೊಂದಿದ್ದ ನೆಹರೂರವರ ನೀತಿಯು ಸ್ವಭಾವಿಕವಾಗಿ ಪರಕೀಯರ ಆಳ್ವಿಕೆಯ ವಿರುದ್ಧ ಸ್ವಾತಂತ್ರ ಮತ್ತು ಶಾಂತಿಯ ಪರವಾದ್ದರಲ್ಲಿ ಆಶ್ಚರ್ಯವೇನಿಲ್ಲ. ಇಂತಹ ವಾತಾವರಣದಲ್ಲಿ, ಆಂತರಿಕ ಸರ್ಕಾರದ ಮುಖ್ಯಸ್ಥರಾಗಿ ದವಹರಲಾಲ್ ನೆಹರೂರವರು ಸೆಪ್ಟೆಂಬರ್ 7, 1946 ರಂದು ಆಕಾಶವಾಣಿಯಲ್ಲಿ ಮಾಡಿದ ಭಾಷಣವು ಭಾರತದ ವಿದೇಶಾಂಗ ನೀತಿಯ ಗುರಿಗಳು, ಧ್ಯೇಯಗಳು, ತತ್ವಗಳು ಹಾಗೂ ಹೊರ ರಾಷ್ಟ್ರಗಳೊಡನೆ ಮಾಡಲಿದ್ದ ಭಾರತದ ಸಂಬಂಧದ ಚೌಕಟ್ಟನ್ನು ಸಾರಿ ಹೇಳಿತು. ನೆಹರೂರವರ ಭಾಷಣವನ್ನು ಇಂದಿಗೂ ತಜ್ಞರು ಭಾರತದ ವಿದೇಶಾಂಗ ನೀತಿಯ ಅಡಿಪಾಯವೆಂದು ಪರಿಗಣಿಸುತ್ತಾರೆ. ನೆಹರೂರವರ ಭಾಷಣದ ಸಂಕ್ಷಿಪ್ತ ಸಾರಾಂಶವು ಈ ರೀತಿಯಲ್ಲಿದೆ.

1) ಮಿಲಿಟರಿ ಕೂಟಗಳ ವಿಶ್ವದ ಶಾಂತಿ ಮತ್ತು ಸುವ್ಯವಸ್ಥೆ ನಾಶ ಮಾಡುವಲ್ಲಿ ಹಾಗೂ ಶಕ್ತಿ ರಾಜಕಾರಣವನ್ನು ವೃದ್ಧಿಸುವಲ್ಲಿ ತಳೆದ ಪಾತ್ರದಿಂದ ಬೇಸತ್ತ ಭಾರತ ಅಂತಹ ರಾಷ್ಟ್ರೀಯ ವ್ಯವಸ್ಥೆಯಿಂದ ದೂರವಿರುವುದು. ಸ್ವತಂತ್ರವಾದ ವಿದೇಶಾಂಗ ನೀತಿಯನ್ನು ಅನುಸರಿಸಿ ಶಾಂತಿ ಸಹಬಾಳ್ವೆಗೆ ಪೂರಕವಾಗಿ ಶ್ರಮಿಸುವ ಧ್ಯೇಯವನ್ನು ಹಮ್ಮಿಕೊಳ್ಳುವುದು ಅನಿವಾರ್ಯವಾಗಿತ್ತು.

2) ಅಮೇರಿಕಾ ರಾಷ್ಟ್ರದ ಪ್ರಜೆಗಳಿಗೆ ತಮ್ಮ ಶುಭಾಶಯಗಳನ್ನು ನೀಡಿ, ವಿಧಿಯು ಅಂತರರಾಷ್ಟ್ರೀಯ ವಿಷಯಗಳಲ್ಲಿ, ಅವರಿಗೆ ಪ್ರಧಾನ ಪಾತ್ರವನ್ನು ಕಲ್ಪಿಸಿರುವುದಾಗಿ ಹೇಳಿದರು.

3. ಸೋವಿಯತ್ ಒಕ್ಕೂಟವನ್ನು ಶ್ರೇಷ್ಠ ರಾಷ್ಟ್ರವೆಂದೂ, ಭಾರತದ ನೆರೆರಾಷ್ಟ್ರವೆಂದು ಬಣ್ಣಿಸಿ ಅದರೊಂದಿಗೆ ಹಲವು ಕ್ಷೇತ್ರಗಳಲ್ಲಿ ಕೆಲಸಮಾಡುವುದಾಗಿ ನುಡಿದರು.

4) ಚೀನಾದ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿ, ನೆರೆರಾಷ್ಟ್ರ, ಮಿತ್ರರಾಷ್ಟ್ರವೆಂದು ಬಣ್ಣಿಸಿ, ಅದರೊಡನೆ ಸ್ನೇಹಮಯ ಸಂಬಂಧವನ್ನು ಬೆಳೆಸಿಕೊಂಡು ಹೋಗುವುದಾಗಿ ಸಾರಿದರು.

13

ನೆಹರೂರವರ ಆಕಾಶವಾಣಿ ಭಾಷಣವು ಮುಂದಿನ ಎರಡು ದಶಕಗಳ ಭಾರತದ ವಿದೇಶಾಂಗ ನೀತಿಯ ಧ್ಯೇಯ ಮತ್ತು ತತ್ವಗಳನ್ನು ಮುನ್ಸೂಚಿಸಿತು.

1) ವರ್ಣಭೇದ ನೀತಿ ಮತ್ತು ವಸಾಹತುಶಾಹಿಯ ವಿರೋಧ 2) ಬ್ರಿಟನ್‌ನೊಡನೆ ಹಿಂದಿನ ಕಹಿನೆನಪುಗಳನ್ನು ಮರೆತು ಕಾಮನ್‌ವೆಲ್ತ್‌ನಲ್ಲಿ ಒಟ್ಟಾಗಿ ಕೆಲಸಮಾಡುವುದು 3) ಅಮೇರಿಕಾ, ಸೋವಿಯತ್ ಒಕ್ಕೂಟ ಮತ್ತು ಚೀನಾದೊಡನೆ ಸಹಕಾರ4) ಮಿಲಿಟರಿ ಬಣಗಳಲ್ಲಿ ಸಿಲುಕಿಕೊಳ್ಳದೆ, ಏಷ್ಯಾ, ಆಫ್ರಿಕಾದ ಶಾಂತಿ ಮತ್ತು ಸಹಬಾಳ್ವೆಗೆ ಶ್ರಮಿಸುವುದು.

ನೆಹರೂರವರ ನಾಯಕತ್ವವು ಭಾರತದ ಆಂತರಿಕ ಮತ್ತು ವಿದೇಶಾಂಗ ನೀತಿಗಳ ಮೇಲೆ ಆಳವಾದ ಪ್ರಭಾವವನ್ನು ಬೀರಿತು. ಆಂತರಿಕವಾಗಿ, ಅವರು ಪ್ರಜಾಪ್ರಭುತ್ವದ ಬುನಾದಿಯ ಮೇಲೆ ತಮ್ಮ ನೀತಿಗಳನ್ನು ಹಮ್ಮಿಕೊಂಡರು, ವಿದೇಶಾಂಗ ನೀತಿಯು ಅಲಿಪ್ತ ನೀತಿ ಮತ್ತು ಪಂಚಶೀಲದ ಚೌಕಟ್ಟಿನಲ್ಲಿ ಚಲನಶೀಲವಾಯಿತು.

**ಅಲಿಪ್ತನೀತಿ:** ಎರಡನೇ ಮಹಾಯುದ್ಧದ ನಂತರದಲ್ಲಿ ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟಗಳು ಬೃಹತ್ ರಾಷ್ಟ್ರಗಳಾಗಿ ಹೊರಹೊಮ್ಮಿದವು. ಅವುಗಳ ನಡುವೆ ಶೀತಲ ಸಮರವು ಪ್ರಾರಂಭವಾಗಿ, ಉಭಯ ರಾಷ್ಟ್ರಗಳು ಮಿಲಿಟರಿ ಬಣಗಳನ್ನು ಕಟ್ಟಿಕೊಂಡು ಮಿತ್ರರನ್ನು ಯಾಚಿಸಿದ ಹಿನ್ನಲೆಯಲ್ಲಿ, ನೆಹರೂರವರ ಭಾರತವು ಶಕ್ತಿ ಸಮರದಿಂದ (ಮಾತು ಬಣಗಳಿಂದ) ದೂರವಿರಲು ಇಚ್ಛಿಸಿ ವಿಶ್ವರಾಜಕಾರಣದಲ್ಲಿ ಸ್ವತಂತ್ರವಾಗಿ ತನ್ನ ಪಾತ್ರವನ್ನು ನಿಭಾಯಿಸಲು ಅಲಿಪ್ತ ನೀತಿಯನ್ನು ಹಮ್ಮಿಕೊಂಡು ಅದರ ಚೌಕಟ್ಟಿನಲ್ಲಿ ತನ್ನ ವಿದೇಶಾಂಗ ನೀತಿಯನ್ನು ಕಾರ್ಯಚರಣೆಗೊಳಿಸಿತು. ಹೀಗಾಗಿ ಅಲಿಪ್ತ ನೀತಿಯು ಅಂತರ ರಾಷ್ಟ್ರೀಯ ರಾಜಕಾರಣಕ್ಕೆ ಭಾರತವು ಕೊಟ್ಟ ಕೊಡುಗೆಯಾಗಿತು. ನೆಹರೂರವರ ದೃಷ್ಟಿಯಲ್ಲಿ ಭಾರತವು ವಿಶ್ವ ರಾಜಕಾರಣದಲ್ಲಿ ಮಹತ್ತರವಾದ ಪಾತ್ರವನ್ನು ನಿಭಾಯಿಸಲಿದ್ದು, ಯಾವುದೇ ಒಂದು ಬೃಹತ್ ರಾಷ್ಟ್ರದ ಅನುಯಾಯಿ ರಾಷ್ಟ್ರವಾಗಿ ವರ್ತಿಸುವುದು ಸಮಂಜಸವಾಗಿರಲಿಲ್ಲ. ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದಲೂ ಭಾರತವು ಎಲ್ಲಾ ಮೂಲಗಳಿಂದಲೂ ಲಬ್ಧವಾಗುವ ನೆರವನ್ನು ಪಡೆಯುವ ಇಚ್ಛೆಯನ್ನು ಹೊಂದಿತ್ತು. ಇದು ಗಮನಾರ್ಹವಾದ ಅಂಶ. ಅಲಿಪ್ತನೀತಿಯು ತಟಸ್ಥತೆಯೂ ಆಗಿರಲಿಲ್ಲ. ಅದು ಸಕಾರಾತ್ಮಕ ನೀತಿಯಾಗಿ ವಿಶ್ವದ ಸಮಸ್ಯೆಗಳ ಶಾಂತಿ ಮಾರ್ಗದಲ್ಲಿ ಪರಿಹಾರ ಕಂಡುಕೊಳ್ಳುವ ಹೊಸ ವಿದೇಶಾಂಗ ನೀತಿಯ ಸ್ವರೂಪವಾಗಿತ್ತು.

ಏಷ್ಯಾಖಂಡದ ಐಕ್ಯತೆಗಾಗಿ ಮತ್ತು ಏಷ್ಯಾಕಂಡವನ್ನು ಶಾಂತಿವಲಯವನ್ನಾಗಿ ಮಾಡುವ ಗುರುತರ ಧ್ಯೇಯವನ್ನು ಹೊಂದಿದ್ದರು. ಸ್ವಾತಂತ್ರದ ನಂತರದಲ್ಲಿ ದೆಹಲಿಯಲ್ಲಿ ನಡೆದ ಎರಡು ಏಷ್ಯಾ ಐಕ್ಯತಾ ಸಮ್ಮೇಳನಗಳು ಮತ್ತು ಇಂಡೋನೇಷ್ಯಾ ರಾಷ್ಟ್ರವು 1955ರಲ್ಲಿ ನಡೆಸಿದ ಬಾಂಡ್ಯೂಂಗ್ ಆಫ್ರೋ-ಏಷ್ಯನ್ ಸಮ್ಮೇಳನದಲ್ಲಿ ನೆಹರೂರವರು ಏಷ್ಯಾಖಂಡದ ಐಕ್ಯತೆ ಮತ್ತು ಸಹಬಾಳ್ವೆಗೆ ಕೊಟ್ಟ ಸಂಕೇತವಾಗಿತ್ತು. ಅದೇ ರೀತಿಯಲ್ಲಿ ಏಷ್ಯಾಖಂಡವನ್ನು ಶೀತಲ ಸಮರದಿಂದ ಹೊರತುಪಡಿಸಿ, ಶಾಂತಿವಲಯವನ್ನಾಗಿ ರೂಪಿಸುವುದು ನೆಹರೂರವರ ಗುರಿಯಾಗಿತ್ತು. ಪಾಕಿಸ್ತಾನವು ಅಮೇರಿಕಾದೊಡನೆ ಮಿಲಿಟರಿ ಒಪ್ಪಂದವನ್ನು ಮಾಡಿಕೊಳ್ಳದಿರಲು ನೆಹರೂರವರು ಪ್ರಯತ್ನಿಸಿದರು. ಆದರೆ ಆ ನಿಟ್ಟಿನಲ್ಲಿ ಅವರಿಗೆ ಯಶಸ್ಸು ದೊರಕಲಿಲ್ಲ.

**ಪಂಚಶೀಲ:** ಪಂಚಶೀಲ ತತ್ವವು ನೆಹರೂರವರು ಭದ್ರರಾಗಿದ್ದ ಮತ್ತೊಂದು ವಿದೇಶಾಂಗ ನೀತಿಯ ತತ್ವ ಹಾಗೂ ಗುರಿ. ಶಾಂತಿಯುತ ಸಹಬಾಳ್ವೆಗೆ ನೆಹರೂರವರು ನೀಡಿದ ಐದು ತತ್ವಗಳು ಆದಾಗಿದ್ದವು. ಮೂಲತಃ ಭಾರತ ಮತ್ತು ಚೀನಾ ರಾಷ್ಟ್ರಗಳು 1954ರಲ್ಲಿ ಮಾಡಿಕೊಂಡ ಈ ಒಪ್ಪಂದ ಭಾರತ ಮತ್ತು ಚೀನಾದ ಟಿಬೆಟ್ ಪ್ರಾಂತ್ಯದೊಡನೆ ವ್ಯಾಪಾರವನ್ನು ಬೆಳೆಸುವ ಉದ್ದೇಶದಿಂದ ಕೂಡಿತ್ತು. ಪಂಚಶೀಲ ತತ್ವದ ಐದು ಅಂಶಗಳು ಇಂತಿದ್ದವು.

14

1) ಉಭಯ ರಾಷ್ಟ್ರಗಳ ಗಡಿ ಐಕ್ಯತೆ ಮತ್ತು ಪರಮಾಧಿಕಾರವನ್ನು ಗೌರವಿಸುವುದು

2) ಪರಸ್ಪರ ಆಕ್ರಮಣಮಾಡದಿರುವುದು

3) ಉಭಯರ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವುದು

4) ಸಮಾನತೆ ಮತ್ತು ಪರಸ್ಪರ ಲಾಭಕ್ಕಾಗಿ ವರ್ತಿಸುವುದು

5) ಶಾಂತಿ ಸಹಬಾಳ್ವೆಯನ್ನು ಪಾಲಿಸುವುದು

ಸಂಸತ್ತಿನಲ್ಲಿ ನೆಹರೂರವರು ಹೇಳಿರುವಂತೆ ಪಂಚಶೀಲ ನೀತಿಯು (ತತ್ವವು)ಭಾರತ ಮತ್ತು ಚೀನಾ ರಾಷ್ಟ್ರಗಳ ವಿಭಿನ್ನ ಆರ್ಥಿಕ ನೀತಿ ಮತ್ತು ದೃಷ್ಟಿಕೋನವನ್ನು ಗೌರವಿಸಿ ಉಭಯ ರಾಷ್ಟ್ರಗಳು ತಮ್ಮ ಗುರಿಸಾಧನೆಯತ್ತ ಶ್ರಮಿಸಲು ಪೂರಕವಾಗಿತ್ತು. ಇತ್ತೀಚೆಗೆ ಭಾರತ ಮತ್ತು ಚೀನಾ ರಾಷ್ಟ್ರಗಳು ಪಂಚಶೀಲ ನೀತಿಯ 50ನೇ ದಿನಾಚರಣೆಯನ್ನು ಆಚರಿಸಿ ತಾವು ಇಂದಿಗೂ ಪಂಚಶೀಲ ತತ್ವಕ್ಕೆ ಬದ್ಧರಾಗಿರುವುದಾಗಿ ಹೇಳಿಕೆ ನೀಡಿವೆ.

**ಕಾಮನ್‌ವೆಲ್ತ್ ರಾಷ್ಟ್ರಗಳೊಡನೆ ಸಂಬಂಧ:** ನೆಹರೂರವರ ವಿದೇಶಾಂಗ ನೀತಿಯ ಮತ್ತೊಂದು ಅಂಶವೆಂದರೆ ಕಾಮನ್‌ವೆಲ್ತ್ ರಾಷ್ಟ್ರಗಳ ಒಕ್ಕೂಟದಲ್ಲಿ ಸದಸ್ಯ ರಾಷ್ಟ್ರವಾಗಿ ಮುಂದುವರೆಸಲು ತೆಗೆದುಕೊಂಡ ನಿರ್ಧಾರ. ಭಾರತದ ಹೋರಾಟ ಬ್ರಿಟಿಷ್ ವಸಾಹತುಶಾಹಿ ನೀತಿಯ ವಿರುದ್ಧ ಮಾತ್ರವಾಗಿತ್ತೆಂದು ನೆಹರೂರವರು ಹೇಳಿಕೆ ನೀಡಿ, ಕಾಮನ್‌ವೆಲ್ತ್ ಒಕ್ಕೂಟದಲ್ಲಿ ಮುಂದುವರೆಯುವುದರಿಂದ ಭಾರತ ಕಾಮನ್‌ವೆಲ್ತ್‌ನ ವಿಸ್ತರಣೆ ಮತ್ತು ಬದಲಾವಣೆಗಾಗಿ ಶ್ರಮಿಸುವುದಾಗಿ ಘೋಷಿಸಿದರು. ಭಾರತವೂ ಸೇರಿದಂತೆ ಬಹಳಷ್ಟು ಏಷ್ಯಾ ಆಫ್ರಿಕಾ ದೇಶಗಳು 50ರ ದಶಕದಲ್ಲಿ ಸದಸ್ಯರಾಗಿ ಹಿಂದಿನ ಬ್ರಿಟಿಷ್ ಕಾಮನ್‌ವೆಲ್ತ್ ಅನ್ನು ಮಾರ್ಪಾಡು ಮಾಡಿ ನೆಹರೂರವರ ಕನಸನ್ನು ನನಸು ಮಾಡಿದವು. 'ಶಕ್ತಿ ರಾಜಕೀಯದಿಂದ ದೂರವಿರುವ ಆಕಾಂಕ್ಷೆ ಮತ್ತು ಅಂತರರಾಷ್ಟ್ರೀಯ ರಾಜಕಾರಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ತೀವ್ರ ಉತ್ಸುಕತೆ ನೆಹರೂರವರ ವಿದೇಶಾಂಗ ನೀತಿಯ ಪ್ರಮುಖ ಲಕ್ಷಣವಾಗಿತ್ತೆಂದು ತಜ್ಞರಾದ ಪ್ರೊ|| ಬಿಮಲ್ ಪ್ರಸಾದ್‌ರವರು ತಮ್ಮ ಗ್ರಂಥ "Origins of India's Foreign Policy"ನಲ್ಲಿ ಬಣ್ಣಿಸಿದ್ದಾರೆ.

## 1.4 ಗಾಂಧಿ, ನೆಹರು ಮತ್ತು ಭಾರತದ ವಿದೇಶಾಂಗ ನೀತಿ

ಗಾಂಧೀಜಿಯವರ ಗುರಿ ಮತ್ತು ಸಿದ್ಧಾಂತ ಭಾರತದ ವಿದೇಶಾಂಗ ನೀತಿಯಲ್ಲಿ ಅಳವಡಿಸಿಕೊಂಡಿದ್ದ ನೆಹರೂರವರ ಮಹತ್ತರ ಕೊಡುಗೆ. ಗಾಂಧೀಜಿಯವರು ಗುರಿ ಮತ್ತು ಮಾರ್ಗದ ನಡುವಣ ಸಂಬಂಧ/ ಹೊಂದಾಣಿಕೆಯನ್ನು ಎತ್ತಿ ಹಿಡಿದು ವಿಶ್ವಮಟ್ಟದಲ್ಲಿ ಪ್ರಶಂಸೆಗೆ ಪಾತ್ರರಾದರು. ನೆಹರೂರವರ ದೃಷ್ಟಿಯಲ್ಲಿ ಪ್ರತಿಯೊಂದು ಕ್ರಿಯೆಯೂ ತನ್ನದೇ ಆದ ಸ್ವಾಭಾವಿಕ ಫಲಿತಾಂಶವನ್ನು ಹೊಂದಿರುತ್ತದೆ, ಸರಿಮಾರ್ಗವು ಸರಿಯಾದ ಫಲವನ್ನು ನೀಡುತ್ತದೆ.... ತಪ್ಪು ಕ್ರಿಯೆಯು ತಪ್ಪಾದ ಫಲಿತಾಂಶ ಕೊಡುವುದು ಸ್ವಾಭಾವಿಕ. ವಿದೇಶಾಂಗ ನೀತಿಯು ರಾಷ್ಟ್ರದ ಹಿತಾಸಕ್ತಿಯನ್ನು ಸಂರಕ್ಷಿಸಬೇಕಾದಾಗ್ಯೂ ಸರಿಯಾದ ಮಾರ್ಗಕ್ಕೆ ಮಹತ್ವವನ್ನು ಕೊಡಬೇಕೆಂಬ ವಿಶ್ವಾಸದಿಂದ ನೆಹರೂರವರು ಗಾಂಧೀಜಿಯವರ ನೀತಿಯನ್ನು ತಮ್ಮ ವಿದೇಶಾಂಗ ನೀತಿಯಲ್ಲಿ ಅನುಷ್ಠಾನಕ್ಕೆ ತರಲು ಶ್ರಮಿಸಿದರು.

ಗಾಂಧೀಜಿಯವರ ಅಹಿಂಸಾ ತತ್ವದಿಂದ ಪ್ರಾಭಾವಿತರಾಗಿದ್ದ ನೆಹರೂರವರು ಆ ಕಾರಣದಿಂದಲೇ ಶಕ್ತಿ ರಾಜಕಾರಣವನ್ನು ದೂರವಿಟ್ಟು, ವ್ಯಾಜ್ಯಗಳ/ಸಮಸ್ಯೆಗಳ ಶಾಂತಿಯುತ ಸಂಧಾನಕ್ಕೆ ಮಹತ್ವಕೊಟ್ಟರು. ಪಾಕಿಸ್ತಾನದೊಡನೆ ಯುದ್ಧನಿಷೇದ ಒಪ್ಪಂದವನ್ನು ಮಾಡಿಕೊಳ್ಳುವ ಗುರಿಯಿಂದ ನೆಹರೂರವರು ತಮ್ಮ ಪ್ರಸ್ತಾಪವನ್ನು 1949ರಲ್ಲಿ ಮತ್ತು ನಂತರದಲ್ಲಿ ಹಲವಾರು ಬಾರಿ ಮಾಡಿದರು. ಆದರೆ ಪಾಕಿಸ್ತಾನ ನೆಹರೂರವರ ಪ್ರಸ್ತಾಪವನ್ನು ತಿರಸ್ಕರಿಸಿತು. ನೆಹರೂರವರ ಪಂಚಶೀಲ ತತ್ವ/ನೀತಿಯೂ ಕೂಡ ಗಾಂಧೀಜಿಯವರ

ತತ್ವ ಮತ್ತು ಪ್ರಭಾವದ ಫಲವೇ ಆಗಿತ್ತೆಂದರೆ ತಪ್ಪಾಗಲಾರದು. 1962ರಲ್ಲಿ ಚೀನಾ ರಾಷ್ಟ್ರವು ಪಂಚಶೀಲದಿಂದ ಹೊರಬಂದು ಭಾರತದೊಡನೆ ಯುದ್ಧದಲ್ಲಿ ತೊಡಗಿದಾಗ, ನೆಹರೂರವರಿಗೆ ಭಾರಿ ಆಘಾತವೇ ಆಯಿತು. ಹಲವು ವಿಶ್ಲೇಷಕರ ದೃಷ್ಟಿಯಲ್ಲಿ ನೆಹರೂರವರು ಆ ಆಘಾತದಿಂದ ಚೇತರಿಸಿಕೊಳ್ಳದೆ 1964ರಲ್ಲಿ ಅಸುನೀಗಿದರು. ಗಾಂಧೀಜಿಯವರ ಹಲವು ಮೂಲಭೂತ ಕಾಯಿದೆಗಳನ್ನು ನೆಹರೂರವರು ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಅಳವಡಿಸಲು ಪ್ರಯತ್ನಪಟ್ಟರು. CONQUEST OF VIOLENCE ಗ್ರಂಥದಲ್ಲಿ ಜೋನ್ ಬಂಡುರಾಂಟ್‌ರವರು ಗಾಂಧೀಜಿಯವರ ಸತ್ಯಾಗ್ರಹ ಚಳುವಳಿಯ ಒಂಬತ್ತು ಮೂಲಭೂತ ಕಾಯಿದೆಗಳಲ್ಲಿ ನೆಹರೂರವರು ಐದನ್ನು ತಮ್ಮ ವಿದೇಶಾಂಗ ನೀತಿಯಲ್ಲಿ ಅಳವಡಿಸಿಕೊಂಡರೆಂದು ಅರ್ಥಪೂರ್ಣವಾಗಿ ಬಣ್ಣಿಸಿದ್ದಾರೆ. ಅವುಗಳು ಹೀಗಿವೆ. 1) ಸದಾ ಕಾಲದಲ್ಲಿಯೂ ಸ್ವಾವಲಂಬನೆ 2) ಸತ್ಯಕ್ಕೆ ಪೂರಕವಾಗಿರುವಂತೆ ಬೇಡಿಕೆಗಳನ್ನು ಕಡಿಮೆ ಪ್ರಮಾಣಕ್ಕೆ ಇಳಿಸುವುದು. 3) ಗೌರವಾನ್ವಿತ ರೀತಿಯಲ್ಲಿ ಪ್ರತಿಯಾಳೀ ರಾಷ್ಟ್ರದೊಡನೆ ಸಹಕಾರದ ಕ್ಷೇತ್ರಗಳನ್ನು ಗುರುತಿಸಿಕೊಳ್ಳುವುದು. 4) ಸಂಧಾನದಲ್ಲಿ ಅತ್ಯಗತ್ಯವಾದವನ್ನು ಬಿಟ್ಟು ಕೊಡದಿರುವುದು, ಮತ್ತು 5) ಒಪ್ಪಂದವನ್ನು ಮಾಡಿಕೊಳ್ಳುವ ಮುನ್ನ ಮೂಲಭೂತ ವಿಷಯಗಳ ಬಗ್ಗೆ ಸಂಪೂರ್ಣ ಸಮ್ಮತಿಗೆ ಆಗ್ರಹಪಡಿಸುವುದು.

1947ರಲ್ಲಿ ಸ್ವತಂತ್ರ ಭಾರತದ ಸರ್ಕಾರದ ಚುಕ್ಕಾಣಿಯನ್ನು ಹಿಡಿದಾಗ, ನೆಹರೂರವರು ಗಾಂಧೀಜಿಯವರ ತತ್ವಗಳನ್ನು ವಿದೇಶಾಂ ನೀತಿಯ ಅನುಷ್ಠಾನದಲ್ಲಿ ಅಳವಡಿಸಿಕೊಳ್ಳಲು ಅತ್ಯಂತ ಉತ್ಸುಕರಾಗಿದ್ದರೂ ಎರಡನೇ ಮಹಾಯುದ್ಧವು ಮಾನವ ಕುಲಕ್ಕೆ ಮಾಡಿದ್ದ ಹಾನಿಯನ್ನು ಗಮನಿಸಿ, ನೆಹರೂರವರು ಅಂತರರಾಷ್ಟ್ರೀಯ ಸಂಬಂಧಗಳ ಸಕಾರಾತ್ಮಕ ಬೆಳವಣಿಗೆಗೆ ಸೌಹಾರ್ದನೆಯಿಂದ, ಶಾಂತಿಯುತವಾಗಿ ಶ್ರಮಿಸಲು ಪಣತೊಟ್ಟರು. ಶಾಂತಿಯುತ ಸಂಧಾನದ ಮೂಲಕ ಫ್ರಾನ್ಸ್ ಪಾಂಡಿಚೆರಿಯನ್ನು ಭಾರತಕ್ಕೆ ಹಿಂತಿರುಗಿಸಿದ್ದು ನೆಹರೂರವರ ವಿಶ್ವಾಸವನ್ನು ಹೆಚ್ಚಿಸಿತು. ಅಣುಬಾಂಬಿನ ವಿರುದ್ಧ ನೆಹರೂರವರ ಧೃಡಮನಸ್ಸಿನಿಂದ ಹೋರಾಡಿದರು. ಅಲಿಪ್ತ ನೀತಿಯ ಮೂಲಕ, ವಿದೇಶಾಂಗ ನೀತಿಯಲ್ಲಿ ನೈತಿಕತೆ ಮತ್ತು ಮೌಲ್ಯಗಳನ್ನು ಅನುಸರಿಸಿದರು. ಭಾರತ ಶಕ್ತಿಶಾಲಿ ರಾಷ್ಟ್ರ (ಮಿಲಿಟರಿ ದೃಷ್ಟಿಯಲ್ಲಿ)ವಾಗಿಲ್ಲದಿದ್ದರೂ ವಿಶ್ವಸಂಸ್ಥೆಯು ತನ್ನ ಶಾಂತಿ ಪ್ರಕ್ರಿಯೆಗಳಲ್ಲಿ ಭಾರತಕ್ಕೆ ಗುರುತರ ಪಾತ್ರವನ್ನು 50 ರ ದಶಕದಲ್ಲಿ ಕೊಟ್ಟಿದ್ದು ಗಮನಾರ್ಹ ಅಂಶ.

ಪ್ರೊ||ಹೆಡ್ಲಿ ಬುಲ್‌ರವರು ವ್ಯಾಖ್ಯಾನಿಸಿರುವಂತೆ ನೆಹರೂರವರ ಕಾಲದಲ್ಲಿ ಭಾರತವು ಶಕ್ತಿಶಾಲಿ ರಾಷ್ಟ್ರವಾಗಿಲ್ಲದಿದ್ದರೂ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಭಾವಶಾಲಿ ರಾಷ್ಟ್ರವಾಗಿ ತನ್ನ ಪಾತ್ರವನ್ನು ನಿಭಾಯಿಸಿತು.

## 1.4 ಸಮಾಪ್ತಿಗೊಳಿಸೋಣ

ಸ್ವಾತಂತ್ರ ಪೂರ್ವದಲ್ಲಿಯೇ ಭಾರತದ ವಿದೇಶಾಂಗ ನೀತಿಯನ್ನು ಅರ್ಥಪೂರ್ಣವಾಗಿ ಕಲ್ಪನೆಗೆ ಒಳಪಡಿಸಲಾಗಿತ್ತು. ವಸಾಹತುಶಾಲಿ, ಸಾಮ್ರಾಜ್ಯಶಾಹಿ, ವರ್ಣಭೇದ ನೀತಿ ವಿರೋಧವು ಸ್ವಾತಂತ್ರಪೂರ್ವದಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ನಿಲುವುಗಳಿಂದ ಸ್ಪಷ್ಟವಾಗಿ ಮೂಡಿಬಂದವು.

ಭಾರತದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಯಾರಾದರೂ ಒಬ್ಬ ವ್ಯಕ್ತಿಯು ಮಹತ್ತರ ಪಾತ್ರವನ್ನು ನಿಭಾಯಿಸಿದ್ದರೆ, ಅವರು ನಿಸ್ಸಂದೇಹವಾಗಿ ಜವಹರಲಾಲ್ ನೆಹರೂರವರು, ಸ್ವಾತಂತ್ರಪೂರ್ವ ಮತ್ತು ಸ್ವಾತಂತ್ರೋತ್ತರದಲ್ಲಿ ನೆಹರೂರವರು ಭಾರತದ ವಿದೇಶಾಂಗ ನೀತಿಯ ಮೂಲಗುರಿಗಳು, ಧ್ಯೇಯಗಳು ಹಾಗೂ ತತ್ವಗಳನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸಿದರು.

ಅಲಿಪ್ತನೀತಿ ಮತ್ತು ಪಂಚಶೀಲ ಭಾರತದ ವಿದೇಶಾಂಗ ನೀತಿಯ ಸೃಜನಾತ್ಮಕ ಕೊಡುಗೆಗಳಾಗಿವೆ. ಶೀತಲ ಸಮರದಿಂದ ಹೊರಗಿರಲು ಹಾಗೂ ಬೃಹತ್ ರಾಷ್ಟ್ರಗಳೊಡನೆ ಮೈತ್ರಿಯನ್ನು ಬೆಳೆಸಿಕೊಳ್ಳಲು ಅಲಿಪ್ತ ನೀತಿಯು ಸಹಾಯಕವಾಯಿತು. ಪಂಚಶೀಲ

ತತ್ವವು ನೆರೆ ರಾಷ್ಟ್ರಗಳು ತಮ್ಮ ವೈಯಕ್ತಿಕ ದೃಷ್ಟಿಕೋನ ಮತ್ತು ಸಿದ್ಧಾಂತಗಲೊಡನೆಯೂ ಶಾಂತಿಯುತವಾಗಿ ಪರಸ್ಪರ ಸಂಬಂಧವನ್ನು ಬೆಳೆಸಿಕೊಳ್ಳಲು ಮಾದರಿಯ ರೂಪದಲ್ಲಿ ಸಹಾಯಕವಾಯಿತು.

ಭಾರತದ ವಿದೇಶಾಂಗ ನೀತಿಯಲ್ಲಿ, ಗಾಂಧೀಜಿಯವರ ಮೌಲ್ಯಗಳು ಗುರಿ ಮತ್ತು ಮಾರ್ಗತತ್ವ ಹಾಗೂ ಅಹಿಂಸೆ-ಗಮನಾರ್ಹವಾದ ರೀತಿಯಲ್ಲಿ ಅಡಗಿಕೊಂಡಿದ್ದವು. ನ್ಯಾಯಕ್ಕೆ ಅದು ಒತ್ತು ಕೊಟ್ಟಿತು.

## ನಿಮ್ಮ ಪ್ರಗತಿ ಪರಿಶೀಲನೆ - 2

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಭಾರತದ ವಿದೇಶಾಂಗ ನೀತಿಯ ಅಡಿಪಾಯವನ್ನು ಹಾಕುವಲ್ಲಿ ಜವಹರಲಾಲ್ ನೆಹರೂರವರ ಪಾತ್ರವನ್ನು ವಿಶ್ಲೇಷಿಸಿ.**

.............................................................................................................................................

.............................................................................................................................................

.............................................................................................................................................

.............................................................................................................................................

.............................................................................................................................................

.............................................................................................................................................

.............................................................................................................................................

.............................................................................................................................................

**2. ಭಾರತದ ವಿದೇಶಾಂಗ ನೀತಿಯ ಮೇಲೆ ಗಾಂಧೀಜಿಯವರ ಪ್ರಭಾವವನ್ನು ಚರ್ಚಿಸಿ.**

.............................................................................................................................................

.............................................................................................................................................

.............................................................................................................................................

.............................................................................................................................................

.............................................................................................................................................

.............................................................................................................................................

.............................................................................................................................................

.............................................................................................................................................

## 1.6 ಪ್ರಮುಖ ಪದಗಳು

ಅಲಿಪ್ತ ನೀತಿ : ಶಕ್ತಿ ರಾಜಕೀಯದಿಂದ ದೂರವಿದ್ದು, ರಾಷ್ಟ್ರದ ಧ್ಯೇಯಗಳನ್ನು ಸಕಾರಾತ್ಮಕವಾಗಿ, ಸ್ವಾತಂತ್ರವಾಗಿ ಸಾಧಿಸಲು ಪೂರಕವಾಗುವ ವಿದೇಶಾಂಗ ನೀತಿ. ಈ ನೀತಿಯನ್ನು ಭಾರತವು ಅನುಸರಿಸುತ್ತಿದೆ.

ಶೀತಲ ಯುದ್ಧ : ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟದ ನಡುವೆ 1945ರ ನಂತರದಲ್ಲಿ ಸಿದ್ಧಾಂತದ ಹಾಗೂ ಪ್ರಭಾವದ ದೃಷ್ಟಿಯಿಂದ ನಡೆದ ಯುದ್ಧರಹಿತವಾದ ಸಂಘರ್ಷ



VOP_FL_MA_Pol_Sci_C-10(1-7)_TF.18_F.No.92
92

## 1.7 ಕೆಲವು ಉಪಯುಕ್ತ ಗ್ರಂಥಗಳು


| | | |
|---|---|---|
| ವಿಲಿಯಂ ರೇಂಜ್ | - | ಜವಹರ್‌ಲಾಲ್ ನೆಹರೂಸ್ ವರ್ಲ್ಡ್ ವ್ಯೂ, ಎ ಥಿಯರಿ ಆಫ್ ಇಂಟರ್‌ನ್ಯಾಷನಲ್ ರಿಲೇಷನ್ಸ್ |
| ಕೆ.ಪಿ.ಮಿಶ್ರ | - | ಸ್ಟಡೀಸ್ ಇನ್ ಇಂಡಿಯಾಸ್ ಫಾರಿನ್ ಪಾಲಿಸಿ |
| ಬಿಮಲಾ ಪ್ರಸಾದ್ | - | ಒರಿಜಿನ್ಸ್ ಆಫ್ ಇಂಡಿಯಾಸ್ ಫಾರಿನ್ ಪಾಲಿಸಿ |
| ಬಿ.ಆರ್.ನಂದಾ | - | ಇಂಡಿಯಾಸ್ ಫಾರಿನ್ ಪಾಲಿಸಿ, ದಿ ನೆಹರೂ ಇಯರ್ಸ್ |
| ಯೂರಿ ನಾಸೆಂಕೊ | - | ಜವಹರ್‌ಲಾಲ್ ನೆಹರೂ ಅಂಡ್ ಇಂಡಿಯಾಸ್ ಫಾರಿನ್ ಪಾಲಿಸಿ |
| ಎ. ಅಪ್ಪಾದೊರೈ | - | ದಿ ಡೊಮೆಸ್ಟಿಕ್ ರೂಟ್ಸ್ ಆಫ್ ಇಂಡಿಯಾಸ್ ಫಾರಿನ್ ಪಾಲಿಸಿ |


## 1.8 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> -1

1. ವಿಭಾಗ 1.2 ನೋಡಿ ಮತ್ತು
2. ವಿಭಾಗ 1.2 ಮತ್ತು 1.3 ನೋಡಿ

<u>ನಿಮ್ಮ ಪ್ರಗತಿ ಪರಿಶೀಲನೆ</u> -2

1. ವಿಭಾಗ 1.3 ನೋಡಿ
2. ವಿಭಾಗ 1.3.2 ನೋಡಿ

# ಘಟಕ 2 ಭಾರತ ವಿದೇಶಾಂಗ ನೀತಿಯ ಮೂಲ ತತ್ವಗಳು

## ರಚನೆ

2.0 ಉದ್ದೇಶಗಳು

2.1 ಪ್ರಸ್ತಾವನೆ

2.2 ಭಾರತದ ವಿದೇಶಾಂಗ ನೀತಿಯ ಮೂಲ ತತ್ವಗಳು

- 2.2.1 ಮಧ್ಯಮ ಮಾರ್ಗ
- 2.2.2 ಅಲಿಪ್ತ ನೀತಿ
- 2.2.3 ಅಂತರರಾಷ್ಟ್ರೀಯ ಶಾಂತಿ ಮತ್ತು ನಿಶ್ಯಸ್ತ್ರೀಕರಣ
- 2.2.4 ಮೈತ್ರಿಕೂಟಗಳಿಗೆ ವಿರೋಧ
- 2.2.5 ಆಶಾವಾದ ಮತ್ತು ವಾಸ್ತವವಾದದ ಮೈತ್ರೀಕರಣ
- 2.2.6 ಉದಾರ ಅಂತರರಾಷ್ಟ್ರೀಯತಾವಾದ
- 2.2.7 ವಿಶ್ವ ಸಾರ್ವತ್ರೀಕರಣ ಮತ್ತ ಬಹುರಾಷ್ಟ್ರೀಯತೆ
- 2.2.8 ಗಾಂಧೀವಾದ

2.3 ಸಮಾಪ್ತಿಗೊಳಿಸೋಣ

2.4 ಪ್ರಮುಖ ಪದಗಳು

2.5 ಕೆಲವು ಉಪಯುಕ್ತ ಗ್ರಂಥಗಳು

2.6 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 2.0 ಉದ್ದೇಶಗಳು

ಈ ಘಟಕವನ್ನು ಓದುವುದರಿಂದ, ನಿಮ್ಗೆ ಈ ಕೆಳಕಂಡ ವಿಷಯಗಳ ಅರಿವಾಗುತ್ತದೆ.

* ಭಾರತದ ವಿದೇಶಾಂಗ ನೀತಿಯಲ್ಲಿ ಅಡಗಿರುವ ಸಂಪದ್ಭರಿತ ಮೌಲ್ಯಗಳು
* ಭಾರತದ ವಿದೇಶಾಂಗ ನೀತಿಯ ರಚನೆಯಲ್ಲಿ ಸೇರಿರುವ ಮೂಲಭೂತ ತತ್ವಗಳು
* 21ನೇ ಶತಮಾನದಲ್ಲಿ ಭಾರತದ ವಿದೇಶಾಂಗ ನೀತಿಯ ಮಾರ್ಗದರ್ಶನದಲ್ಲಿ ತತ್ವಗಳ ಸಮಂಜಸತೆ

## 2.1 ಪ್ರಸ್ತಾವನೆ

ಯಾವುದೇ ಒಂದು ರಾಷ್ಟ್ರದ ವಿದೇಶಾಂಗ ನೀತಿಯ ಪ್ರಾಥಮಿಕ ಉದ್ದೇಶವೆಂದರೆ ತನ್ನ ರಾಷ್ಟ್ರದ ಹಿತಾಸಕ್ತಿಯನ್ನು ಕಾಪಾಡುವುದು ಹಾಗು ವೃದ್ಧಿಸುವುದು. ರಾಷ್ಟ್ರ ಹಿತಾಸಕ್ತಿಯಲ್ಲಿ ಅಡಕವಾಗಿರುವ ಗುರಿಗಳು. ರಾಷ್ಟ್ರದ ಭ್ದರತೆ, ಪರಮಾಧಿಕಾರಿ, ಅಭ್ಯುದ, ವಿಶ್ವಮಟ್ಟದಲ್ಲಿ ರಾಷ್ಟ್ರದ ಸ್ಥಾನಮಾನವನ್ನು ಹೆಚ್ಚಿಸುವುದು. ಆದರೆ ವಿದೇಶಾಂಗ ನೀತಿಯ ಗುರಿಗಳಲ್ಲಿ ಶಾಂತಿ, ನಿಶ್ಯಸ್ತ್ರೀಕರಣ ಮತ್ತು ಅಭಿವೃದ್ಧಿ, ಸಮಾನತೆಯನ್ನಾಧರಿಸಿದ ವಿಶ್ವ ವ್ಯವಸ್ಥೆಯೂ ಸೇರಿಸುತ್ತದೆ. ಭಾರತದ ವಿದೇಶಾಂಗ ನೀತಿಯ ಕಲ್ಪನೆ ಮತ್ತು ಆಚರಣೆಯಲ್ಲಿ ಮೇಲೆ ತಿಳಿಸಿದ ಎರಡೂ ತರಹದ ಗುರಿಗಳು ಹಾಸು ಹೊಕ್ಕಾಗಿವೆ.

ಭಾರತದ ವಿದೇಶಾಂಗ ನೀತಿಯು ನಮ್ಮ ಸ್ವಾತಂತ್ರ ಸಂಗ್ರಾಮದ ನಾಯಕರ ಆದರ್ಶಗಳು ಮತ್ತು ದೂರದೃಷ್ಟಿಯಿಂದ ಪ್ರೇರೇಪಿತಗೊಂಡವು. ಮೊದಲ ಪ್ರಧಾನಮಂತ್ರಿ ಜವಹರಲಾಲ್ ನೆಹರೂರವರು ತಮ್ಮ ಲೇಖನಗಳು ಹಾಗೂ ಭಾಷಣಗಳಲ್ಲಿ ತಿಳಿಸಿದಂತೆ ನಮ್ಮ ಸಾಂಸ್ಕೃತಿಕ ಮತ್ತು ತಾತ್ವಿಕ ಪರಂಪರೆಯನ್ನು ವಿದೇಶಾಂಗ ನೀತಿಯು ಸಮರ್ಪಕವಾಗಿ ಪ್ರತಿಬಿಂಬಿಸುತ್ತದೆ. ಸಂವಿಧಾನದ 51ನೇ ವಿಧಿಯಲ್ಲಿ ನಮೂದಿಸಿರುವಂತೆ ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ವೃದ್ಧಿಸುವುದು, ಅಂತರರಾಷ್ಟ್ರೀಯ ಕಾನೂನನ್ನು ಪಾಲಿಸುವುದು ಕರಾರು ಒಪ್ಪಂದಗಳ ಭಾದ್ಯತೆಗಳನ್ನು ಗೌರವಿಸುವುದು ಮತ್ತು ಅಂತರರಾಷ್ಟ್ರೀಯ ವ್ಯಾಜ್ಯಗಳ ಶಾಂತಿಯುತ ಸಂಧಾನಕ್ಕೆ ಶ್ರಮಿಸುವುದು ರಾಷ್ಟ್ರದ ಆದ್ಯ ಕರ್ತವ್ಯವಾಗಿದೆ.

1954ರಲ್ಲಿ ನೆಹರೂರವರು ಭಾರತ-ಚೀನಾ ವ್ಯಾಪಾರಕ್ಕೆ ಸಂಬಂಧಿಸಿದಂತೆ (ಟಿಬೆಟ್ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ) ಪಂಚಶೀಲ ನೀತಿಯನ್ನು ಪ್ರತಿಪಾದಿಸಿದರು. ಪಂಚಶೀಲವು ಮಿಲಿಟರಿ ಬಣಗಳಿಗೆ ಪರ್ಯಾಯವಾದ ಉತ್ತರವಾಗಿದೆ ಎಂದು ಹೇಳಿ, ಅಂತರರಾಷ್ಟ್ರೀಯ ವರ್ತನೆಯ ಐದು ಮಾದರಿ ಅಂಶಗಳನ್ನು ಸ್ಪಷ್ಟಪಡಿಸಿದರು.

1. ಗಡಿಭದ್ರತೆ ಮತ್ತು ಪರಮಾಧಿಕಾರಕ್ಕೆ ಪರಸ್ಪರ ಗೌರವ
2. ಆಕ್ರಮಣರಹಿತ ವರ್ತನೆ
3. ಉಭಯರ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವುದು
4. ಸಮಾನತೆ ಮತ್ತು ಪರಸ್ಪರ ಉಪಯೋಗಗಳ ಕಲ್ಪನೆ
5. ಶಾಂತಿಯುತ ಸಹಬಾಳ್ವೆ ಮತ್ತು ಆರ್ಥಿಕ ಸಹಕಾರ

ಭಾರತದ ವಿದೇಶಾಂಗ ನೀತಿಯ ಮುಖ್ಯ ನೀತಿ ಮತ್ತು ತಂತ್ರವು ಅಲಿಪ್ತನೀತಿಯಾಯಿತು. ಅಲಿಪ್ತ ನೀತಿಯು ಹಲವು ನಕರಾತ್ಮಕ ಮತ್ತು ಸಕಾರಾತ್ಮಕ ಅಂಶಗಳನ್ನು ಸಮರಸವಾದ ರೀತಿಯಲ್ಲಿ ತನ್ನಲ್ಲಿ ಅಳವಡಿಸಿಕೊಂಡಿದೆ. ಅಲಿಪ್ತ ನೀತಿಯ ನಕಾರಾತ್ಮಕ ಅಂಶವು ಮುಖ್ಯವಾಗಿ ಶಕ್ತಿ ರಾಜಕೀಯ ಮತ್ತು ಮಿಲಿಟರಿ ಬಣಗಳನ್ನು ವಿರೋದಿಸುವುದಾಗಿತ್ತು. ಶೀತಲಯುದ್ಧದ ಕಾಲದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳು, ಮುಖ್ಯವಾಗಿ ಅಮೇರಿಕಾದ ನಾಯಕರು, ಭಾರತ ತಮ್ಮೊಡನೆ ಸೇರದೆ, ಉದಾರವಾದದ ಮೌಲ್ಯಗಳ ಪರವಾಗಿ ವರ್ತಿಸದೆ, ತಟಸ್ಥ ನೀತಿಯನ್ನು ಅನುಸರಿಸಿತು ಎಂದು ಟೀಕಿಸಿದರು.

ಆದರೆ ಅಲಿಪ್ತ ನೀತಿಯ ಸ್ವರೂಪವು ವಿಭಿನ್ನವಾಗಿದೆ. ಅದಕ್ಕೆ ಆಸ್ಟ್ರಿಯಾ ಮತ್ತು ಸ್ವಿಜರ್‌ಲ್ಯಾಂಡ್ ರಾಷ್ಟ್ರಗಳ ತಾಟಸ್ಥತೆಗಿರುವಂತಹ ಕಾನೂನಿಕ ತಳಹದಿಯಿಲ್ಲ. ಅದರ ಸಕಾರಾತ್ಮಕ ಭಾವನೆಯಲ್ಲಿ ಅಲಿಪ್ತನೀತಿಯು ರಾಷ್ಟ್ರಗಳು ತಮ್ಮ ಪ್ರತ್ಯೇಕತೆಯನ್ನು, ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು, ಶಾಂತಿ ಮತ್ತು ನಿಶ್ಯಸ್ತ್ರೀಕರಣಕ್ಕೆ ಹೋರಾಡುವುದನ್ನು, ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿಗೆ ಶ್ರಮಿಸುವುದನ್ನು ಎತ್ತಿ ಹಿಡಿಯುತ್ತದೆ. ಈ ದೃಷ್ಟಿಕೋನದಲ್ಲಿ ನೋಡಿದಾಗ, ಅಲಿಪ್ತ ನೀತಿಯು ಭಾರತದ ವಿದೇಶಾಂಗ ನೀತಿಯ ಮೂಲ ಸ್ಥಂಭವಾಗಿತ್ತು ಹಾಗೂ ಸದಾ ಕಾಲದಲ್ಲಿಯೂ ಆಗಿರುತ್ತದೆ.

## 2.2 ಭಾರತದ ವಿದೇಶಾಂಗ ನೀತಿಯ ಮೂಲಭೂತ ತತ್ವಗಳು

### 2.2.1 ಮಧ್ಯಮ ಮಾರ್ಗ

'ಮಧ್ಯ ಮಾರ್ಗಕ್ಕಾಗಿ ಹೋರಾಡುವುದು ಮತ್ತು ಅದನ್ನು ಕಾಪಾಡಿಕೊಂಡು ಹೋಗುವುದು ಭಾರತದ ಪರಂಪರೆ ಮತ್ತು ಸಂಸ್ಕೃತಿಯಲ್ಲಿ ಅಡಗಿದೆ' ಎಂದು ನಳಿನಿಕಾಂತ್ ಡಾ ರವರು ಬಣ್ಣಿಸಿದ್ದಾರೆ. 'ಅತಿರೇಕವನ್ನು ಸದಾಕಾಲದಲ್ಲಿಯೂ ತ್ಯಜಿಸೋಣ' ಎಂಬ ಪುರಾತನ ಸಂಸ್ಕೃತಿ ಕಿವಿಮಾತು, ಭಾರತದಲ್ಲಿ ಮುಖ್ಯವಾಗಿ ರಾಜ್ಯದ ಅಧಿಕಾರವನ್ನು ನಡೆಸಿಕೊಂಡು ಬಂದಿದ್ದ ರಾಜರು ಪಾಲಿಸಿದ್ದನ್ನು ಸ್ವಾತಂತ್ರೋತ್ತರದ ಭಾರತದ ನಾಯಕರಾದ ಜವಹರಲಾಲ್ ನೆಹರೂರವರು ಅಳವಡಿಸಿಕೊಂಡು ತಮ್ಮ ವಿದೇಶಾಂಗ ನೀತಿಯನ್ನು ರೂಪಿಸಿಕೊಂಡರು ಎನ್ನುವುದು ಗಮನಾರ್ಹವಾದ ಅಂಶ. ಶ್ರೀ ದಾರಣಿಯವರು ಬಣ್ಣಿಸಿರುವಂತೆ 'ಭಾರತವು ಪಾಶ್ಚಿಮಾತ್ಯ ರಾಷ್ಟ್ರಗಳೊಡನೆ ವ್ಯಕ್ತಿ ಸ್ವಾತಂತ್ರ್ಯ, ಘನತೆ, ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆ, ಕಾನೂನಿನ ಶ್ರೇಷ್ಟತೆ ಹಾಗೂ ಅದರ ಪರಿಪಾಲನೆ ಇತ್ಯಾದಿ ಮೌಲ್ಯಗಳನ್ನು ಹಂಚಿಕೊಂಡಿದೆ. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳು ಸಮತಾವಾದದ ವಿರುದ್ಧ ತಾಳಿದ ಪ್ರತಿಕ್ರಿಯೆಯನ್ನು ಭಾರತ ಖಂಡಿಸಿತು ಹಾಗೂ ಅದರಿಂದ ದೂರವಿದ್ದಿತು. ನಿಜಕ್ಕೂ ಭಾರತವು ಸೋವಿಯತ್ ನಾಯಕರ ವಸಾಹತುಶಾಹಿ ನೀತಿಯ ಬಗೆಗಿನ ವಿರೋಧವನ್ನು ಮತ್ತು ಅವರ ಏಷನ್ನರ ಪರ ಕಾಳಜಿಯನ್ನು ಮೆಚ್ಚಿತು. ಈ ಮನೋಧರ್ಮದಿಂದ ಹೊರಹೊಮ್ಮಿದ ನೆಹರೂರವರ ನೀತಿಯೇ ಅಲಿಪ್ತನೀತಿ.

'ಶಕ್ತಿ ರಾಜಕೀಯದಿಂದ, ಮತ್ತು ಮಿಲಿಟರಿ ಕೂಟಗಳಿಂದ ದೂರವಿದ್ದು ಭಾರತ ವಿಶ್ವಶಾಂತಿ ಮತ್ತು ಸಹಕಾರಕ್ಕಾಗಿ ಶ್ರಮಿಸುತ್ತದೆ ಎಂದು ಸೆಪ್ಟೆಂಬರ್ 7,1946 ರಂದು ನೆಹರೂರವರು ಆಕಾಶವಾಣಿಯಲ್ಲಿ ಮಾಡಿದ ಭಾಷಣವು ಸಕಲ ದೃಷ್ಟಿಯಿಂದಲೂ ಭಾರತದ ವಿದೇಶಾಂಗ ನೀತಿಯ ಅಡಿಪಾಯವಾಯಿತು. ತಮ್ಮ ಭಾಷಣದ ಮೂಲಕ ನೆಹರೂರವರು ಭಾರತವು ಅಮೇರಿಕಾ, ನೆರೆರಾಷ್ಟ್ರಗಳಾದ ಸೋವಿಯತ್ ಒಕ್ಕೂಟ, ಚೀನಾಗಳೊಡನೆ ಮೈತ್ರಿಯನ್ನು ಬೆಳೆಸಿಕೊಂಡು ಅಲಿಪ್ತ ನೀತಿಯ ಮೂಲಕ ವಿಶ್ವರಾಜಕಾರಣದಲ್ಲಿ ಸಕ್ರಿಯವಾಗಿ ತನ್ನ ಪಾತ್ರವನ್ನು ನಿಭಾಯಿಸುತ್ತದೆಂದು ಹೇಳಿ, ಭಾರತದ ವಿಶ್ವವ್ಯಾಪೀ ವಿದೇಶಾಂಗ ನೀತಿಯ ವೈಶಿಷ್ಟ್ಯತೆಯನ್ನು ಅಂತರರಾಷ್ಟ್ರೀಯ ಸಮುದಾಯದ ಮುಂದಿಟ್ಟರು.

ಅಲಿಪ್ತ ನೀತಿಯು ಸಕಾರಾತ್ಮಕವಾದ ನೀತಿ ಎಂದು ಒತ್ತಿಹೇಳಿದ ನೆಹರೂರವರು, ಅದರ ಮೂಲವನ್ನು ಅಶೋಕರ ಕಾಲಕ್ಕೆ ಕೊಂಡೊಯ್ದರು. ಪ್ರಾಚೀನ ಭಾರತದ ತಾತ್ವಿಕ ಪರಂಪರೆಯಾದ 'ಸರ್ವೇ ಜನೋ ಸುಖಿನೋಭವಂತು' ಧ್ಯೇಯವನ್ನು ಅಲಿಪ್ತ ನೀತಿಯು

ಅಳವಡಿಸಿಕೊಂಡಿರುವುದಾಗಿ ನೆಹರೂರವರು ಅರ್ಥಪೂರ್ಣವಾಗಿ ನುಡಿದರು. ಆರ್.ಕೆ. ಕಾರಂಜಿಯವರು 'ಭಾರತದ ಮಧ್ಯ ಅಥವಾ ಮೂರನೇ ಮಾರ್ಗವು ಬಂಡವಾಳಶಾಹಿ ಮತ್ತು ಸಮತಾವಾದ ಸಿದ್ಧಾಂತಗಳ ಧ್ಯೇಯಗಳನ್ನು ಆಂತರಿಕವಾಗಿ ಹಾಗೂ ಬಾಹ್ಯವಾಗಿ ವಿರಸವಿಲ್ಲದೆ ಅಳವಡಿಸಿಕೊಂಡಿದೆ' ಎಂದು ತಮ್ಮ ಲೇಖನದಲ್ಲಿ ವರ್ಣಿಸಿದ್ದಾರೆ.

## 2.3.2 ಅಲಿಪ್ತ ನೀತಿ

ಸ್ವಾತಂತ್ರಪೂರ್ವದಲ್ಲಿಯೇ ಭಾರತವು ಏಷ್ಯ ಮತ್ತು ಆಫ್ರಿಕಾ ಖಂಡಗಳಲ್ಲಿನ ಸ್ವಾತಂತ್ರದ ಚಳುವಳಿಗಳ ಪ್ರತೀಕವಾಗಿತ್ತು. ಭಾರತದ ಚರಿತ್ರೆ, ಭೌಗೋಳಿಕ ಸ್ಥಾನ, ರಾಷ್ಟ್ರ ಹಿತಾಸಕ್ತಿ, ನಾಯಕತ್ವ ಹಾಗೂ ಅವರ ಧ್ಯೇಯಗಳು ಅಲಿಪ್ತ ನೀತಿಯ ಬೆಳವಣಿಗೆಗೆ ಕಾರಣವಾದವು. ಮುಖ್ಯವಾಗಿ ಎರಡು ಅಂಶಗಳು ಭಾರತವನ್ನು ಅಲಿಪ್ತ ನೀತಿಯತ್ತ ಕೊಂಡೊಯ್ಯಿತು.

1. ಶೀತಲ ಯುದ್ಧದ ಹಾಗೂ ಸಾಮ್ರಾಜ್ಯಶಾಹೀ ರಾಷ್ಟ್ರಗಳ ಪಿತೂರಿಯಿಂದ ಭಾರತವನ್ನು ದೂರವಿಡುವ ಮಹದಾಕಾಂಕ್ಷೆ
2. ವಿಶ್ವರಾಜಕಾರಣದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆನ್ನುವ ಸ್ವಯಂಪ್ರೇರಣೆ.

ಈ ಅಂಶವನ್ನು ಬಿಮಲ್ ಪ್ರಸಾದ್‌ರವರು ತಮ್ಮ Origins of India's Foreign Policy ಗ್ರಂಥದಲ್ಲಿ ವಿಸ್ತಾರವಾಗಿ ಅರ್ಥೈಸಿದ್ದಾರೆ.

ಬೃಹತ್ ರಾಷ್ಟ್ರದ ಅನುಯಾಯಿಯಾದರೆ, ಭಾರತವು ವಿಶ್ವಮಟ್ಟದಲ್ಲಿ ತನ್ನ ಪಾತ್ರವನ್ನು ಸ್ವತಂತ್ರವಾಗಿ, ಪರಿಪೂರ್ಣವಾಗಿ ನಿಭಾಯಿಸಲು ಸಾಧ್ಯವಾಗುವುದಿಲ್ಲವೆಂದು ನೆಹರೂರವರು ತಮ್ಮ ಹಲವಾರು ಭಾಷಣಗಳಲ್ಲಿ ಪ್ರತಿಪಾದಿಸಿದರು.

ಭಾರತದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದಲೂ ಅಲಿಪ್ತನೀತಿಯು ಸಮಂಜಸವಾಗಿತ್ತು. ನೆಹರೂರವರೇ ತಿಳಿಸಿದಂತೆ ಅಲಿಪ್ತನೀತಿಯ ಪರಿಣಾಮವಾಗಿ ಭಾರತವು ಹಲವಾರು ಮೂಲಗಳಿಂದ ಆರ್ಥಿಕ ನೆರವನ್ನು ಪಡೆಯಲು ಅವಕಾಶವಾಯಿತು. ನೆಹರೂರವರ ಕಾಲದ ಭಾರತದ ಪರಿಸ್ಥಿತಿಯನ್ನು ಗಮನಿಸಿದರೆ ಭಾರತವು ಆರ್ಥಿಕ ನೆರವನ್ನು ಅಮೇರಿಕಾ, ಇತರೆ ಪಾಶ್ಚಿಮಾತ್ಯ ರಾಷ್ಟ್ರಗಳು ಹಾಗೂ ಸೋವಿಯತ್ ಒಕ್ಕೂಟದಿಂದ ಪಡೆದು ಗಮನಾರ್ಹವಾಗಿ ತನ್ನ ಆರ್ಥಿಕ, ಕೈಗಾರಿಕಾ ಮತ್ತು ತಾಂತ್ರಿಕ ಬೆಳವಣಿಗೆಯನ್ನು ಸಾಧಿಸಿತು. ಇದಕ್ಕೆ ವಿರೋಧವಾಗಿ ಭಾರತವು ಯಾವುದಾದರೊಂದು ಬೃಹತ್ ರಾಷ್ಟ್ರದೊಡನೆ ಮಿಲಿಟರಿ ರೂಪದಲ್ಲಿ ತನ್ನನ್ನು ತಾನು ಜೋಡಿಸಿಕೊಂಡು ಅದರ ಅನುಯಾಯಿ ರಾಷ್ಟ್ರವಾಗಿದ್ದರೆ ಅಂತಹ ನೀತಿ ನೆಹರೂರವರೆ ಅರ್ಥೈಸಿರುವಂತೆ ಈ ಕೆಳಕಂಡ ನ್ಯೂನತೆಗಳು/ಗೋಷಗಳು ಉಂಟಾಗುತ್ತಿದ್ದವು.

1. ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತ ಕೇವಲ ಅನುಯಾಯಿ ರಾಷ್ಟ್ರವಾಗಿರುತ್ತಿತ್ತು, ಸ್ವತಂತ್ರವಾದ ಪಾತ್ರವನ್ನು ನಿಭಾಯಿಸಲು ಸಾಧ್ಯಾವಗುತ್ತಿರಲಿಲ್ಲ.
2. ಕೇವಲ ಒಂದೇ ಮೂಲದಿಂದ ಆರ್ಥಿಕ ನೆರವು ಸಿಗುತ್ತಿತ್ತು. ಆದರೆ ಹಲವಾರು ಮೂಲಗಳಿಂದಲ್ಲ.
3. ಮುಖ್ಯವಾಗಿ ಏಷ್ಯಾ ಖಂಡದಲ್ಲಿ ಮತ್ತು ತೃತೀಯ ಜಗತ್ತಿನಲ್ಲಿ ಭಾರತವು ನಾಯಕನ ರೂಪದಲ್ಲಿ ಹೊರಹೊಮ್ಮಲು ಸಾಧ್ಯವಾಗುತ್ತಿರಲಿಲ್ಲ. ಹಲವು ವಿಶ್ಲೇಷಕರು ಬಣ್ಣಿಸಿರುವಂತೆ ಅಲಿಪ್ತ ನೀತಿಯನ್ನು ಪ್ರತಿಪಾದಿಸುವ ನೆಹರೂರವರ ಒಂದು ಉದ್ದೇಶವು ತೃತೀಯ ಜಗತ್ತಿನ ನಾಯಕತ್ವವನ್ನು ಭಾರತ ತನ್ನದಾಗಿಸಿಕೊಳ್ಳುವುದಾಗಿತ್ತು. ಮತ್ತಿತರ ದೃಷ್ಟಿಯಲ್ಲಿ ನೆಹರೂರವರು ಸ್ವತಃ ತೃತೀಯ ಜಗತ್ತಿನ ನಾಯಕತ್ವವನ್ನು ನಿಭಾಯಿಸಬೇಕೆನ್ನುವ ಮಹದಾಕಾಂಕ್ಷೆಯನ್ನು ಹೊಂದಿದ್ದರು, ಈ ಕಾರಣದಿಂದಲೂ ಕೂಡ ಭಾರತಕ್ಕೆ ಅಲಿಪ್ತ ನೀತಿಯನ್ನು ಅಳವಡಿಸಿಕೊಂಡರೆನ್ನುವುದು ಅವರ ವಾದ. ಒಂದು ರೀತಿಯಲ್ಲಿ ಬಹುಶಃ ಇಂತಹ

ವಾದದಲ್ಲಿ ಸ್ವಲ್ಪ ಮಟ್ಟಿಗಾದರೂ ಸತ್ಯಾಂಶವಿತ್ತು ಎನ್ನಿಸುತ್ತದೆ. 1950 ಮತ್ತು 60 ರ ದಶಕದಲ್ಲಿ ಏಷ್ಯಾ ಖಂಡದ ನಾಯಕತ್ವಕ್ಕಾಗಿ ಭಾರತ ಮತ್ತು ಚೀನಾದೊಡನೆ ಪೈಪೋಟಿಯಿದ್ದಿತು. ಬಹುಶಃ ತೃತೀಯ ಜಗತ್ತಿನ ನಾಯಕತ್ವದ ದೃಷ್ಟಿಯಿಂದ ಚೀನಾ ಅಲಿಪ್ತ ನೀತಿಯನ್ನು ಚಳುವಳಿಯನ್ನು ನೇರವಾಗಿ ಬೆಂಬಲಿಸಲಿಲ್ಲ.

ಅಂತರರಾಷ್ಟ್ರೀಯ ಶಾಂತಿ, ನಿಶ್ಯಸ್ತ್ರೀಕರಣ, ಸಮಸ್ಯೆಗಳ ಶಾಂತಿಯುತ ಪರಿಹಾರ, ನ್ಯಾಯ ಮತ್ತು ಸಮಾನತೆಯನ್ನು ಆಧರಿಸಿದ ನೂತನ ಅಂತರರಾಷ್ಟ್ರೀಯ ವ್ಯವಸ್ಥೆಯ ಸ್ಥಾಪನೆ, ಪ್ರಾದೇಶಿಕ ಸಹಕಾರ ಹಾಗೂ ಅಂತಿಮವಾಗಿ ವಿಶ್ವ ಸರ್ಕಾರದ ರಚನೆ ಭಾರತದ ಹಾಗೂ ಜವಹರಲಾಲ್ ನೆಹರೂರವರ ಪರಮ ಧ್ಯೇಯಗಳಾಗಿದ್ದವು. ಈ ಎಲ್ಲಾ ಧ್ಯೇಯಗಳ ಗುರುತರ ಸಾಧನೆಗೆ ಭಾರತಕ್ಕೆ ಇದ್ದುದು ಒಂದೇ ಮಾರ್ಗ. ಅಲಿಪ್ತನೀತಿ ಮತ್ತು ಹಂತಹಂತವಾಗಿ ಅಲಿಪ್ತ ಚಳುವಳಿಯ ಸ್ಥಾಪನೆ, ಕಾರ್ಯಾಚರಣೆ. ಈ ಗಂಭೀರ ಅಂಶವನ್ನು ಭಾರತದ ವಿದೇಶಾಂಗ ನೀತಿಯ ವಿದ್ಯಾರ್ಥಿಗಳಾಗಿ, ವಿಶ್ಲೇಷಕರಾಗಿ ನಾವು ಪರಿಗಣಿಸಲೇಬೇಕಾಗುತ್ತದೆ. ಏಕೆಂದರೆ ಮೇಲೆ ತಿಳಿಸಿರುವ ಎಲ್ಲಾ ಧ್ಯೇಯಗಳ ಸಾಧನೆಯು ಮಿಲಿಟರಿ ಬಣವನ್ನು ಸೇರುವ ನೀತಿಯಿಂದ (ಹಾಗೂ ಮಾರ್ಗದಿಂದ) ಸಾಧ್ಯವಿರಲಿಲ್ಲ.

ಸಾರಾಂಶವಾಗಿ ಪುನರುಚ್ಚರಿಸಿದರೆ ಅಲಿಪ್ತ ನೀತಿಯು ಈ ಕೆಳಕಂಡವುಗಳಿಂದ ದೂರವಾಗಿತ್ತು.

1. ಶೀತಲ ಸಮರ
2. ಸೈದ್ಧಾಂತಿಕ ಧರ್ಮಗಳು
3. ಶಸ್ತ್ರಾಸ್ತ್ರಗಳ ಪೈಪೋಟಿ
4. ಮಿಲಿಟರಿ ಬಣಗಳು/ ಕೂಟಗಳು

ಆದರೆ ಅಲಿಪ್ತ ನೀತಿಯು ತಟಸ್ಥ ನೀತಿಯೂ ಆಗಿರಲಿಲ್ಲ. ತಟಸ್ಥತೆಯ ಆಸ್ಟ್ರಿಯಾ, ಸ್ವಿಜರ್‌ಲ್ಯಾಂಡ್ ನಂತರ ರಾಷ್ಟ್ರಗಳು ಅನುಸರಿಸಿದ ವಿದೇಶಾಂಗ ನೀತಿಯಾಗಿತ್ತು. ಬಾರತದ ಅಲಿಪ್ತ ನೀತಿಯ ಸಕಾರಾತ್ಮಕ ಅರ್ಥವನ್ನು ನೆಹರೂರವರು ಅಮೇರಿಕಾದಲ್ಲಿ ತಾವು ನೀಡಿದ ಒಂದು ಭಾಷಣದಲ್ಲಿ ತಿಳಿಸಿದಂತೆ 'ಎಲ್ಲಾದರೂ ಸ್ವಾತಂತ್ರ್ಯಕ್ಕೆ ಬೆದರಿಕೆಯಾದರೆ, ನ್ಯಾಯವು ತಿರಸ್ಕೃತವಾದರೆ ಅಂತಹ ಪರಿಸ್ಥಿತಿಯಲ್ಲಿ ಭಾರತವು ತಟಸ್ಥ್ಯವಾಗಿರುವುದಿಲ್ಲ'. ಭಾರತದ ಅಲಿಪ್ತ ನೀತಿಯ ವಿಶೇಷ ಲಕ್ಷಣಗಳು, ಈ ಹಿಂದೆಯೇ ತಿಳಿಸಿದಂತೆ, ಈ ಕೆಳಕಂಡಂತಿದ್ದವು.

1. ಮಿಲಿಟರಿ ಬಣಗಳ ತಿರಸ್ಕಾರ
2. ಭಾರತದ ಪ್ರತ್ಯೇಕತೆಯ ಕಾಪಾಡುವಿಕೆ
3. ಸ್ವತಂತ್ರವಾಗಿ ಅಂತರರಾ,ಟ್ರೀಯ ವಿಷಯಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು
4. ರಾಷ್ಟ್ರ ಹಿತಾಸಕ್ತಿಯನ್ನು ಅಂತರರಾಷ್ಟ್ರೀಯ ಹಿತಾಸಕ್ತಿಯೊಡನೆ ಜೋಡಿಸುವುದು.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1.** ಬೃಹತ್ ರಾಷ್ಟ್ರಗಳೊಡನೆ ಭಾರತವನ್ನು ಮಿಲಿಟರಿ ಬಣಗಳಲ್ಲಿ ಸೇರಿಸದಿರಲು ನೆಹರೂರವರು ನೀಡಿದ ಕಾರಣಗಳನ್ನು ತಿಳಿಸಿ.

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**2.** ಭಾರತದ ಅಲಿಪ್ತ ನೀತಿಯ ಲಕ್ಷಣಗಳನ್ನು ಹಾಗೂ ಧ್ಯೇಯಗಳಾವುವು?ವಿವರಿಸಿ.

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

### 2.2.3 ಅಂತರರಾಷ್ಟ್ರೀಯ ಶಾಂತಿ ಮತ್ತು ನಿಶ್ಯಸ್ತ್ರೀಕರಣ

ಭಾರತದ ವಿದೇಶಾಂಗ ನೀತಿಯು ಸಾಂಪ್ರದಾಯಿಕವಾಗಿ ಅಂತರರಾಷ್ಟ್ರೀಯ ಶಾಂತಿ ಮತ್ತು ನಿಶ್ಯಸ್ತ್ರೀಕರಣದಲ್ಲಿ ಅಪಾರ ನಂಬಿಕೆಯನ್ನು ಇಟ್ಟುಕೊಂಡಿದೆ. ಮಿಲಿಟರಿ ಮಾರ್ಗದ ಮುಖೇ ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಪರಿಹರಿಸುವುದನ್ನು ವಿರೋಧಿಸುತ್ತದೆ. ಮಿಲಿಟರಿ ಮಾರ್ಗವನ್ನು ಅನಿಷ್ಟ ಮಾರ್ಗವೆಂದು ಹಾಗೂ ಅದರಿಂದ ದುಷ್ಪರಿಣಾಮಗಳೇ ಹೊರಹೊಮ್ಮುವುದೆಂದು ನೆಹರೂರವರು ಭಾವಿಸಿದ್ದರು. ಅವರ ದೃಷ್ಟಿಯಲ್ಲಿ ಮಿಲಿಟರಿ ಮಾರ್ಗವು ಚರಿತ್ರೆಯಲ್ಲಿ ಯುದ್ಧಗಳನ್ನು ಸೃಷ್ಟಿಸುತ್ತವೆಯೇ ಹೊರತು ಶಾಂತಿಯನ್ನಲ್ಲ. ಅವರ ವಾದಕ್ಕೆ ಪೂರಕವಾಗಿ ವಿಶ್ವದ ಎರಡು ಮಹಾ ಯುದ್ಧಗಳನ್ನು ಮತ್ತು ಯುರೋಪ್ ಖಂಡದಲ್ಲಿ ಹಿಂದಿನಿಂದಲೂ ನಡೆದುಬಂದಿದ್ದ ಯುದ್ಧಗಳನ್ನು ನೆಹರೂರವರು ನೆನಪು ಮಾಡಿದರು.1950ರಲ್ಲಿ ಕೊರಿಯಾದಲ್ಲಿ ಯುದ್ಧವಾದಾಗ, ವಿಶ್ವಸಂಸ್ಥೆಯು ದಕ್ಷಿಣ ಕೊರಿಯಾ ಪ್ರದೇಶದ ರಕ್ಷಣೆಗೆ ಹೋಗಿ ಉತ್ತರ ಕೊರಿಯಾವನ್ನು ಆಕ್ರಮಣಕಾರಿಯನ್ನು ಎದುರಿಸಿದ್ದನ್ನು ಸಮರ್ಥಿಸಿಕೊಂಡರು. ಅಣ್ವಸ್ತ್ರ ಯುಗದಲ್ಲಿ ಯುದ್ಧವು ವಿನಾಶಕಾರಿಯೇ ಎಂಬುದು ನೆಹರೂರವರ ಅಚಲ ನಂಬಿಕೆಯಾಗಿತ್ತು. ಈ ಕಾರಣದಿಂದಲೇ ಅವರು ಅಧಿಕಾರದಲ್ಲಿದ್ದಷ್ಟು ಕಾಲವೂ ನಿಶ್ಯಸ್ತ್ರೀಕರಣದ ಪರವಾಗಿ ವಾದಿಸಿದರು. ಭಾರತದ ಪ್ರಧಾನಮಂತ್ರಿಯಾಗಿ ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟದ ನಾಯಕರಿಗೆ 50ರ ದಶಕದಲ್ಲಿ ಹಲವು ಬಾರಿ ಪತ್ರಗಳನ್ನು ಬರೆದು ನಿಶ್ಯಸ್ತ್ರೀಕರಣದ ಪರವಾಗಿ ಮಾತುಕತೆಗಳನ್ನು ಪ್ರಾರಂಭಿಸಬೇಕೆಂದು ಒತ್ತಾಯಿಸಿದ್ದರು. 1954ರಲ್ಲಿ ಅಣ್ವಸ್ತ್ರ ಪ್ರಸರಣದ ನಿಷೇದದ ಸಂಬಂಧಿಸಿದಂತೆ ತಾತ್ಕಾಲಿಕ ಒಪ್ಪಂದವನ್ನು ಮಾಡಿಕೊಂಡು ಶಾಶ್ವತ

ನಿಷೇದದ ಬಗ್ಗೆ ಮಾತುಕತೆಗಳನ್ನು ನಡೆಸಲು ಒಂದು ತಾತ್ಕಾಲಿಕ ಒಪ್ಪಂದಕ್ಕೆ ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟವು ಸಹಿಹಾಕಬೇಕೆಂದು ಪ್ರಸ್ತಾಪಮಾಡಿದರು. 1994ರಲ್ಲಿ ಅಮೇರಿಕಾದ ಅಧ್ಯಕ್ಷ ಬಿಲ್ ಕ್ಲಿಂಟನ್‌ರವರು ವಿಸ್ತೃತ ಅಣ್ವಸ್ತ್ರ ಪ್ರಸರಣ ನಿಷೇದ ಒಪ್ಪಂದದ ಬಗ್ಗೆ ವಿಶ್ವಸಂಸ್ಥೆಯ ಆಶ್ರಯದಲ್ಲಿ ಮಾತುಕತೆಗಳಿಗೆ ಚಾಲನೆ ನೀಡಿದಾಗ, ಇಡೀ ವಿಶ್ವದಲ್ಲಿ ತಜ್ಞರು ಕ್ಲಿಂಟನ್ನರ ಪ್ರಸ್ತಾಪವು ನೆಹರೂರವರ 1954 ರ ಪ್ರಸ್ತಾಪದ ಪ್ರತಿರೂಪ ಎಂದು ಪರಿಗಣಿಸಿ, ನೆಹರೂರವರ ದೂರದೃಷ್ಟಿಯ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು. ವಿಪರ್ಯಾಸವೆಂದರೆ ಅಮೇರಿಕಾದ ಸಲಹೆಯ ಮೇರೆಗೆ ಹಸ್ತಾಕ್ಷರಗೊಂಡ ಸಿ.ಟಿ.ಬಿ.ಟಿ.ಯನ್ನು ಅಲ್ಲಿನ ಸೆನೆಟ್ ತಿರಸ್ಕರಿಸಿತು.

1962 ರಲ್ಲಿ ಬೃಹತ್ ರಾಷ್ಟ್ರಗಳು ಸಂಧಾನದ ಮೂಲಕ ಸಹಿಹಾಕಿದ ಭಾಗಶಃ ಅಣ್ವಸ್ತ್ರ ಪ್ರಸರಣ ನಿಷೇದ ಒಪ್ಪಂದವನ್ನು (ಪಿ.ಟಿ.ಬಿ.ಟಿ) ನೆಹರೂರವರು ನಿಶ್ಯಸ್ತ್ರೀಕರಣದ ಪರವಾದ ಪ್ರಥಮ ಹೆಜ್ಜೆಯೆಂದು ಕೊಂಡಾಡಿ, ಭಾರತವೂ ಅದರಲ್ಲಿ ಭಾಗಿಯಾಗುವಂತೆ ಮಾಡಿದರು. ಈ ಬೆಳವಣಿಗೆಯು ನೆಹರೂರವರು ಅಂತರರಾಷ್ಟ್ರೀಯಶಾಂತಿ ಮತ್ತು ನಿಶ್ಯಸ್ತ್ರೀಕರಣದ ಬಗ್ಗೆ ಇಟ್ಟುಕೊಂಡಿದ್ದ ಅಪಾರ ನಂಬಿಕೆಗೆ ಸಾಕ್ಷಿಯಾಗಿತ್ತು.

## 2.2.4 ಒಪ್ಪಂದಗಳು ಮತ್ತು ಮಿಲಿಟರಿ ಕೂಟಗಳ ವಿರೋಧ

ಭಾರತವು ಅಹಿಂಸೆಯ ಮಾರ್ಗದ ಸ್ವಾತಂತ್ರವನ್ನು ಪಡೆಯಲು ಹಾಕಿಕೊಂಡ ಮಾರ್ಗವು ನೆಹರೂರವರ ಮೇಲೆ ತೀವ್ರವಾದ ಸಕಾರಾತ್ಮಕ ಪ್ರಭಾವವನ್ನು ಬೀರಿತ್ತು. ಬಹುಶಃ ಆ ಕಾರಣದಿಂದ ಮತ್ತು ಚರಿತ್ರೆಯಲ್ಲಿ ಯುದ್ಧಮಾರ್ಗವು ಶಾಂತಿಯನ್ನು ಸ್ಥಾಪಿಸುವಲ್ಲಿ ವಿಫಲವಾಗಿದ್ದರಿಂದಲೂ ನೆಹರೂರವರು ಯುದ್ಧ ಹಾಗೂ ಮಿಲಿಟರಿ ಬಣಗಳನ್ನು ಮತ್ತು ಒಪ್ಪಂದಗಳನ್ನು ಸ್ಪಷ್ಟವಾಗಿ ವಿರೋಧಿಸಿದರು. ಭಾರತದ ಚರಿತ್ರೆಯಲ್ಲಿ ಬುದ್ಧ ಮತ್ತು ಅಸೋಕರವರು ಯುದ್ಧ ಮಾರ್ಗವನ್ನು ವಿರೋಧಿಸಿದ್ದನ್ನು ಮೆಚ್ಚಿಕೊಂಡು ಅದರಿಂದಲೂ ನೆಹರೂರವರು ಪ್ರಭಾವಿತರಾಗಿದ್ದರು.

ರಾಷ್ಟ್ರಗಳು ಯುದ್ಧದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಾಗ ತಾತ್ಕಾಲಿಕವಾಗಿ ಮಿಲಿಟರಿ ಬಣಗಳನ್ನು ಸೃಷ್ಟಿಸುವುದರಿಂದ ಲಾಭವನ್ನು ಪಡೆಯಬಹುದೆಂಬ ವಾದವನ್ನು ನೆಹರೂರವರು ಒಪ್ಪಿಕೊಂಡರೂ ಸಹ ಅವರ ದೃಷ್ಟಿಯಲ್ಲಿ ಶಾಶ್ವತವಾದ ಶಾಂತಿ ಸ್ಥಾಪನೆಗೆ ಯುದ ಮಾರ್ಗವಾಗಲೀ ಅಥವಾ ಮಿಲಿಟರಿ ಬಣಗಳು ಮತ್ತು ಒಪ್ಪಂದಗಳಾಗಲೀ ಉಪಯುಕ್ತವಾಗುವುದು ಅಸಾಧ್ಯವಾಗಿತ್ತು. ಮಿಲಿಟರಿ ಬಣಗಳು ಮತ್ತು ಒಪ್ಪಂದಗಳನ್ನು ಈ ಕೆಳಕಂಡ ಕಾರಣಗಳಿಂದ ನೆಹರೂರವರು ವಿರೋಧಿಸಿದರು.

ಮಿಲಿಟರಿ ಬಣಗಳು ಮತ್ತು ಒಪ್ಪಂದಗಳು ಒಂದು ನಿರ್ಧಿಷ್ಟ ವೈರಿರಾ,ಟ್ರ ಥವಾ ವೈರಿಯಾಗಬಲ್ಲ ರಾಷ್ಟ್ರದ ವಿರುದ್ಧ ಅಸ್ತಿತ್ವಕ್ಕೆ ಬರುವುದರಿಂದ, ವೈರಿ ರಾಷ್ಟ್ರವನ್ನು ಹಾಗೂ ವೈರಿಯಾಗಬಲ್ಲ ರಾಷ್ಟ್ರವನ್ನು ಮಿತ್ರನನ್ನಾಗಿ ಪರಿವರ್ತಿಸುವುದು ಅಸಾಧ್ಯವಾಗಿ ವೈರತ್ವವು ಮುಂದುವರೆಯುತ್ತದೆ. ಈ ತರಹದ ವಾತಾವರಣದಲ್ಲಿ ಶಾಂತಿಯನ್ನು ಬೆಳಸಲಾಗುವುದಿಲ್ಲ.

ಒಪ್ಪಂದಗಳು ಮತ್ತು ಮಿಲಿಟರಿ ಬಣಗಳು ರಾಷ್ಟ್ರಗಳ ನಡುವೆ ಉಂಟಾಗುವ ದ್ವೇಷ ಮತ್ತು ವೈಷಮ್ಯದ ಮೂಲ ಕಾರಣಗಳನ್ನು ತೊಲಗಿಸದೆ, ಕೇವಲ ಬಾಹ್ಯ ಗುರುತಗಳನ್ನು ಅಳಿಸಲು ಮುಂದಾಗುವುದರಿಂದ ವಿಶ್ವದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಸಾಧಿಸಲಾಗಿಲ್ಲವೆನ್ನುವುದು ಭಾರತದ ಅಲಿಪ್ತನೀತಿಯ ಧೃಡ ವಿಶ್ವಾಸವಾಗಿತ್ತು. ಅದೇ ಕಾರಣಕ್ಕಾಗಿಯೇ ನೆಹರೂರವರು ವಾಷಿಂಗ್‌ಟನ್ ನೌಕಾ ಒಪ್ಪಂದ, ಲೊಕಾರ್ನೊ ಒಪ್ಪಂದ, ಕೆಲಾಗ್ ಬ್ರೈಯಾಂಡ್ ಒಪ್ಪಂದ, ಆಂಗ್ಲೋ ಫ್ರೆಂಚ್ ನೌಕಾ ಒಪ್ಪಂದಗಳನ್ನು ತಿರಸ್ಕರಿಸಿ ಅವುಗಳ ಉಪಯುಕ್ತತೆಯನ್ನು ಪ್ರಶ್ನಿಸಿದರು. ಅದೇ ರೀತಿಯಲ್ಲಿ ಶೀತಲ ಸಮರದ ಯುಗದಲ್ಲಿ ಅಸ್ತಿತ್ವಕ್ಕೆ ಬಂದ ಹಾಗೂ ಸಿಯ್ಯಾಟೋ ಒಪ್ಪಂದಗಳನ್ನು ತಿರಸ್ಕರಿಸಿ ಅವುಗಳ ಸೃಷ್ಟಿ ವಿಶ್ವಶಾಂತಿಗೆ ಮಾರಕವೆಂದು ನುಡಿದರು.

ಮಿಲಿಟರಿ ಬಣಗಳು ಮತ್ತು ಒಪ್ಪಂದಗಳು ಸ್ಥಳೀಯ ಯುದ್ಧಗಳ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ ಎನ್ನುವುದು ಕೂಡ ಭಾರತದ ವಾದವಾಗಿತ್ತು. ಈ ರೀತಿಯ ಒಪ್ಪಂದಗಳಿಂದ ವಸಾಹತುಶಾಹಿಯ ಪುನರ್ ಪ್ರವೇಶ ಏಷ್ಯಾ ಮತ್ತು ಆಫ್ರಿಕಾ ಖಂಡಗಳಲ್ಲಿ ಆಗುವುದೆಂಬ ಭೀತಿಯು ನೆಹರೂರವರನ್ನು ಕಾಡುತ್ತಿತ್ತು. ನೇಟೋ ಬಣವು ವಸಾಹತುಶಾಹಿಯ ಸಮರ್ಥನೆಯ ಪರವಾದ ಒಪ್ಪಂದವಾಗಿದೆ ಎಂಬ ಅಭಿಪ್ರಾಯವನ್ನು 1952ರಲ್ಲಿ ಮಿಲಿಟರಿ ಒಪ್ಪಂದವಾದಾಗ ದಕ್ಷಿಣ ಏಷ್ಯಾ ರಾಷ್ಟ್ರಗಳ ಶಾಂತಿಗೆ ಭಾಗವಾಗುವುದೆಂದು ತೀವ್ರವಾದ ವಿಷಾದ ವ್ಯಕ್ತಪಡಿಸಿದ್ದರು.

ಮಿಲಿಟರಿ ಬಣಗಳು ಮತ್ತು ಒಪ್ಪಂದಗಳು ತಾತ್ಕಾಲಿಕ ಹಿತಾಸಕ್ತಿಯ ಕಾರಣಗಳಿಂದ ನೆನ್ನೆಯ ಶತ್ರುಗಳನ್ನು ಇಂದಿನ ಮಿತ್ರರನ್ನಾಗಿ ಮಾಡುತ್ತವೆ ಎನ್ನುವುದು ಕೂಡ ನೆಹರೂರವರ ಅಭಿಪ್ರಾಯವಾಗಿತ್ತು. ಉದಾಹರಣೆಗೆ ಹಿಂದೆ ವೈರಿಗಳಾಗಿದ್ದ ಹಿಟ್ಲರ್ ಮತ್ತು ಸ್ಟಾಲಿನ್ 1939ರಲ್ಲಿ ಮಿತ್ರರಾಗಿದ್ದನ್ನು ಸ್ಮರಿಸಿದ್ದರು.

## ನಿಮ್ಮ ಪ್ರಗತಿ ಪರಿಶೀಲನೆ - 2

ಸೂಚನೆ: 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಮಿಲಿಟರಿ ಬಣಗಳು ಮತ್ತು ಒಪ್ಪಂದಗಲ ವಿರುದ್ಧವಾಗಿ ನೆಹರೂರವರು ಮುಂದಿಟ್ಟ ಕಾರಣಗಳನ್ನು ತಿಳಿಸಿ.**

..........................................................................................................................................................

..........................................................................................................................................................

..........................................................................................................................................................

..........................................................................................................................................................

..........................................................................................................................................................

..........................................................................................................................................................

..........................................................................................................................................................

## 2.4.5 ಆದರ್ಶವಾದ ಮತ್ತು ವಾಸ್ತವವಾದಗಳ ಸಾಮರಸ್ಯ

ಅಹಿಂಸೆಯನ್ನು ಒಂದು ಆದರ್ಶವೂ ಹಾಗೂ ವಾಸ್ತವತೆ ಎನ್ನುವ ಅಂಶವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಬಲವಾಗಿ ತೋರಿಸಿದವರು ಮಹಾತ್ಮಗಾಂಧಿಯವರು. ಅವರ ದೃಷ್ಟಿಯಲ್ಲಿ 'ಶಸ್ತ್ರಾಸ್ತ್ರಗಳ ಪೈಪೋಟಿಯು ಹೆಚ್ಚಿದಂತೆಯೇ'. ಶಾಂತಿಪರವಾಗ ತೀವ್ರ ಕಾಳಜಿಯಿಂದ ಗಾಂಧೀಜಿ ಮತ್ತು ನೆಹರೂರವರು ಭಾರತದ ವಿದೇಶಾಂಗ ನೀತಿಯ ಮೌಲ್ಯಗಳನ್ನು ಎತ್ತಿಹಿಡಿದರು.

1962ರ ಭಾರತ- ಚೀನಾ ಯುದ್ಧವು ನೆಹರೂರವರಲ್ಲಿ ಕೂಡ ಕನಿಷ್ಠ ಪ್ರಮಾಣದ ಶಸ್ತ್ರಾಸ್ತ್ರವು ಭಾರತದ ಭದ್ರತೆಯ ದೃಷ್ಟಿಯಿಂದ ಅನಿವಾರ್ಯವಾದದ್ದು ಎನ್ನುವ ಮನವರಿಕೆಯನ್ನು ಮಾಡಿಸಿತು. 1965,1971 ಹಾಗೂ ಇತ್ತೀಚೆಯ ಕಾರ್ಗಿಲ್ ಯುದ್ಧಗಳು ವೈರಿರಾಷ್ಟ್ರ ಶಸ್ತ್ರಾಸ್ತ್ರಗಳ ಬೆಳವಣಿಗೆಯಿಂದ ಆಗುವ ಅನಾಹುತಗಳನ್ನು ಭಾರತದ ನಾಯಕರಿಗೆ ಮನವರಿಕೆ ಮಾಡಿವೆ. ಬಹುಶಃ ಇದೆಲ್ಲದರ ಪರಿಣಾಮವೋ ಎನ್ನುವಂತೆ ನೆಹರೂ ನಂತರದ ನಾಯಕರು ಭಾರತದ ರಕ್ಷಣಾ ಅಭಿವೃದ್ಧಿಗೆ ಪೂರಕವಾದ ನೀತಿಗಳನ್ನು ಅಳವಡಿಸಿಕೊಂಡರು. ಈಗ ಭಾರತ ಬಲಿಷ್ಠ ಹಾಗೂ ಅಣ್ವಸ್ತ್ರ ರಾಷ್ಟ್ರವಾಗಿದೆ. ಈ ಬೆಳವಣಿಗೆಗಳಿಂದ ಭಾರತದ ಭದ್ರತೆಯು ಹೆಚ್ಚಿದೆ ಎಂದು ಹಲವರು, ಸವಾಲುಗಳು ಮುಂದುವರೆದಿದೆ ಎಂದು ಮತ್ತಿತರರು ವಾದಿಸುತ್ತಿದ್ದಾರೆ. ಆದರೆ ನಾವು ಮುಖ್ಯವಾಗಿ ಗಮನಿಸಬೇಕಾದ

ಅಂಶವೆಂದರೆ ಭಾರತವು ಅಣ್ವಸ್ತ್ರವನ್ನು ಪ್ರಥಮವಾಗಿ ಉಪಯೋಗಿಸುವುದಿಲ್ಲವೆಂದು ಘೋಷಿಸಿ, ನಿಶ್ಶಸ್ತ್ರೀಕರಣವು ತನ್ನ ಆದರ್ಶ ಹಾಗೂ ಗುರಿಯೆಂದು ಪುನರುಚ್ಚರಿಸಿದೆ. ಆದರ್ಶವಾದ ವಾಸ್ತವಾದದ ಸಾಮರಸ್ಯತೆಯನ್ನು ಭಾರತದ ನಾಯಕರು ಮನಮುಟ್ಟುವ ರೀತಿಯಲ್ಲಿ ವಿಶ್ವದ ಮುಂದೆ ಇಟ್ಟಿದ್ದಾರೆ ಎಂದರೆ ಅತಿಶಯೋಕ್ತಿಯಾವುದಿಲ್ಲ.

## 2.2.6 ಉದಾರ ಅಂತರರಾಷ್ಟ್ರೀಯತಾವಾದ

ಉದಾರ ಅಂತರರಾಷ್ಟ್ರೀಯತಾವಾದವು ಭಾರತದ ಸಂವಿಧಾನದ 51ನೇ ವಿಧಿಯಲ್ಲಿ ರಾಜ್ಯ ನಿರ್ದೇಷಿತ ತತ್ವಗಳಲ್ಲಿ ಅಡಕವಾಗಿ ಮೂಡಿಬಂದಿದೆ. ಈ ಕೆಳಕಂಡ ಅಂಶಗಳನ್ನು ಒತ್ತಿ ಹೇಳಲಾಗಿದೆ.

ಎ) ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಸ್ಥಾಪಿಸುವುದು

ಬಿ) ಹೊರ ರಾಷ್ಟ್ರಗಳೊಡನೆ ನ್ಯಾಯಭದ್ದವಾದ ಮತ್ತು ಗೌರವಾನ್ವಿತ ಸಂಬಂಧಗಳನ್ನು ಕಲ್ಪಿಸುವುದು

ಸಿ) ಅಂತರರಾಷ್ಟ್ರೀಯ ಕಾನೂನು ಮತ್ತು ಕರಾರು ಒಪ್ಪಂದಗಳನ್ನು ಪಾಲಿಸುವುದು ಮತ್ತು

ಡಿ) ಅಂತರರಾಷ್ಟ್ರೀಯ ವ್ಯಾಜ್ಯಗಳನ್ನು ಮಧ್ಯಸ್ಥಿಕೆಯ ಮೂಲಕ ಇತ್ಯರ್ಥಗೊಳಿಸುವುದು.

ಉದಾರ ಅಂತರರಾಷ್ಟ್ರೀಯತೆಯ ಬಗೆಗಿನ ಸ್ಫೂರ್ತಿಯನ್ನು ಸ್ವಾತಂತ್ರಪೂರ್ವದಲ್ಲಿ ನಾಯಕರುಗಳಾದ ಎನ್.ಜಿ. ರನಾಡೆ ಮತ್ತು ಸುರೇಂದ್ರನಾಥ ಬ್ಯಾನರ್ಜಿಯವರಿಂದ ಪಡೆಯಲಾಯಿತು. ಉದಾರ ಅಂತರರಾಷ್ಟ್ರೀಯತೆಯು ರಾಷ್ಟ್ರಗಳ ನಡುವೆ ಹಾಗೂ ಆಂತರಿಕವಾಗಿ ಸಮಾನತೆಯನ್ನಾಧರಿಸಿದ ಸಂಬಂಧಗಳನ್ನು ಹಾಗೂ ಸಕಾರಾತ್ಮಕ ರಾಷ್ಟ್ರೀಯತೆಯನ್ನು ಬೆಳೆಸುವ ಗುರಿಗಳನ್ನು ಎತ್ತಿ ಹಿಡಿಯುತ್ತದೆ.

## 2.2.7 ಯೂನಿವರ್ಸಲಿಸಮ್ ಮತ್ತು ಮಲ್ಟಿಲ್ಯಾಟರಲಿಸಮ್

ಭಾರತದ ವಿದೇಶಾಂಗ ನೀತಿಯ ಮತ್ತೊಂದು ಮೂಲಭೂತ ತತ್ವವೆಂದರೆ ವಿಶ್ವಸಂಸ್ಥೆಯನ್ನು ಒಂದು ವಿಶ್ವವ್ಯಾಪೀ, ಬಹುರಾಷ್ಟ್ರಗಳನ್ನಾಧರಿಸಿದ ಸಂಸ್ಥೆಯೆಂದು ಬೆಂಬಲಿಸುವುದು. ಭಾರತವು ವಿಶ್ವಸಂಸ್ಥೆಯ ರಚನೆ ಪ್ರಕ್ರಿಯೆಯಲ್ಲಿ ಕೂಡ ಭಾಗವಹಿಸಿ, ಪ್ರಥಮವಾಗಿ ಸದಸ್ಯರಾದ ರಾಷ್ಟ್ರಗಳಲ್ಲಿ ಒಂದಾಗಿತ್ತು. ನಾಲ್ಕು ಪ್ರಮುಖ ಕ್ಷೇತ್ರಗಳಲ್ಲಿ ಭಾರತವು ವಿಶ್ವಸಂಸ್ಥೆಯನ್ನು ಬೆಂಬಲಿಸುತ್ತಾ ಬಂದಿದೆ.

ಎ) ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ತನ್ನ ಕಾಣಿಕೆಗಳನ್ನು - ಹಣಕಾಸಿನ ಮತ್ತು ಸೈನ್ಯದ- ಕೊಡುತ್ತಿರುವುದು.

ಬಿ) ವರ್ಣಭೇದ ನೀತಿ ಮತ್ತು ವಸಾಹತುಶಾಹಿ ವಿರೋಧ ವಿಶ್ವಸಂಸ್ಥೆಯ ಎಲ್ಲಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿರುವುದು.

ಸಿ) ಬಹುರಾಷ್ಟ್ರೀಯತಾವಾದಕ್ಕೆ ಸಂಪೂರ್ಣ ಬೆಂಬಲವನ್ನು ಕೊಡುತ್ತಿರುವುದು.

ಡಿ) ಮಾನವ ಹಕ್ಕುಗಳು, ಅಭಿವೃದ್ಧಿ ಮತ್ತು ನಿಶ್ಶಸ್ತ್ರೀಕರಣಕ್ಕೆ ಸಂಬಂಧಿಸಿದ ಚರ್ಚೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುತ್ತಿರುವುದು.

ಅಂತರರಾಷ್ಟ್ರೀಯ ಪರಿಸ್ಥಿತಿಯು ಬದಲಾದಂತೆಲ್ಲಾ ಭಾರತವು ವಿಶ್ವಸಂಸ್ಥೆಯ ಹೊಸ ಕಾರ್ಯಕ್ರಮಗಳನ್ನು ಹಾಗೂ ಜವಾಬ್ದಾರಿಗಳನ್ನು ಬೆಂಬಲಿಸುತ್ತಾ ಬಂದಿದೆ. ಮುಖ್ಯವಾಗಿ ಶೀತಲ ಸಮರೋತ್ತರದಲ್ಲಿ ಆಗಿರುವ ಗುರುತರ, ಚಾರಿತ್ರಿಕ

ಬದಲಾವಣೆಗಳಿಂದಾಗಿ ವಿಶ್ವಸಂಸ್ಥೆಯ ಪ್ರಜಾತಾಂತ್ರೀಕರಣವನ್ನು ಭಾರತವು ವಿಶೇಷವಾಗಿ ಆಪೇಕ್ಷಿಸುತ್ತಾ ಬಂದಿದೆ ಹಾಗೂ ಈ ನಿಟ್ಟಿನಲ್ಲಿ ಮೂಡಿ ಬಂದಿರುವ ಸಲಹೆಗಳನ್ನು ಕೆಳಕಂಡ ಮೂರು ವಿಷಯಗಳಿಗೆ ಸಂಬಂಧಿಸಿದಂತೆ ಆನಂದಿಸುತ್ತಾ ಬಂದಿದೆ.

1. ಮಾನವ ಹಕ್ಕುಗಳನ್ನು ಸಂರಕ್ಷಿಸುವುದರಲ್ಲಿ ಹಾಗೂ ಶಾಂತಿ ಪಾಲನಾ ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ, ಭದ್ರತಾ ಮಂಡಲಿಯು ರಾಷ್ಟ್ರಗಳ ಪರಮಾಧಾರವನ್ನು ಉಲ್ಲಂಘಿಸಬಾರದು.
2. ಸಾಮಾನ್ಯ ಸಭೆಯ ಒಮ್ಮತವನ್ನು ಭದ್ರತಾ ಮಂಡಲಿಯ ನಿರ್ಧಾರಗಳು ಪ್ರತಿಬಿಂಬಿಸಬೇಕು. ಸಧ್ಯದಲ್ಲಿ ಹತ್ತು ಶಾಶ್ವತವಲ್ಲದ ಸದಸ್ಯರಾಷ್ಟ್ರಗಳು ವಿಶ್ವವನ್ನು ಸರಿಯಾಗಿ ಪ್ರತಿನಿಧಿಸುತ್ತಿದ್ದರೂ, ಶಾಶ್ವತ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿ, ಉತ್ತಮ ಪ್ರಾತಿನಿಧ್ಯತೆಗೆ ಆದ್ಯತೆ ದೊರಕಿಸಿಕೊಡಬೇಕು. ಈ ನಿಟ್ಟಿನಲ್ಲಿ ಸಾಕಷ್ಟು ಚರ್ಚೆಗಳಾಗಿ, ಯಾವ ರಾಷ್ಟ್ರಗಳಿಗೆ ಮತ್ತು ಖಂಡಗಳಿಗೆ ಶಾಶವತಸದಸ್ಯತ್ವ ನೀಡಬೇಕೆನ್ನುವ ವಿಷಯದಲ್ಲಿ ಒಮ್ಮತ ಮೂಡಿಬಂದಿಲ್ಲ. ಭಾರತವನ್ನು ಖಾಯಂ ಸದಸ್ಯವನ್ನಾಗಿ ಪರಿಗಣಿಸಬೇಕೆಂದು ಭಾರತದ ನಾಯಕರು ಹಾಗೂ ಹಲವಾರು ಮಿತ್ರರಾಷ್ಟ್ರಗಳು ಒತ್ತಡ ಹೇರುತ್ತಲೇ ಬಂದಿವೆ.
3. ಸಾಮಾನ್ಯ ಸಭೆಗೆ ಭದ್ರತಾ ಮಂಡಲಿಯು ತನ್ನ ಉತ್ತರದಾಯಿತ್ವವನ್ನು ಹೊಂದಿರಬೇಕು.

## 2.2.8 ಗಾಂಧೀವಾದ

ಬಹುಶಃ ಗಾಂಧೀಜಿಯವರ ಅತಿಮುಖ್ಯವಾದ ತತ್ವಗಳನ್ನು ಭಾರತವು ತನ್ನ ವಿದೇಶಾಂಗ ನೀತಿಯಲ್ಲಿ ಅಳವಡಿಸಿಕೊಂಡಿರುವುದೆಂದರೆ ಮಾರ್ಗ ಮತ್ತು ಗುರಿಸಾಧನೆ, ತತ್ವ, ಅಹಿಂಸೆ ಮತ್ತು ಸತ್ಯ.

ಬೇರಾವುದೂ ರಾಷ್ಟ್ರದ ಅನುಯಾಯಿಯಾಗದೆ, ಭಾರತವು ಅಂತರರಾಷ್ಟ್ರೀಯ ಸಂಬಂಧಗಳ ವಿಷಯದಲ್ಲಿ ತನ್ನ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಂಡು ಸಮಸ್ಯೆಗಳ ತುಲನಮಾಡಿ, ರಾಷ್ಟ್ರಹಿತಾಸಕ್ತಿಯನ್ವಯ ನಿರ್ಧಾರಗಳನ್ನು ತೆಗೆದುಕೊಳ್ಳುವ ದೃಷ್ಟಿಯಿಂದ ಅಲಿಪ್ತನೀತಿಯನ್ನು ಹಮ್ಮಿಕೊಂಡಿತು. ಗಾಂಧೀಜಿಯವರ ಮತ್ತು ಸ್ವಾತಂತ್ರ ಸಂಗ್ರಾಮದುದ್ದಕ್ಕೂ ಅನುಸರಿಸಿದ ಅಂಹಿಸೆಗೆ ಪೂರಕವಾಗಿ ಭಾರತವು ಮಿಲಿಟರಿ ಬಣಗಳನ್ನು ಮತ್ತು ಶಕ್ತಿ ರಾಜಕೀಯವನ್ನು ವಿರೋಧಿಸಿತು. ಶಾಂತಿಯುತ ಮಾರ್ಗಗಳ ಮೂಲಕ ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಹುಡುಕುವ ಭಾರತದ ಧೋರಣೆಯೂ ಸಹ ಅಹಿಂಸೆಯ ಪ್ರತೀಕವಾಗಿತ್ತು. ಭಾರತವು ಚೀನಾದೊಡನೆ ಪಾಲಿಸಿದ ಪಂಚಶೀಲ ತತ್ವವೂ/ನೀತಿಯೂ ಕೂಡ ಗಾಂಧೀಜಿ, ಅಶೋಕ,ಬುದ್ಧರವರು ಅಹಿಂಸೆಗೆ ಕೊಟ್ಟ ಪ್ರಾಧಾನ್ಯತೆಯನ್ನು ಪ್ರತಿಬಿಂಬಿಸಿತು.

ಸದಾಕಾಲದಲ್ಲಿಯೂ ಘರ್ಷಣೆಗಳ ಪರಿಹಾರಕ್ಕೆ ಸಂಧಾನದ ಮಾರ್ಗವನ್ನು ಅನುಸರಿಸುವಂತೆ ಗಾಂಧೀಜಿಯವರು ನಾಯಕರಿಗೆ ಮನವರಿಕೆ ಮಾಡಿಕೊಟ್ಟಿದ್ದರು.ಅವರ ದೃಷ್ಟಿಯಲ್ಲಿ ರಾಷ್ಟ್ರಗಳು ತತ್ವಕ್ಕೆ ಬದ್ಧರಾಗಿದ್ದರೂ ಕೂಡ, ತಮ್ಮ ಎದುರಾಳಿಗಳೊಡನೆ ರಾಯಭಾರತ್ವ/ಸಂಧಾನಕ್ಕೆ ತಯಾರಾಗಿರಬೇಕು.

Conquest of Violence ಎನ್ನುವ ಕೃತಿಯಲ್ಲಿ ಜೋನ್ ಬೊಂಡುರಾಂಟ್‌ರವರು ಒತ್ತಿ ಹೇಳಿರುವಂತೆ ಗಾಂಧೀಜಿಯವರ ಸತ್ಯಾಗ್ರಹ ಚಳುವಳಿಯು ಭಾರತದ ವಿದೇಶಾಂಗ ನೀತಿಯನ್ನು ಈ ಕೆಳಕಂಡ ಅಂಶಗಳಿಂದ ಪ್ರಭಾವಿಸಿತು.

1. ಸದಾಕಾಲದಲ್ಲಿಯೂ ಸ್ವಾವಲಂಬನೆಗೆ ಶ್ರಮಿಸುವುದು
2. ಸತ್ಯಕ್ಕೆ ಪೂರಕವಾಗಿ ಬೇಡಿಕೆಗಳನ್ನು ಕಡಿಮೆಮಾಡಿಕೊಳ್ಳುವುದು
3. ಗೌರವಾನ್ವಿತ ಪರಿಹಾರಕ್ಕಾಗಿ -ಸಮಸ್ಯೆಗಳ ಪರಿಹಾರಕ್ಕೆ ವೈರಿ ರಾಷ್ಟ್ರದೊಡನೆ ಸಹಕಾರಕ್ಕೆ ಶ್ರಮಿಸುವುದು.
4. ರಾಷ್ಟ್ರದ ಮೂಲಭೂತ ಹಿತಾಸಕ್ತಿಗಳಿಗೆ ಸಂಬಂಧಿಸಿದಂತೆ ರಾಜೀ ಮಾಡಿಕೊಳ್ಳದಿರುವುದು.

5. ಸಮಸ್ಯೆಗಳ ನಿವಾರಣೆಯಲ್ಲಿ ಮೂಲಭೂತ ವಿಷಯಗಳಿಗೆ ಸಂಬಂಧಿಸಿದಂತೆ ಒಪ್ಪಂದ/ಒಮ್ಮತಕ್ಕಾಗಿ ಪರಿಶ್ರಮಿಸುವುದು.

ಭಾರತದ ವಿದೇಶಾಂಗ ನೀತಿಯ ನಿರೂಪಕರಾಗಿ, ನೆಹರೂರವರಿಗೆ ಗಾಂಧೀಜಿಯವರ ಕೆಲವು ತತ್ವಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಸಂಶಯವಿತ್ತು. ಆದರೂ ಸಾಧ್ಯವಾದಷ್ಟು ವಿಷಯಗಳಲ್ಲಿ ಆದರ್ಶವಾದ, ವಾಸ್ತವವಾದದ ನಡುವೆ, ಸಾಮರಸ್ಯ ಮಾಡುವಂತೆ ಮಾಡಿ ಗಾಂಧೀಜಿಯವರ ತತ್ವ/ ಆದರ್ಶಗಳಿಗೆ ಚ್ಯುತಿಬರದಂತೆ ಪರರಾಷ್ಟ್ರಗಳೊಡನೆ ಸಂಬಂಧಗಳನ್ನು ಸುಧಾರಿಸುವುದಕ್ಕೆ ಶ್ರಮಿಸಿದರು.

## ನಿಮ್ಮ ಪ್ರಗತಿ ಪರಿಶೀಲನೆ - 3

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಗಾಂಧಿವಾದವನ್ನು ಎಷ್ಟರಮಟ್ಟಿಗೆ ಭಾರತದ ವಿದೇಶಾಂಗ ನೀತಿಯ ನಿರೂಪಣೆ ಮತ್ತು ಅನುಷ್ಠಾನದಲ್ಲಿ ಅನುಸರಿಸಲಾಗಿದೆ? ವಿವರಿಸಿ.**

.............................................................................................................................
.............................................................................................................................
.............................................................................................................................
.............................................................................................................................
.............................................................................................................................
.............................................................................................................................
.............................................................................................................................

## 2.3 ಸಮಾಪ್ತಿಗೊಳಿಸೋಣ

ಭಾರತದ ವಿದೇಶಾಂಗ ನೀತಿಯ ಕಲ್ಪನೆ ಮತ್ತು ಆಚರಣೆಯಲ್ಲಿ ಎರಡು ಪ್ರಮುಖ ಗುರಿಗಳು ಗೋಚರವಾಗುತ್ತದೆ. 1. ಪ್ರಾಥಮಿಕ ಗುರಿ 2. ವಿಸ್ತೃತ ಗುರಿಗಳಾಗಿವೆ.

ಭಾರತದ ವಿದೇಶಾಂಗ ನೀತಿಯ ಮೂಲಭೂತ ತತ್ವಗಳಾವುವೆಂದರೆ

1. ಮಧ್ಯಮಾರ್ಗ
2. ಅಲಿಪ್ತ ನೀತಿ
3. ಅಂತರರಾಷ್ಟ್ರೀಯ ಶಾಂತಿ ಮತ್ತು ನಿಶ್ಶಸ್ತ್ರೀಕರಣ
4. ಒಪ್ಪಂದಗಳು ಮತ್ತು ಮಿಲಿಟರಿ ಬಣಗಳ ವಿರೋಧ
5. ಆದರ್ಶವಾದ ವಾಸ್ತವವಾದಗಳ ಸಮೀಕರಣ
6. ಉದಾರ ಅಂತರರಾಷ್ಟ್ರೀಯತೆ
7. ಯೂನಿವರ್ಸವಿಸಂ ಮತ್ತು ಮಲ್ಟಿಲ್ಯಾಟರಲಿಸಂ ಮತ್ತು
8. ಗಾಂಧೀವಾದ

ಭಾರತದ ವಿದೇಶಾಂಗ ನೀತಿಯು ನಮ್ಮ ದೇಶದ ಸ್ವಾತಂತ್ರ ಹೋರಾಟದ ಸಾಂಸ್ಕೃತಿಕ ಮತ್ತು ತಾತ್ವಿಕ ಪರಂಪರೆ, ಪಂಚಶೀಲ ಮತ್ತು ಅಲಿಪ್ತನೀತಿಯಿಂದ ತನ್ನ ಬಲ ಮತ್ತು ಪೋಷಕ ಶಕ್ತಿಯನ್ನು ಪಡೆದಿದೆ.

## 2.4 ಕೆಲವು ಮುಖ್ಯ ಪದಗಳು

ಪಂಚಶೀಲ : ಐದು ತತ್ವಗಳನ್ನು ಆಧರಿಸಿದ ಶಾಂತಿಯುತ ಸಹಬಾಳ್ವೆಯ ಪ್ರತೀಕವಾದ ನೀತಿಗಳು.

ಅಲಿಪ್ತನೀತಿ : ಶಕ್ತಿ ಬಣಗಳ ರಾಜಕೀಯದಿಂದ ಹೊರಗುಳಿದು ವಿಶ್ವರಾಜಕೀಯದಲ್ಲಿ ಸಕ್ರಿಯವಾಗಿರುವುದು.

## 2.5 ಕೆಲವು ಉಪಯುಕ್ತ ಗ್ರಂಥಗಳು

ವಿಲಿಯಂ ರೇಂಜ್ - ಜವಹರ್‌ಲಾಲ್ ನೆಹರೂಸ್ ವರ್ಲ್ಡ್ ವ್ಯೂ, ಎ ಥಿಯರಿ ಆಫ್ ಇಂಟರ್‌ನ್ಯಾಷನಲ್ ರಿಲೇಷನ್ಸ್

ಬಿಮಲಾ ಪ್ರಸಾದ್ - ಒರಿಜಿನ್ಸ್ ಆಫ್ ಇಂಡಿಯಾಸ್ ಫಾರಿನ್ ಪಾಲಿಸಿ

ಬಿ.ಆರ್.ನಂದಾ - ಇಂಡಿಯಾಸ್ ಫಾರಿನ್ ಪಾಲಿಸಿ, ದಿ ನೆಹರೂ ಇಯರ್ಸ್

ಯೂರಿ ನಾಸೆಂಕೊ - ಜವಹರ್‌ಲಾಲ್ ನೆಹರೂ ಅಂಡ್ ಇಂಡಿಯಾಸ್ ಫಾರಿನ್ ಪಾಲಿಸಿ

## 1.8 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

**ನಿಮ್ಮ ಪ್ರಗತಿ ಪರಿಶೀಲನೆ -1**

1. ಉಪವಿಭಾಗ 2.2.2 ನೋಡಿ ಮತ್ತು
2. ಉಪವಿಭಾಗ 2.2.3 ಮತ್ತು 2.3 ನೋಡಿ

**ನಿಮ್ಮ ಪ್ರಗತಿ ಪರಿಶೀಲನೆ -2**

1. ಉಪವಿಭಾಗ 2.2.4 ನೋಡಿ

**ನಿಮ್ಮ ಪ್ರಗತಿ ಪರಿಶೀಲನೆ -3**

1. ಉಪವಿಭಾಗ 2.2.8 ನೋಡಿ

# ಘಟಕ 3 ವಿವೇಚನಾಯುಕ್ತ ಭೌಗೋಳಿಕ ಪರಿಗಣನೆ ಆಧಾರಿತ ನೆರೆಹೊರೆಯ ರಾಷ್ಟ್ರಗಳೊಡನೆ ಭಾರತದ ರಾಯಭಾರತ್ವ

## ರಚನೆ


3.0 ಉದ್ದೇಶಗಳು

3.1 ಪ್ರಸ್ತಾವನೆ

3.2 ನೆಹರೂರವರ ಕಾಲದಲ್ಲಿ ನೆರೆಹೊರೆ ರಾಷ್ಟ್ರಗಳೊಡನೆ ಭಾರತದ ರಾಯಭಾರತ್ವ

3.3 ಇಂದಿರಾಗಾಂಧಿಯವರ ಕಾಲದಲ್ಲಿ ನೆರೆರಾಷ್ಟ್ರಗಳೊಡನೆ ರಾಯಭಾರತ್ವ

3.4 ರಾಜೀವ್‌ಗಾಂಧಿಯವರ ಕಾಲದಲ್ಲಿ ನೆರೆರಾಷ್ಟ್ರಗಳೊಂದಿಗಿನ ರಾಯಭಾರತ್ವ

3.5 ಗುಜ್ರಾಲ್ ತತ್ವ ಮತ್ತು ನೆರೆಹೊರೆ ರಾಷ್ಟ್ರಗಳೊಡನೆ ಭಾರತದ ರಾಯಭಾರತ್ವ

3.6 ವಾಜಪೇಯಿ ಸರ್ಕಾರ ಮತ್ತು ನೆರೆ ರಾಷ್ಟ್ರಗಳೊಂದಿಗಿನ ರಾಯಭಾರತ್ವ

3.7 ಉಪಸಂಹಾರ

3.8 ಸಾರಾಂಶ

3.9 ಕಠಿಣ ಪದಗಳು

3.10 ಉಪಯುಕ್ತ ಗ್ರಂಥಗಳು

3.11 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 3.0 ಉದ್ದೇಶಗಳು

ಈ ಪಾಠವನ್ನು ಓದುವುದರಿಂದ ನಿಮಗೆ, ಈ ಕೆಳಕಂಡ ವಿಷಯಗಳು ಅರ್ಥವಾಗುತ್ತದೆ.

* ನೆರೆ ರಾಷ್ಟ್ರಗಳೊಂದಿಗಿನ ಭಾರತದ ರಾಯಭಾರತ್ವದ ಪ್ರಮುಖ ಲಕ್ಷಣಗಳು
* ನೆಹರೂರವರ ಕಾಲದಲ್ಲಿ ನೆರೆರಾಷ್ಟ್ರಗಳೊಂದಿಗಿನ ರಾಯಭಾರತ್ವದ ಅಂಶಗಳು
* ಇಂದಿರಾಗಾಂಧಿಯವರು ಯಾವ ರೀತಿಯಲ್ಲಿ ನೆರೆ ರಾಷ್ಟ್ರಗಳೊಡನೆ ತಮ್ಮ ರಾಯಭಾರತ್ವವನ್ನು ನಿಭಾಯಿಸಿದರು ಎನ್ನುವುದು.
* ನೆರೆ ರಾಷ್ಟ್ರಗಳೊಂದಿಗಿನ ರಾಜೀವ್‌ಗಾಂಧಿಯವರ ಕಾಳಜಿಗಳು
* ಗುಜ್ರಾಲ್ ತತ್ವದ ಮೂಲಾಂಶಗಳು ಮತ್ತು ಹೇಗೆ ಅವು ನೆರೆಹೊರೆ ರಾಷ್ಟ್ರಗಳ ರಾಯಭಾರತ್ವವನ್ನು ಪ್ರಭಾವಿಸಿತು ಎನ್ನುವುದು
* ನೆರೆಹೊರೆ ರಾಷ್ಟ್ರಗಳೊಂದಿಗಿನ ಸಂಬಂಧಗಳ ಬಗ್ಗೆ ವಾಜಪೇಯಿಯವರ ದೃಷ್ಟಿ ಮತ್ತು ಕೊನೆಯದಾಗಿ
* ಇಂದಿನ ಮತ್ತು ಭವಿಷ್ಯದ ಪರಿಸ್ಥಿತಿಯಲ್ಲಿ ಭಾರತದ ನೆರೆಹೊರೆ ರಾಷ್ಟ್ರಗಳೊಂದಿಗಿನ ರಾಯಭಾರತ್ವದ ಭವಿಷ್ಯ.

## 3.1 ಪ್ರಸ್ತಾವನೆ

ಸಾಮಾನ್ಯವಾಗಿ ರಾಷ್ಟ್ರಗಳು ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ತಮ್ಮ ವಿದೇಶಾಂಗ ನೀತಿ ಮತ್ತು ರಾಯಭಾರತ್ವವನ್ನು ಅನುಸರಿಸುತ್ತವೆ. ಆದರೆ ಅಂತಹ ನೀತಿ ಮತ್ತು ರಾಯಭಾರತ್ವದ ಯಶಸ್ಸು ರಾಷ್ಟ್ರಗಳು ನೆರೆಹೊರೆ ರಾಷ್ಟ್ರಗಳಿಗೆ ಕೊಡುವ ಪ್ರಾಧಾನ್ಯತೆಯನ್ನು ಹೆಚ್ಚಿನ ಮಟ್ಟಿಗೆ ಅವಲಂಬಿಸಿರುತ್ತದೆ. ರಾಷ್ಟ್ರದ ನಾಯಕರ ಗುಣಮಟ್ಟ ಮತ್ತು ಅವರ ದೃಷ್ಟಿ ಮುಖ್ಯವಾದ ಅಂಶವಾದರೂ, ನೆರೆರಾಷ್ಟ್ರಗಳಿಗೆ ಅವರುಕೊಡುವ ಪ್ರಾಧಾನ್ಯತೆಯ ಮೇಲೆ ರಾಷ್ಟ್ರದ ರಾಯಭಾರತ್ವದ ಜಯ ಅವಲಂಬಿತವಾಗಿರುತ್ತದೆ. ಒಂದು ರಾಷ್ಟ್ರ ತನ್ನ ನೆರೆ ರಾಷ್ಟ್ರಗಳೊಂದಿಗೆ ಶಾಂತಿಯನ್ನು ಸ್ಥಾಪಿಸಬೇಕೆಂದಿದ್ದರೆ ನೆರೆರಾಷ್ಟ್ರವೂ ಅದಕ್ಕೆ ಪೂರಕವಾದ ನೀತಿಯನ್ನು ಅನುಸರಿಸಿದರೆ ಮಾತ್ರ ಯಶಸ್ಸು ಸಾಧ್ಯ. ರಾಷ್ಟ್ರಗಳ ಗುರಿಗಳಲ್ಲಿ ತೀವ್ರ ಭಿನ್ನಾಭಿಪ್ರಾಯಗಳು ಮತ್ತು ಅಸಮತೋಲನವಿದ್ದರೆ, ಯಾವ ರಾಷ್ಟ್ರದ ರಾಯಭಾರತ್ವವೂ ಸಾಧನೆಯನ್ನು ಮಾಡಲಾಗದು. ಭಾರತದ ನೀತಿಯೂ ಈ ಒಂದು ವಿಶ್ವವ್ಯಾಪೀ ತತ್ವಕ್ಕೆ ಹೊರತಾಗಿಲ್ಲ.

ಜವಹರಲಾಲ್ ನೆಹರೂ ರವರ ಕಾಲದಿಂದ ಇಂದಿನವರೆಗಿನ ಭಾರತದ ನೆರೆರಾಷ್ಟ್ರಗಳೊಂದಿಗಿನ ರಾಯಭಾರತ್ವವನ್ನು ಅಮೂಲಾಗ್ರವಾಗಿ ವಿಶ್ಲೇಷಿಸುವುದೇ ಈ ಪಾಠದ ಗುರಿಯಾಗಿದೆ. ಭಾರತದ ರಾಯಭಾರತ್ವದ ಯಶಸ್ಸು ಹಿಂದಿನಿಂದಲೂ ಅಂತರರಾಷ್ಟ್ರೀಯ ಮತ್ತು ಪ್ರಾಂತೀಯ ಮಟ್ಟದಲ್ಲಿನ ರಾಜಕೀಯ ಮತ್ತು ತಾಂತ್ರಿಕ ಪರಿಸರವನ್ನು ಕೂಡ ಅವಲಂಬಿಸುತ್ತಾ ಬಂದಿದೆ.

ನೆರೆಹೊರೆ ರಾಷ್ಟ್ರಗಳೊಡನೆ ಭಾರತದ ರಾಯಭಾರತ್ವವು ಚಲನಶೀಲವಾಗಿದ್ದು, ದೇಶದ ಆಂತರಿಕ ಮತ್ತು ಬಾಹ್ಯ ಅಂಶಗಳಿಂದ ಪ್ರಭಾವಿತವಾಗಿರುತ್ತದೆ. ಭಾರತದಲ್ಲಿ ಅಧಿಕಾರದಲ್ಲಿದ್ದ ಎಲ್ಲಾ ನಾಯಕರೂ ಕೂಡ ನೆರೆಹೊರೆ ರಾಷ್ಟ್ರಗಳೊಡನೆ ಸಂಬಂಧವನ್ನು ಸುಧಾರಿಸುವ ಮೂಲ ಗುರಿಯನ್ನು ಹೊಂದಿದ್ದು, ಆ ನಿಟ್ಟಿನಲ್ಲಿ ತಮ್ಮ ರಾಯಭಾರತ್ವದ ಕಾರ್ಯವೈಖರಿಯನ್ನು ಬೆಳೆಸಿಕೊಂಡರೆನ್ನುವ ವಾಸ್ತವಾಂಶ, ಭಾರತದ ವಿದೇಶಾಂಗ ನೀತಿ ಮತ್ತು ರಾಯಭಾರತ್ವದ ವೈಶಿಷ್ಟತೆಯಾಗಿದೆ.

## 3.2 ನೆರೆಹೊರೆ ರಾಷ್ಟ್ರಗಳೊಂದಿಗಿನ ನೆಹರೂರವರ ಕಾಲದ ರಾಯಭಾರತ್ವ

ಸ್ವಾತಂತ್ರ ಪೂರ್ವ- ಸ್ವಾತಂತ್ರ ನಂತರದ ಕಾಲದಲ್ಲಿ ಜವಹರ್‌ಲಾಲ್ ನೆಹರೂರವರ ವಿದೇಶಾಂಗ ನೀತಿಯ ಮುಖ್ಯ ಗುರಿಗಳು

ಅಂತರರಾಷ್ಟ್ರೀಯ ಶಾಂತಿ, ನಿಶ್ಯಸ್ತ್ರೀಕರಣ ಮತ್ತು ನೆರೆಹೊರೆ ರಾಷ್ಟ್ರಗಳೊಡನೆ ಉತ್ತಮ ಸಂಬಂಧವನ್ನು ಹೊಂದುವುದು ಆಗಿದ್ದವು. ಭಾರತೀಯ ಕಾಂಗ್ರೆಸ್ಸಿನ ಪರವಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ನೆಹರೂರವರು 1905 ರಿಂದ 1947ರವರೆವಿಗೂ ನಿರಂತರವಾಗಿ ನೆರೆರಾಷ್ಟ್ರಗಳ ಸ್ವಾತಂತ್ರಕ್ಕೆ ಸಂಬಂಧಿಸಿದಂತೆ, ಸಾಮ್ರಾಜ್ಯಶಾಹೀ ಮತ್ತು ವಸಾಹತು ಶಾಹೀ ವಿರೋಧಿ ನಿಲುವಳಿಗಳನ್ನು ಮಂಡಿಸಿದ್ದರು. ಭೌಗೋಳಿಕವಾಗಿ ಬೃಹದಾಕಾರದಲ್ಲಿದ್ದ ಭಾರತಕ್ಕೆ ತನ್ನ ಸ್ವಾತಂತ್ರ್ಯದ ಜೊತೆಯಲ್ಲಿಯೇ ಏಷ್ಯ ಖಂಡದ ನೆರೆರಾಷ್ಟ್ರಗಳ ಸ್ವಾತಂತ್ರ್ಯವೂ ಆದ್ಯ ವಿಷಯವಾಗಿತ್ತು. ನೆರೆರಾಷ್ಟ್ರಗಳೊಂದಿಗಿನ ಮತ್ತು ಅಂತರರಾಷ್ಟ್ರೀಯ ಸಮುದಾಯಕ್ಕೆ ಸಂಬಂಧಿಸಿದಂತೆ, ಸೆಪ್ಟೆಂಬರ್ 7, 1946 ರಂದು ಆಕಾಶವಾಣಿಯಲ್ಲಿ ಮಾಡಿದ ತಮ್ಮ ಭಾಷಣದ ಮೂಲಕ, ನೆಹರೂರವರು ಭಾರತದ ವಿದೇಶಾಂಗ ನೀತಿಯ ಧ್ಯೇಯಗಳನ್ನು ಮುಂದಿಟ್ಟರು.

ಆ ಭಾಷಣದಲ್ಲಿ ನೆಹರೂರವರು ಚೀನ ಮತ್ತು ರಷ್ಯ ರಾಷ್ಟ್ರಗಳ ಬಗ್ಗೆ ಪ್ರಸ್ತಾಪ ಮಾಡಿ, ನೆರೆ ರಾಷ್ಟ್ರಗಳಾದ ಅವುಗಳೊಡನೆ ಭಾರತವು ಸೌಹಾರ್ದಯುತವಾದ ಸಂಬಂಧವನ್ನು ಬೆಳೆಸಿಕೊಳ್ಳಬೇಕೆಂದು ಒತ್ತಿ ಒತ್ತಿ ಹೇಳಿದರು. ನೆಹರೂರವರ ಆ ಭಾಷಣ ಭಾರತವು ನೆರೆಹೊರೆ ರಾಷ್ಟ್ರಗಳೊಡನೆ ಇಟ್ಟುಕೊಳ್ಳಬೇಕಾದ ಸಂಬಂಧಕ್ಕೆ ಅಡಿಪಾಯ ಹಾಕಿತು. ನಂತರದಲ್ಲಿ ಅವರು ಕಮ್ಯುನಿಸ್ಟ್ ಚೀನಾದ ಸ್ಥಾಪನೆಯನ್ನು ಶ್ಲಾಘಿಸಿ, ಚೀನಾವನ್ನು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವನ್ನಾಗಿ ಮಾಡಬೇಕೆಂದು ಅಂತರರಾಷ್ಟ್ರೀಯ ಸಮುದಾಯಕ್ಕೆ ಕರೆಕೊಟ್ಟರು. ಸೋವಿಯತ್ ರಾಷ್ಟ್ರವು ಕ್ರಾಂತಿಕಾರಿ ರಾಷ್ಟ್ರವಾಗಿ ಸಮಾನತೆಗೆ ಮತ್ತು ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ವಿರುದ್ಧದ ಏಷ್ಯ - ಆಫ್ರಿಕಾ ದೇಶಗಳ ಹೋರಾಟಕ್ಕೆ ಕೊಟ್ಟ ಬೆಂಬಲವನ್ನು ಪ್ರಶಂಸಿದರು.

ಭೌಗೋಳಿಕವಾಗಿ ದೊಡ್ಡ ರಾಷ್ಟ್ರವನ್ನಾಗಿ ಹೊರಹೊಮ್ಮಿರುವುದರಿಂದ ಭಾರತವು ವಿಶ್ವದಲ್ಲಿ ಮಹತ್ತರವಾದ ಪಾತ್ರವನ್ನು ನಿಭಾಯಿಸಬೇಕಾಗುತ್ತದೆಂದು ನೆಹರೂರವರು ಹಲವಾರು ಬಾರಿ ಹೇಳಿಕೆಗಳನ್ನು ನೀಡಿದರು. ಅವರ ಒಂದು ಭಾಷಣದ ಸಾರಾಂಶವು ಹೀಗಿದೆ.

"ಏಷ್ಯದಲ್ಲಿ ಭಾರತವು ಕುತೂಹಲಕಾರಿ ಮತ್ತು ಪರಿಣಾಮಕಾರಿ ರಾಷ್ಟ್ರವಾಗಿ ಸೃಷ್ಟಿತವಾಗಿದೆ. ಅದಕ್ಕೆ ಭಾರತದ ಭೌಗೋಳಿಕ ಅಂಶವೂ ಮಹತ್ತರ ಕಾರಣವಾಗಿದೆ. ಏಷ್ಯದಲ್ಲಿನ ಯಾವುದೇ ಸಮಸ್ಯೆಯನ್ನು ಗಮನಿಸಿದರೂ, ಭಾರತ ಮತ್ತು ಅದರ ನಿಲುವು ಅತಿಮುಖ್ಯ. ರಕ್ಷಣೆ, ಆರ್ಥಿಕ ಮತ್ತು ವ್ಯಾಪಾರದ ದೃಷ್ಟಿಯಿಂದ ಏಷ್ಯ ರಾಷ್ಟ್ರಗಳ ಪರಸ್ಪರ ಸಂಬಂಧದ ಬಗ್ಗೆ ಪ್ರಸ್ತಾಪಿಸಿದಾಗ, ಭಾರತವನ್ನು ಎಂದೆಂದೂ ಕಡೆಗಣಿಸುವಂತಿಲ್ಲ". ಈ ಮೇಲೆ ತಿಳಿಸಿದ ಹೇಳಿಕೆ ಮತ್ತು ನೆಹರೂರವರ ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ ಭಾಷಣಗಳನ್ನು ಗಂಭೀರವಾಗಿ ಅವಲೋಕಿಸಿದಾಗ ಭಾರತವು ನೆರೆ ರಾಷ್ಟ್ರಗಳೊಡನೆ ಇಟ್ಟುಕೊಳ್ಳಬೇಕಾದ ಸಂಬಂಧದ ಮೂಲಾಂಶಗಳಾವುವು ಆಗಿರಬೇಕೆಂದು ಅವರ ಚಿಂತನೆ ಸ್ಪಷ್ಟವಾಗುತ್ತದೆ.

ನೆರೆ ರಾಷ್ಟ್ರಗಳೊಡನೆ ಬೆಳೆಸಿಕೊಳ್ಳಬೇಕಾದ ಸಂಬಂಧವನ್ನು ಆಧರಿಸಿದಂತೆ ಜವಹರ್‌ಲಾಲ್ ನೆಹರೂರವರು 1947 ಮತ್ತು 1949 ರಲ್ಲಿ ಏಷ್ಯಾ ರಾಷ್ಟ್ರಗಳ ಸಮ್ಮೇಳನಗಳನ್ನು ದೆಹಲಿಯಲ್ಲಿ ನಡೆಸಿದರು. ಈ ಸಮ್ಮೇಳನಗಳಿಗೆ ಏಷ್ಯಾ ರಾಷ್ಟ್ರಗಳ ಎಲ್ಲಾ ನಾಯಕರನ್ನು ಆಹ್ವಾನಿಸಿ, ಉತ್ತಮ ಮತ್ತು ಸೌಹಾರ್ದಯುತ ಸಂಬಂಧಕ್ಕಾಗಿ ಎಲ್ಲರೂ ಶ್ರಮಿಸಬೇಕೆಂದು ಕರೆಕೊಟ್ಟರು. ಸ್ವಾತಂತ್ರ ಮತ್ತು ಶಾಂತಿಯ ಸಂದೇಶವನ್ನು ಭಾರತದ ಪರವಾಗಿ ನೆಹರೂರವರು ಮುಂದಿಟ್ಟರು. 1955ರಲ್ಲಿ ಇಂಡೋನೇಷ್ಯಾ ರಾಷ್ಟ್ರವು ಬಾಂಡೂಂಗ್‌ನಲ್ಲಿ ಏಷ್ಯಾ - ಆಫ್ರಿಕಾ ದೇಶಗಳ ಸಮ್ಮೇಳನವನ್ನು ಏರ್ಪಡಿಸಿದಾಗ, ಭಾರತದ ನೇತೃತ್ವವನ್ನು ನೆಹರೂರವರು ನಿಭಾಯಿಸಿ, ಆ ಸಮ್ಮೇಳನದಲ್ಲಿ ಸಾಮ್ರಾಜ್ಯಶಾಹೀ ರಾಷ್ಟ್ರಗಳ ವಿರುದ್ಧ ಮಹತ್ತರವಾದ ಭಾಷಣವನ್ನು ಮಾಡಿದರು. ಶೀತಲ ಯುದ್ಧದ ವಾತಾವರಣದಲ್ಲಿ ತೃತೀಯ ಜಗತ್ತಿನ ರಾಷ್ಟ್ರಗಳು ತಮ್ಮ ವಿದೇಶಾಂಗ ನೀತಿಯ ಸ್ವಾತಂತ್ರತೆಯನ್ನು ಕಾಪಾಡಿಕೊಳ್ಳಲು, ಹಾಗೂ ತಮ್ಮ ಗುರಿಗಳನ್ನು ಸಾಧಿಸಲು ಅಲಿಪ್ತ ನೀತಿಯನ್ನು ಅನುಸರಿಸಬೇಕೆಂದು ನೆಹರೂರವರು ಕರೆಕೊಟ್ಟರು. ಅಲಿಪ್ತ ಚಳುವಳಿಯ ಸ್ಥಾಪನೆಯಲ್ಲಿ ನೆಹರೂರವರ ಪಾತ್ರ ನಿಜಕ್ಕೂ ಮಹತ್ತರವಾಗಿತ್ತು ಎನ್ನುವ ಅಂಶವನ್ನು ನಾವು ಮರೆಯುವಂತಿಲ್ಲ.



VOP_FL_MA_Pol_Sci_C-10(1-7)_TF.18_F.No.93

93

ನೆರೆ ರಾಷ್ಟ್ರಗಳಾದ ಚೀನಾ, ಪಾಕಿಸ್ತಾನ, ನೇಪಾಳಗಳಿಗೆ ಸಂಬಂಧಿಸಿದಂತೆ ನೆಹರೂರವರು ನಿರ್ಧಿಷ್ಟವಾದ ನಿಲುವುಗಳನ್ನು ತಳೆದರು. ಪಾಕಿಸ್ತಾನದ ನಾಯಕರು 1947-48 ರಲ್ಲಿ ಭಾರತವು ತನ್ನನ್ನು ಕಬಳಿಸಲು ಪ್ರಯತ್ನಿಸಬಹುದೆಂಬ ಶಂಕೆಯನ್ನು ವ್ಯಕ್ತಪಡಿಸಿದಾಗ, ಅವರ ಅನುಮಾನಗಳನ್ನು ನಿವಾರಿಸುವ ನಿಟ್ಟಿನಲ್ಲಿ, ಜವಹರ್‌ಲಾಲ್ ನೆಹರೂರವರ 1949ರಲ್ಲಿ ಪಾಕಿಸ್ತಾನದೊಡನೆ ಯುದ್ಧ ನಿಷೇಧ ಒಪ್ಪಂದಕ್ಕೆ ಸಹಿ ಹಾಕುವುದರಿಂದ, ಉಪ ಖಂಡದಲ್ಲಿ ಶಾಂತಿ ಸ್ಥಾಪನೆ ಸುಲಭವಾಗಿ ಆಗುತ್ತದೆ ಎನ್ನುವುದಾಗಿತ್ತು. ಅಲ್ಲದೆ ಯುದ್ಧದ ಭೀತಿಯಿಂದ ಹೊರಬಂದು ಎರಡೂ ರಾಷ್ಟ್ರಗಳೂ ಆರ್ಥಿಕ ಮತ್ತು ಕೈಗಾರಿಕಾ ಅಭಿವೃದ್ಧಿಯತ್ತ ಗಮನಹರಿಸಲು ಯುದ್ಧ ನಿಷೇಧ ಒಪ್ಪಂದವು ಪೂರಕವಾಗುತ್ತದೆ ಎನ್ನುವುದು ನೆಹರೂರವರ ನಂಬಿಕೆಯಾಗಿತ್ತು. ಸ್ಥಿರವಾದ, ಸುರಕ್ಷಿತವಾದ ಪಾಕಿಸ್ತಾನವು ಭಾರತದ ಹಿತದೃಷ್ಟಿಯಿಂದಲೂ ಒಳ್ಳೆಯದೆಂದು ನೆಹರೂರವರು ಹಲವು ಬಾರಿ ತಮ್ಮ ಭಾಷಣಗಳಲ್ಲಿ ಪ್ರಸ್ತಾಪ ಮಾಡಿದರು. ಆದರೆ, ಪಾಕಿಸ್ತಾನದ ನಾಯಕರು ನೆಹರೂರವರ ಈ ಯುದ್ಧ ನಿಷೇದ ಒಪ್ಪಂದವನ್ನು ತಿರಸ್ಕರಿಸಿದ್ದೇ ಅಲ್ಲದೇ, ಕಾಶ್ಮೀರ ಸಮಸ್ಯೆಯು ಬಗೆಹರಿಯುವವರೆಗೂ ಯುದ್ಧವನ್ನು ತಮ್ಮ ವಿದೇಶಾಂಗ ನೀತಿಯ ತಂತ್ರವಾಗಿ ಪರಿಗಣಿಸುವುದೆಂಬ ತಮ್ಮ ನಿಲುವನ್ನು ಘೋಷಿಸಿದರು. ನಿಜಕ್ಕೂ ದುರದೃಷ್ಟಕರ ಬೆಳವಣಿಗೆಯೇ ಸರಿ. ಅದರ ಪರಿಣಾಮವೋ ಎಂಬಂತೆ ಪಾಕಿಸ್ತಾನ 1965 ಮತ್ತು 1971 ರಲ್ಲಿ ಭಾರತದೊಡನೆ ಯುದ್ಧದಲ್ಲಿ ತೊಡಗಿತು.

ನೆಹರೂರವರ ಇನ್ನೊಂದು ಮುಖ್ಯ ಉದ್ದೇಶವು ಪಾಕಿಸ್ತಾನವು ಅಮೇರಿಕಾ ರಾಷ್ಟ್ರದೊಡನೆ ಮಿಲಿಟರಿ ಒಪ್ಪಂದವನ್ನು ಮಾಡಿಕೊಳ್ಳುವುದನ್ನು ತಪ್ಪಿಸಬೇಕೆಂಬುದು. ಅವರ ದೃಷ್ಟಿಯಲ್ಲಿ ದಕ್ಷಿಣ ಏಷ್ಯಾ ಪ್ರದೇಶವನ್ನು ಶೀತಲಸಮರದ ವಾತಾವರಣದಿಂದ ದೂರವಿಡುವುದು ಮುಖ್ಯವಾಗಿತ್ತು. ನೆಹರೂರವರ ಉದ್ದೇಶವು ಈಡೇರದೆ, ಪಾಕಿಸ್ತಾನವು 1954ರಲ್ಲಿ ಅಮೇರಿಕಾದೊಡನೆ ಮಿಲಿಟರಿ ಸಂಬಂಧಕ್ಕೆ ಸಹಿ ಹಾಕಿತು ಮತ್ತು ಅಧರ ಪ್ರತಿಫಲವಾಗಿ ಬಾರಿ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಪಡೆಯಿತು. ಭಾರತ ಮತ್ತು ಪಾಕಿಸ್ತಾನದ ನಡುವೆ ಶಸ್ತ್ರಾಸ್ತ್ರಗಳ ಪೈಪೋಟಿಯೂ ಕೂಡ ಪ್ರಾರಂಭವಾಯಿತು.

ನೆರೆ ರಾಷ್ಟ್ರಗಳೊಡನೆ ಸೌಹಾರ್ದಯುತ ಸಂಬಂಧವನ್ನು ಬೆಳೆಸುವ ನಿಟ್ಟಿನಲ್ಲಿ ನೆಹರುವರು ಚೀನಾ ರಾಷ್ಟ್ರದೊಡನೆ ಪಂಚಶೀಲ ಒಪ್ಪಂದಕ್ಕೆ 1954ರಲ್ಲಿ ಸಹಿ ಹಾಕಿದರು. ಈ ಒಪ್ಪಂದದ ಅನ್ವಯ ಎರಡೂ ರಾಷ್ಟ್ರಗಳು ಶಾಂತಿಯುತವಾಗಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಹಾಗೂ ಆಂತರಿಕ ವಿಷಯಗಳಲ್ಲಿ ಪರಸ್ಪರ ಹಸ್ತಕ್ಷೇಪ ಮಾಡುವುದಿಲ್ಲವೆಂದು ಘೋಷಿಸಿದವು. ಅಲ್ಲದೆ, ಎರಡೂ ರಾಷ್ಟ್ರಗಳೂ ಏಷ್ಯ ಖಂಡದ ಶಾಂತಿ ಮತ್ತು ಸೌಹಾರ್ದತೆಗೆ ಶ್ರಮಿಸುವುದಾಗಿ ಪಣತೊಟ್ಟವು. ಹಲವು ವಿಶ್ಲೇಷಕರ ಪ್ರಕಾರ ಭಾರತ ಮತ್ತು ಚೀನಾ ರಾಷ್ಟ್ರಗಳ ನಡುವೆ ಭವಿಷ್ಯದಲ್ಲಿ ಶಕ್ತಿ ಮತ್ತು ಪ್ರಭಾವಕ್ಕಾಗಿ ಏಷ್ಯಾ ಖಂಡದಲ್ಲಿ ಪೈಪೋಟಿಯ ಸಾಧ್ಯತೆಗಳು ಇದ್ದು, ಅದು ಮಿಲಿಟರಿ ರೂಪದಲ್ಲಿ ಬದಲಾಗುವುದನ್ನು ತಪ್ಪಿಸಲು ನೆಹರೂರವರು ಪಂಚಶೀಲ ತತ್ವವನ್ನೂ ತಮ್ಮ ರಾಯಭಾರತ್ವದ ಅಂಗವಾಗಿ ಮುಂದಿಟ್ಟರು. ಹಾಗೆಯೇ ಚೀನಾ ರಾಷ್ಟ್ರದೊಡನೆ ಮಿತ್ರತ್ವವನ್ನು ಬೆಳೆಸುವುದರಿಂದ ಚೀನಾ ಮತ್ತು ಪಾಕಿಸ್ತಾನ ಒಂದಾಗಿ ಭಾರತದ ಶಕ್ತಿ, ಪ್ರಭಾವ ಮತ್ತು ಪ್ರತಿಷ್ಠೆಗೆ ಸವಾಲು ಎಸೆಗುವುದನ್ನು ತಪ್ಪಿಸುವುದು ಕೂಡ ನೆಹರೂರವರ ರಾಯಭಾರತ್ವದ ಗುರಿಯಾಗಿತ್ತು. ಬಹುಷಃ ಅವರು ಚೀನಾ ಮತ್ತು ಪಾಕಿಸ್ತಾನ ನಡುವಣ ಮಿಲಿಟರಿ ಸಂಭಂದವು ಬೆಳೆಯುವುದನ್ನು 1962 ರ ವರೆವಿಗೂ ತಪ್ಪಿಸಿದರು. ಅದು ನೆಹರೂರವರು ರಾಯಭಾರತ್ವದ ಒಂದು ಸಾಧನೆಯೇ ಸರಿ.

ನೆರೆರಾಷ್ಟ್ರಗಳೊಡನೆ ನೆಹರೂರವರ ರಾಯಭಾರತ್ವದ ಮತ್ತೊಂದು ಅಂಶವೆಂದರೆ ಸಿಲೋನ್ (ಇಂದಿನ ಶ್ರೀಲಂಕ) ಮತ್ತು ನೇಪಾಳದೊಡನೆ ಕೂಡ ಶಾಂತಿ ಮತ್ತು ಸೌಹಾರ್ದಯುತ ಸಂಭಂದವನ್ನು ಬೆಳೆಸುವುದು. ಸಿಲೋನ್ ರಾಷ್ಟ್ರದೊಡನೆ ಭಾರತವು ಅಲಿಪ್ತ ಚಳುವಳಿಯ ಬೆಳವಣಿಗೆಯಲ್ಲಿ ಸಕಾರಾತ್ಮಕವಾದ ಪಾತ್ರವನ್ನು ನಿಭಾಯಿಸಿತು ಹಾಗೂ ದ್ವೀಪರಾಷ್ಟ್ರದ ಆರ್ಥಿಕ ಅಭಿವೃದ್ಧಿಗಾಗಿ ಎಲ್ಲ ತರಹದ ಸಹಾಯವನ್ನು ಮಾಡಿತು. ಹಿಂದೂ ರಾಷ್ಟ್ರವಾದ ನೇಪಾಳದೊಡನೆ ಹಿಂದಿನಿಂದಲೂ ಭಾರತ ಸ್ನೇಹ ಮತ್ತು ಶಾಂತಿಯುತ

ಸಂಬಂಧವನ್ನು ಬೆಳೆಸಿಕೊಂಡಿದ್ದು, ಅದನ್ನು ಮುಂದುವರೆಸಿಕೊಂಡು ಹೋಗುವುದು ನೆಹರೂರವರ ರಾಯಭಾರತ್ವದ ಗುರಿಯಾಗಿತ್ತು. ನೆಹರೂರವರು ನೀಡಿದ ಕೆಲವು ಹೇಳಿಕೆಗಳಿಂದ ಹೊರಬಂದ ಇನ್ನೊಂದು ಮುಖ್ಯ ಅಂಶವೆಂದರೆ ಭಾರತವನ್ನು ನಿರ್ಲಕ್ಷಿಸಿ, ವಿಶ್ವದ ಬೇರೆ ಯಾವ ರಾಷ್ಟ್ರವು ಕೂಡ ನೇಪಾಳದ ಆಂತರಿಕ ಮತ್ತು ವಿದೇಶಾಂಗ ನೀತಿಯಲ್ಲಿ ಹಸ್ತಸ್ನೇಹ ಮಾಡಬಾರದೆನ್ನುವುದು. ಈ ನಿಟ್ಟಿನಲ್ಲಿ ಭಾರತ ಭೌಗೋಳಿಕವಾಗಿ ತನಗಿದ್ದ ಅನುಕೂಲಗಳನ್ನು ಮುಂದುವರೆಸಿಕೊಂಡು ಹೋಗಲು ಇಚ್ಛೆಪಟ್ಟಿತು.

## ನಿಮ್ಮ ಪ್ರಗತಿ ಪರಿಶೀಲನೆ -1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ನೆಹರೂರವರ ನೆರೆಹೊರೆ ರಾಷ್ಟ್ರಗಳ ರಾಯಭಾರತ್ವದ ಪ್ರಮುಖ ತತ್ವಗಳನ್ನು ವಿವರಿಸಿ.**

.....................................................................................................................................
.....................................................................................................................................
.....................................................................................................................................
.....................................................................................................................................
.....................................................................................................................................
.....................................................................................................................................
.....................................................................................................................................

**2. ನೆಹರೂರವರು ಭಾರತ - ಚೀನಾ ಮೈತ್ರಿಯನ್ನು ಬೆಳೆಸಲು ಹಾಕಿಕೊಂಡ ಕ್ರಮಗಳಾವುವು?**

.....................................................................................................................................
.....................................................................................................................................
.....................................................................................................................................
.....................................................................................................................................
.....................................................................................................................................
.....................................................................................................................................
.....................................................................................................................................

## 3.3 ನೆರೆಹೊರೆ ರಾಷ್ಟ್ರಗಳೊಡನೆ ಇಂದಿರಾಗಾಂಧಿಯವರ ಕಾಲದ ರಾಯಭಾರತ್ವ

ಇಂದಿರಾ ಗಾಂಧಿಯವರು ಪ್ರಧಾನಿಯಾಗುವ ಮೊದಲು ಪ್ರಧಾನಿಯಾಗಿದ್ದ ಲಾಲ್‌ಬಹುದ್ದೂರ್‌ಶಾಸ್ತ್ರಿಯವರೂ ಕೂಡ ನೆರೆರಾಷ್ಟ್ರಗಳೊಡನೆ ಸೌಹಾರ್ದತೆ ಮತ್ತು ಶಾಂತಿಗಾಗಿ ತಮ್ಮದೇ ಆದ ಶೈಲಿಯಲ್ಲಿ ರಾಯಭಾರತ್ವವನ್ನು ನಡೆಸಿದ್ದರು. ಪ್ರಮುಖವಾಗಿ ಪಾಕಿಸ್ತಾನದೊಡನೆ ಅವರು ಸಹಿಹಾಕಿದ ತಾಷ್ಕೆಂಟ್ ಒಪ್ಪಂದವನ್ನು ನಾವು ಇಲ್ಲಿ ಸ್ಮರಿಸಬೇಕಾಗುತ್ತದೆ. ಸಿಲೋನ್ (ಇಂದಿನ ಶ್ರೀಲಂಕ) ದೊಡನೆ ಕೂಡ ಅವರು ಶಾಂತಿಯುತ ಸಂಬಂಧವನ್ನು ಮುಂದುವರೆಸಿಕೊಂಡು ಹೋದರು.

ಇಂದಿರಾಗಾಂಧಿಯವರು ಭಾರತದ ಮಿಲಿಟರಿ ಶಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿದೇಶಾಂಗ ನೀತಿಯನ್ನು ಹಮ್ಮಿಕೊಂಡರೂ ಕೂಡ, ನೆರೆರಾಷ್ಟ್ರಗಳೊಡನೆ ಶಾಂತಿ ಮತ್ತು ಮಿತ್ರತ್ವವನ್ನು ಮುಂದುವರೆಸಿಕೊಂಡು ಹೋಗಲು ಒತ್ತುಕೊಟ್ಟರು. ಇಂದಿರಾಗಾಂಧಿಯವರ

ರಾಯಭಾರತ್ವದಲ್ಲಿ ಪ್ರಮುಖವಾಗಿ ಕಂಡು ಬರುವುದು ಪೂರ್ವ ಪಾಕಿಸ್ತಾನದ ಅವಾಮೀಲೀಗ್‌ಗೆ ನ್ಯಾಯಬದ್ಧವಾಗಿ ಸಿಗಬೇಕಾಗಿದ್ದ ರಾಜತಾಂತ್ರಿಕ ಅಧಿಕಾರವನ್ನು ಕೊಡಿಸಲು ಅವರು ಬೃಹತ್ ರಾಷ್ಟ್ರಗಳೊಡನೆ ನಡೆಸಿದ ಸಂಧಾನ. ಅಮೇರಿಕಾದ ಅಧ್ಯಕ್ಷ ನಿಕ್ಸನ್‌ರವರನ್ನು ಭೇಟಿ ಮಾಡಿ ಪಾಕಿಸ್ತಾನದ ಮಿಲಿಟರಿ ಅಧ್ಯಕ್ಷ ಯಾಯ್ಯಾಖಾನ್‌ರವರ ಮೇಲೆ ನಿಕ್ಸನ್‌ರವರು ಒತ್ತಡ ತರಲು ತೀವ್ರ ಸಂದಾನ ನಡೆಸಿದರು. ಸಂಧಾನ ಮಾರ್ಗ ವಿಫಲವಾದಾಗ, ಪೂರ್ವಪಾಕಿಸ್ತಾನದ ಮುಕ್ತಿಬಾಹಿನಿಗೆ ನೆರವನ್ನು ಕೊಡಲು ತಯಾರಾದರು. ಪಾಕಿಸ್ತಾನವು ಭಾರತದ ಮೇಲೆ ಯುದ್ಧವನ್ನು ಹೇರಿದಾಗ, ಯುದ್ಧದಲ್ಲಿ ಜಯವನ್ನು ಗಳಿಸಿ ಪೂರ್ವ ಪಾಕಿಸ್ತಾನದ ವಿಮೋಚನೆಯನ್ನು ಮಾಡಿ ಬಾಂಗ್ಲದೇಶದ ಸೃಷ್ಟಿಗೆ ಕಾರಣರಾದರು. ನಂತರದಲ್ಲಿ ಬಾಂಗ್ಲದೇಶದ ಜೊತೆ ಸ್ನೇಹ ಸಂಬಂಧಕ್ಕಾಗಿ 20 ವರ್ಷಗಳ ಅವಧಿಯ ಒಪ್ಪಂದಕ್ಕೆ ಸಹಿಹಾಕಿದರು. ಬಾಂಗ್ಲದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕೂಡ ಇಂದಿರಾಗಾಂಧಿಯವರು ಮಹತ್ತರ ಪಾತ್ರವನ್ನು ವಹಿಸಿದರು. ಮುಖ್ಯವಾಗಿ ಬಾಂಗ್ಲದೇಶವು ಅಸ್ತಿತ್ವಕ್ಕೆ ಬಂದಿದ್ದರಿಂದ ದಕ್ಷಿಣ ಏಷ್ಯಾದಲ್ಲಿನ ಶಕ್ತಿ ಸಮತೋಲನವನ್ನು ಭಾರತದ ಪರವಾಗಿ ನಿರ್ಮಿಸುವಲ್ಲಿ ಇಂದಿರಾಗಾಂಧಿಯವರು ಸಫಲರಾದರು.

ಯುದ್ಧದಲ್ಲಿ ಪಾಕಿಸ್ತಾನವನ್ನು ಪರಾಜಯಗೊಳಿಸಿದರೂ ಕೂಡ, ಆ ರಾಷ್ಟ್ರದೊಡನೆ ಜುಲೈ 1972 ರಲ್ಲಿ ಸಿಮ್ಲಾ ಒಪ್ಪಂದವನ್ನು ಮಾಡಿಕೊಳ್ಳುವ ದಿಟ್ಟ ರಾಯಭಾರತ್ವದ ಮೂಲಕ ಇಂದಿರಾಗಾಂಧಿಯವರು ಪಾಕಿಸ್ತಾನದ ನಾಯಕರಾದ ಭುಟ್ಟೋರವರ ಗೌರವ ಮತ್ತು ಘನತೆಯನ್ನು ಕಾಪಾಡಿದರು. ಸಿಮ್ಲಾ ಒಪ್ಪಂದದ ಪ್ರಕಾರ ಪಾಕಿಸ್ತಾನವು ಭಾರತದೊಡನೆ ತನ್ನ ಎಲ್ಲಾ ಸಮಸ್ಯೆಗಳನ್ನು ಶಾಂತಿಯುತವಾಗಿ ಪರಸ್ಪರ ಮಾತುಕತೆ ಮತ್ತು ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಸಮ್ಮತಿಯನ್ನು ಸೂಚಿಸುವಂತೆ ಮಾಡಿದರು.

ನೇಪಾಳದೊಡನೆ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಿಕೊಂಡು ಹೋಗುವ ನೀತಿಯನ್ನು ಮುಂದುವರೆಸಿದರೂ ಕೂಡ, ಭಾರತದ ಭೌಗೋಳಿಕ ಪ್ರಧಾನ್ಯತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ನೇಪಾಳದ ದೊರೆಯವರ 'ನೇಪಾಳ ಶಾಂತಿವಲಯ' ಪ್ರಸ್ತಾಪಕ್ಕೆ ತಮ್ಮ ಇಂಗಿತವನ್ನು ನೇರವಾಗಿ ನೀಡದೆ, ವೈಶಿಷ್ಟ್ಯಮಯ ರಾಯಭಾರತ್ವವನ್ನು ಇಂದಿರಾಗಾಂಧಿಯವರು ನಡೆಸಿದರು.

ಶ್ರೀಲಂಕಾದಲ್ಲಿ 1971 ರಲ್ಲಿ ಎಡಪಂತದ ಸಹಾಯದಿಂದ ಹುಟ್ಟಿಕೊಂಡಿದ್ದ ಬುಡಮೇಲು ಕೃತ್ಯರೂಪದ ಬಂಡಾಯವನ್ನು ಅಲ್ಲಿನ ಸರ್ಕಾರ ಯಶಸ್ವಿಯಾಗಿ ಮಟ್ಟಹಾಕಲು ಭಾರತದ ರಕ್ಷಣಾ ನೆರವನ್ನು ಇಂದಿರಾಗಾಂಧಿಯವರು ನೀಡಿದರು. ಅಂದಿನ ಶ್ರೀಲಂಕಾ ಸರ್ಕಾರವು ಭಾರತಕ್ಕೆ ಋಣಿಯಾಗಿರುವಂತೆಯೂ ಆಯಿತು.

ಶ್ರೀಲಂಕಾ ಸರ್ಕಾರದೊಡನೆ ಇಂದಿರಾಗಾಂಧಿಯವರು ನಡೆಸಿದ ರಾಯಭಾರತ್ವದ ಮತ್ತೊಂದು ಪ್ರಮುಖ ಘಟನೆಯೆಂದರೆ 1974ರಲ್ಲಿ ಮಾಡಿಕೊಂಡು ಕಚ್ಚಾತಿವೊ ಒಪ್ಪಂದ. ಈ ಒಪ್ಪಂದದ ಮೇರೆಗೆ ವಿವಾದಕ್ಕೆ ಒಳಗಾಗಿದ್ದ ಶ್ರೀಲಂಕಾದೇಶದ ಪರಮಾಧಿಕಾರವು ಕಚ್ಚಾತಿವೊ ದ್ವೀಪಕ್ಕೂ ವ್ಯಾಪ್ತಿಯಾಯಿತು. ಶ್ರೀಲಂಕ ರಾಷ್ಟ್ರದ ಪರಮಾಧಿಕಾರವನ್ನು ಗೌರವಿಸುವುದರ ಮೂಲಕ ಭಾರತ ಸರ್ಕಾರವು ಕಚ್ಚಾತಿವೊ ದ್ವೀಪದಲ್ಲಿ ಭಾರತದ ಮೀನುಗಾರರು ಯಾನಮಾಡುವ ಮತ್ತು ಅಲ್ಲಿಗೆ ತೀರ್ಥಯಾತ್ರೆಗೆ ಹೋಗುವ ಭಾರತೀಯರ ಹಕ್ಕನ್ನು ಶ್ರೀಲಂಕಾ ಸರ್ಕಾರವು ಅಂಗೀಕರಿಸುವಂತೆ ಮಾಡಿತು. ಒಟ್ಟಿನಲ್ಲಿ, ಕಚ್ಚಾತಿವೊ ಒಪ್ಪಂದದಿಂದ ಶ್ರೀಲಂಕಾ ಮತ್ತು ಭಾರತ ಸರ್ಕಾರಗಳಿಗೆ ಲಾಭವಾಯಿತು. ಈ ಒಪ್ಪಂದದಿಂದ ಎರಡೂ ರಾಷ್ಟ್ರಗಳ ನಡುವಣ ಸೌಹಾರ್ದತೆ ಹೆಚ್ಚಾಯಿತು. ಇಂದಿರಾ ಗಾಂಧಿಯವರ ರಾಯಭಾರತ್ವಕ್ಕೆ ಯಶಸ್ಸು ಕೂಡ ಸಿಕ್ಕಿತು.

ನೆರೆರಾಷ್ಟ್ರಗಳೊಡನೆ ಇಂದಿರಾಗಾಂಧಿಯವರು ಹಮ್ಮಿಕೊಂಡಿದ್ದ ಸಕಾರಾತ್ಮಕ ರಾಯಭಾರತ್ವದ ಮತ್ತೊಂದು ನಿದರ್ಶನವೆಂದರೆ ಚೀನಾರಾಷ್ಟ್ರದೊಡನೆ ರಾಯಭಾರಿಗಳ ಸಂಪರ್ಕವನ್ನು ಪುನರ್‌ಸ್ಥಾಪನೆ ಮಾಡಿದ್ದು. 1962 ರ ಯುದ್ಧದ ಪರಿಣಾಮವಾಗಿ ಭಾರತ ಚೀನಾದಿಂದ ತನ್ನ ರಾಯಭಾರಿಯನ್ನು ಹಿಂದಕ್ಕೆ ಕರೆಸಿಕೊಂಡಿತ್ತು. 14 ವರ್ಷಗಳ ನಂತರದಲ್ಲಿ ಚೀನಾದೊಡನೆ ಸಂಪರ್ಕ ಮತ್ತು ಮಿತ್ರತ್ವವನ್ನು ಬೆಳೆಸಿಕೊಂಡು ಹೋಗುವ ಉದ್ದೇಶದಿಂದ ಇಂದಿರಾಗಾಂಧಿಯವರು ಎರಡೂ ರಾಷ್ಟ್ರಗಳ ಭವಿಷ್ಯವನ್ನು

ಗಮನದಲ್ಲಿಟ್ಟುಕೊಂಡು, ಚೀನಾದೊಡನೆ ಪೂರ್ಣಪ್ರಮಾಣದ ರಾಯಭಾರಿ ಸಂಬಂಧಕ್ಕೆ ಎಡೆಮಾಡಿಕೊಟ್ಟರು. ನುರಿತ ರಾಯಭಾರಿಯಾಗಿದ್ದ ಕೆ.ಆರ್. ನಾರಾಯಣ್‌ರವರನ್ನು ಚೀನಾಕ್ಕೆ ರಾಯಭಾರಿಯನ್ನಾಗಿ ನೇಮಕ ಮಾಡಿ ಪರಸ್ಪರ ಸಂಬಂಧವನ್ನು ಹೆಚ್ಚಿಸುವ ಸಂಕೇತವನ್ನು ಇಂದಿರಾಗಾಂಧಿಯವರು ನೀಡಿದರು. ನಿಜಕ್ಕೂ ಒಂದು ಮಹತ್ತರ ಬೆಳವಣಿಗೆಯೇ ಸರಿ. ಅವರ ಈ ನಿರ್ಧಾರದ ಪ್ರತಿಫಲವೆಂಬಂತೆ ಮುಂದಿನ ವರ್ಷಗಳಲ್ಲಿ ಭಾರತ-ಚೀನಾ ರಾಷ್ಟ್ರಗಳ ನಡುವೆ ಉನ್ನತ ಮಟ್ಟದಲ್ಲಿ ಪರಸ್ಪರ ಭೇಟಿಗಳಾಗಿ ಸಮಸ್ಯೆಗಳ ಪರಿಹಾರಕ್ಕೆ ಮತ್ತು ಮಾತುಕತೆಗೆ ಸಕಾರಾತ್ಮಕವಾದ ವಾತಾವರಣ ಸೃಷ್ಟಿಯಾಯಿತು.

1977ರಲ್ಲಿ ಅಧಿಕಾರಕ್ಕೆ ಬಂದ ಜನತಾ ಸರ್ಕಾರದ ಪ್ರಧಾನಮಂತ್ರಿ ಮುರಾರ್ಜಿ ದೇಸಾಯಿಯವರು ಮತ್ತು ಅಂದಿನ ವಿದೇಶಾಂಗ ಸಚಿವ ಅಟಲ್ ಬಿಹಾರಿ ವಾಜಪೇಯಿಯವರೂ ಕೂಡ ನೆರೆರಾಷ್ಟ್ರಗಳೊಡನೆ ರಾಯಭಾರತ್ವವನ್ನು ಹೆಚ್ಚಿಸಲು ಆದ್ಯತೆ ನೀಡಿದರು. ವಾಜಪೇಯಿಯವರು ಚೀನಾಕ್ಕೆ ಭೇಟಿ ನಾಡಿ ಪರಸ್ಪರ ಸಂಬಂಧವನ್ನು ಬೆಳೆಸಲು ಕಾರಣೀಭೂತರಾದರು. ಚೀನಾದೇಶವು ಹಟಕ್ಕಾಗಿ ವಿಯೆಟ್ನಾಂ ರಾಷ್ಟ್ರದ ಮೇಲೆ ಆಕ್ರಮಣ ಮಾಡಿದ್ದರಿಂದ, ಭಾರತ-ವಿಯೆಟ್ನಾಂ ಮಿತ್ರತ್ವದ ಸಂಕೇತವಾಗಿ ವಾಜಪೇಯಿಯವರು ತಮ್ಮ ಚೀನಾ ಪ್ರವಾಸವನ್ನು ಮೊಟಕುಗೊಳಿಸಿ ಭಾರತಕ್ಕೆ ವಾಪಸಾದರು.

ಪಾಕಿಸ್ತಾನದೊಡನೆ ಕೂಡ ಭಾರತದ ಸಂಬಂಧ ವೃದ್ಧಿಸಿತು. ಪ್ರಧಾನಿ ಮುರಾರ್ಜಿ ದೇಸಾಯಿಯವರಿಗೆ ಪಾಕಿಸ್ತಾನವು ತನ್ನ ದೇಶದ ಶ್ರೇಷ್ಠ ನಾಗರಿಕ ಗೌರವ ಪ್ರಶಸ್ತಿ ಪ್ರದಾನಮಾಡಿತು. ಬಾಂಗ್ಲದೇಶದೊಡನೆ ಜನತಾ ಸರ್ಕಾರವು ಫರಕ್ಕಾ ಒಪ್ಪಂದಕ್ಕೆ ಸಹಿಹಾಕುವ ಮೂಲಕ ಎರಡೂ ರಾಷ್ಟ್ರಗಳೊಡನೆ ಮುಂದುವರೆದಿದ್ದ ಗಂಗಾ ನದಿ ನೀರಿನ ಹಂಚಿಕೆಗೆ ಸಮಾಧಾನಕರವಾದ ವಾತಾವರಣ ಸೃಷ್ಟಿಯಾಗಲು ದಾರಿಮಾಡಿಕೊಟ್ಟಿತು.

## 3.4 ನೆರೆರಾಷ್ಟ್ರಗಳೊಡನೆ ರಾಜೀವ್‌ಗಾಂಧಿಯವರ ಕಾಲದ ರಾಯಭಾರತ್ವ

ಪ್ರಧಾನ ಮಂತ್ರಿಯಾಗಿ ರಾಜೀವ್ ಗಾಂಧಿಯವರು ಪಾಕಿಸ್ತಾನಕ್ಕೆ ಭೇಟಿ ನೀಡಿ, ಅಲ್ಲಿನ ಪ್ರಧಾನಿ ಬೆನೆಜಿರ್ ಭುಟ್ಟೋರೊಡನೆ ಮಾತುಕತೆ ನಡೆಸುವುದರ ಮೂಲಕ ಪರಸ್ಪರ ಸಂಬಂಧ ಬೆಳೆಯಲು ದಾರಿಮಾಡಿಕೊಟ್ಟರು. ಎರಡು ರಾಷ್ಟ್ರಗಳ ನಡುವಿನ ಮಿಲಿಟರಿ ವಾತಾವರಣವನ್ನು ಸುಧಾರಿಸುವ ದೃಷ್ಟಿಯಿಂದ ಪರಸ್ಪರ ವಿಶ್ವಾಸ ಹೆಚ್ಚಿಸುವ ಒಪ್ಪಂದವನ್ನು ಕೂಡ ಭಾರತ ಮತ್ತು ಪಾಕಿಸ್ತಾನ ಮಾಡಿಕೊಂಡವು. ನೇಪಾಳ ಮತ್ತು ಬಾಂಗ್ಲಾದೇಶಗಳೊಡನೆ ಕೂಡ ಭಾರತದ ಸಂಬಂಧವನ್ನು ಹೆಚ್ಚಿಸುವಲ್ಲಿ ರಾಜೀವ್‌ಗಾಂಧಿಯವರು ಸಫಲರಾದರು.

ಚೀನಾ ರಾಷ್ಟ್ರಕ್ಕೆ ಭೆಟಿ ನೀಡುವುದರ ಮೂಲಕ ರಾಜೀವ್ ಗಾಂಧಿಯವರು ಎರಡು ರಾಷ್ಟ್ರಗಳ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸಂಬಂಧ ಸುಧಾರಣೆಗೆ ಕಾರಣರಾದರು. ಅವರ ಚೀನಾ ಭೇಟಿಯ ಫಲವಾಗಿ ಗಡಿವಿವಾದದ ಇತ್ಯರ್ಥಕ್ಕಾಗಿ ಎರಡೂ ರಾಷ್ಟ್ರಗಳ ವಿದೇಶಾಂಗ ಸಚಿವಾಲಯದ ಅಧಿಕಾರಿಗಳ ಮಾತುಕತೆಯೂ ಕೂಡ ಪ್ರಾರಂಭವಾಯಿತು.

ವಿವಾದಕ್ಕೊಳಗಾದ ರಾಜೀವ್‌ಗಾಂಧಿಯವರ ರಾಯಭಾರತ್ವದ ಒಂದು ಅಂಶವೆಂದರೆ ಶ್ರೀಲಂಕಾದಲ್ಲಿನ ಜನಾಂಗೀಯ ಸಮಸ್ಯೆಯ ನಿವಾರಣೆಗಾಗಿ ಭಾರತದ ಸೈನಿಕರನ್ನು ಅಲ್ಲಿಗೆ ಕಳುಹಿಸಿದ್ದು. ಮಂತ್ರಿ ಮಂಡಲದ ಹಾಗೂ ವಿದೇಶಾಂಗ ಸಚಿವಾಲಯದ ಜೊತೆಯಲ್ಲಿ ಯಾವ ರೀತಿಯಲ್ಲೂ ಮಾತುಕತೆ ನಡೆಸದೆ, ರಾಜೀವ್ ಗಾಂಧಿಯವರು ನೇರವಾಗಿ ಶ್ರೀಲಂಕಾದ ಅಧ್ಯಕ್ಷ ಜಯವರ್ಧನೆಯವರ ಕೋರಿಕೆಯ ಮೇರೆಗೆ ದ್ವೀಪ ರಾಷ್ಟ್ರಕ್ಕೆ ಭಾರತದ ಸೈನ್ಯವನ್ನು ಕಳುಹಿಸುವ ನಿರ್ಧಾರವನ್ನು ತೆಗೆದುಕೊಂಡರು. ಆದರೆ ಅಲ್ಲಿನ ಅಧ್ಯಕ್ಷರು ಭಾರತದ ಸೈನ್ಯವನ್ನು ಎಲ್.ಟಿ.ಟಿ.ಇ. ವಿರುದ್ಧ ಉಪಯೋಗಿಸಿಕೊಂಡು, ತಮಿಳರ ಹತ್ಯೆಯನ್ನು ಬೃಹತ್ ಪ್ರಮಾಣದಲ್ಲಿ ಭಾರತದ ಸೈನಿಕರಿಂದ ಮಾಡಿಸುವುದರ ಮೂಲಕ ಭಾರತದಲ್ಲಿ, ವಿಶೇಷವಾಗಿ ತಮಿಳುನಾಡಿನಲ್ಲಿ,ಶ್ರೀಲಂಕಾದೊಡನೆ ವೈಷಮ್ಯ ಬೆಳೆಯಲು

ಎಡೆಮಾಡಿಕೊಟ್ಟರು. ಎಲ್. ಟಿ.ಟಿ.ಇ. ಮತ್ತು ಭಾರತದ ಸೈನಿಕರೊಡನೆ ನೇರ ಸಮರವಾಗಿ, ಭಾರತದ ಸಹಸ್ರಾರು ಸೈನಿಕರು ಅಸುನೀಗುವ ಪ್ರಸಂಗವೂ ಬಂದಿತು. ರಾಜೀವ್ ಗಾಂಧಿಯವರ ಶ್ರೀಲಂಕಾ ನೀತಿಯು ವಿಫಲವಾಗಿ ಮುಂದಿನ ವರ್ಷಗಳಲ್ಲಿ ಭಾರತ ದ್ವೀಪರಾಷ್ಟ್ರದ ಜನಾಂಗೀಯ ಸಮಸ್ಯೆಯಿಂದ ದೂರ ಸರಿಯುವಂತಾಯಿತು. ಎಲ್.ಟಿ.ಟಿ.ಇ. ನ ಯೋಧರು ಭಾರತದ ಸೈನಿಕರಿಂದ ಹತ್ಯೆಗೊಳಗಾದರೆಂಬ ಕಾರಣದಿಂದ, ಎಲ್.ಟಿ.ಟಿ.ಇ. ರಾಜೀವ್ ಗಾಂಧಿಯವರ ವಿರುದ್ಧ ಸಂಚುಮಾಡಿ, ಅವರ ಹತ್ಯೆಗೂ ಕಾರಣವಾಯಿತು.

ನರಸಿಂಹರಾವ್‌ರವರು ಪ್ರಧಾನಿಯಾಗಿದ್ದ ಕಾಲದಲ್ಲಿ ಭಾರತದ ವಿದೇಶಾಂಗ ನೀತಿಯು ಆರ್ಥಿಕ ಅಂಶಗಳಿಗೆ ಒತ್ತು ಕೊಡುವುದರ ಮೂಲಕ ಪಾಶ್ಚಿಮಾತ್ಯ ರಾಷ್ಟ್ರಗಳೊಡನೆ ಸಂಬಂಧ ಹೆಚ್ಚಿಸಲು ಶ್ರಮಿಸಿತು. ನೆರೆರಾಷ್ಟ್ರಗಳೊಡನೆ ಸಂಬಂಧವನ್ನು ಮುಂದುವರೆಸಿಕೊಂಡು ಹೋದ ರಾವ್ ಸರ್ಕಾರವು ದಕ್ಷಿಣ ಏಷ್ಯ ಪ್ರಾದೇಶಿಕ ಸಹಕಾರಕ್ಕೆ ಆದ್ಯತೆಯನ್ನು ನೀಡಿತು.

## 3.5 ಗುಜ್ರಾಲ್ ತತ್ವ ಮತ್ತು ನೆರೆಹೊರೆ ರಾಷ್ಟ್ರಗಳೊಡನೆ ರಾಯಭಾರತ್ವ

1990 ರ ದಶಕದಲ್ಲಿನ ನೆರೆಹೊರೆ ರಾಷ್ಟ್ರಗಳೊಡನೆ ಭಾರತದ ರಾಯಭಾರತ್ವವನ್ನು ಗಮನಿಸಿದಾಗ, ಗಣನೀಯವಾಗಿ ಕಂಡುಬರುವುದು ಗುಜ್ರಾಲ್ ತತ್ವ. ತಾವು ಪ್ರಧಾನಮಂತ್ರಿಯಾಗಿದ್ದಾಗ ನೆರೆ ರಾಷ್ಟ್ರಗಳೊಡನೆ ಸಂಬಂಧವನ್ನು ಸುಧಾರಿಸುವ ನಿಟ್ಟಿನಲ್ಲಿ ಗುಜ್ರಾಲ್‌ರವರು ತಮ್ಮದೇ ಆದ ತತ್ವವನ್ನು ಪ್ರತಿಪಾದಿಸಿದರು. ಅದನ್ನು ಗುಜ್ರಾಲ್ ತತ್ವ ಎಂದೇ ಕರೆಯಲಾಗಿದೆ. ಅದರ ಪ್ರಕಾರ, ಗುಜ್ರಾಲ್‌ರವರ ದೃಷ್ಟಿಯಲ್ಲಿ ದಕ್ಷಿಣ ಏಷ್ಯಾದಲ್ಲಿ ಬೃಹತ್ ರಾಷ್ಟ್ರವಾದ ಭಾರತವು, ಪಾಕಿಸ್ತಾನವನ್ನು ಹೊರತುಪಡಿಸಿ, ಬೇರೆ ಎಲ್ಲಾ ದಕ್ಷಿಣ ಏಷ್ಯಾ ರಾಷ್ಟ್ರಗಳೊಡನೆ ಪ್ರತಿಯಾಗಿ ಏನನ್ನು ನಿರೀಕ್ಷಿಸದೆ, ಏಕಪಕ್ಷವಾಗಿ ರಿಯಾಯಿತಿಯನ್ನು ತೋರಿಸಿ ರಾಷ್ಟ್ರಗಳು ಭಾರತದೊಡನೆ ಇಟ್ಟುಕೊಂಡಿರುವ ಅನುಮಾನಗಳನ್ನು ಹೋಗಲಾಡಿಸಿ ಸಂಬಂಧಗಳನ್ನು ಸುಧಾರಿಸುವುದು. ಗುಜ್ರಾಲ್‌ರವರ ಈ ತತ್ವದಿಂದಾಗಿ ನೇಪಾಳ, ಬಾಂಗ್ಲದೇಶ, ಭೂತಾನ್, ಮಾಲ್‌ಡೀವ್ಸ್ ಮತ್ತು ಶ್ರೀಲಂಕಾ ರಾಷ್ಟ್ರಗಳೊಡನೆ ಭಾರತದ ಸಂಬಂಧ ಗಮನಾರ್ಹವಾಗಿ ಸುಧಾರಿಸಿತು. ಪಾಕಿಸ್ತಾನದ ಜೊತೆಯಲ್ಲಿ ಕೂಡ ಅವರು ಮಾತುಕತೆಗಳನ್ನು ಪ್ರಾರಂಭಿಸಿ ಎರಡೂ ರಾಷ್ಟ್ರಗಳು ಕಾಶ್ಮೀರವನ್ನು ಸೇರಿ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಪೂರಕವಾದ ರಾಯಭಾರತ್ವವನ್ನು ನಿಭಾಯಿಸಿದರು. ಅವರ ಕಾಲದಲ್ಲಿ ಚಾಲನೆಗೆ ಬಂದ 'ಕಾಂಪೊಸಿಟ್ ಡೈಲಾಗ್' ಎಂಬ ಪದವನ್ನು ಮುಂದಿನ ಸರ್ಕಾರಗಳು ಒಪ್ಪಿಕೊಂಡು ಭಾರತ-ಪಾಕಿಸ್ತಾನ ನಡುವಣ ಸಂಧಾನವನ್ನು ಮುಂದುವರೆಸುವ ನಿಟ್ಟಿನಲ್ಲಿ ಕಾರ್ಯ ನಿಭಾಯಿಸುತ್ತಿದ್ದಾರೆ.

### ನಿಮ್ಮ ಪ್ರಗತಿ ಪರಿಶೀಲನೆ - 2

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಇಂದಿರಾಗಾಂಧಿಯವರು ನೆರೆರಾಷ್ಟ್ರಗಳೊಡನೆ ನಡೆಸಿದ ರಾಯಭಾರತ್ವದ ಸಾಧನೆಗಳನ್ನು ವಿವರಿಸಿ.**

.............................................................................................................................

.............................................................................................................................

.............................................................................................................................

.............................................................................................................................

.............................................................................................................................

.............................................................................................................................

.............................................................................................................................

**2.** ಜನತಾ ಪಕ್ಷ ಸರ್ಕಾರದ ನೆರೆರಾಷ್ಟ್ರಗಳ ರಾಯಭಾರತ್ವವನ್ನು ವಿಶ್ಲೇಷಿಸಿ.

..................................................................................................................................

..................................................................................................................................

..................................................................................................................................

..................................................................................................................................

..................................................................................................................................

..................................................................................................................................

..................................................................................................................................

## 3.6 ನೆರೆಹೊರೆ ರಾಷ್ಟ್ರಗಳೊಂದಿಗಿನ ವಾಜಪೇಯಿಯವರ ಕಾಲದ ರಾಯಭಾರತ್ವ

ನೆರೆಹೊರೆ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಭಾರತವು ಹಮ್ಮಿಕೊಂಡ ರಾಯಭಾರತ್ವದ ಸ್ವರೂಪವು 1998 ರಲ್ಲಿ ಅಟಲ್‌ಬಿಹಾರಿವಾಜಪೇಯಿಯವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದ ಎನ್.ಡಿ.ಎ. ಸರ್ಕಾರದ ಅವಧಿಯಲ್ಲಿ ಗಮನಾರ್ಹವಾಗಿ ಬದಲಾಯಿತು. ವಿದೇಶಾಂಗ ವಿಷಯಗಳಲ್ಲಿ ತಮಗಿದ್ದ ಅಪಾರ ಪಾಂಡಿತ್ಯ ಮತ್ತು ಅನುಭವದಿಂದ ವಾಜಪೇಯಿಯವರು ತಮ್ಮದೇ ಆದ ವೈಶಿಷ್ಟ್ಯಪೂರ್ಣ ರಾಯಭಾರತ್ವವನ್ನು ನೆರೆರಾಷ್ಟ್ರಗಳೊಡನೆ ನಿಭಾಯಿಸಿದರು.

ಭಾರತವನ್ನು ಅಣ್ವಸ್ತ್ರ ರಾಷ್ಟ್ರವನ್ನಾಗಿ ಮಾರ್ಪಾಡು ಮಾಡಿದ ವಾಜಪೇಯಿಯವರ ನೀತಿಯು ಭಾರತದ ಶಕ್ತಿಯನ್ನು ಹೆಚ್ಚಿಸಿದರೂ ಅದು ಸಾಕಷ್ಟು ವಿವಾದ ಮತ್ತು ಟೀಕೆಗೆ ಒಳಗಾಗಿ, ಅದರ ಪರಿಣಾಮವೆಂಬಂತೆ ಪಾಕಿಸ್ತಾನವೂ ಅಣ್ವಸ್ತ್ರ ರಾಷ್ಟ್ರವಾಗುವಂತೆ ಮಾಡಿತು. ಭಾರತ ಏಕಪಕ್ಷೀಯವಾಗಿ ಅಣ್ವಸ್ತ್ರವನ್ನು ಉಪಯೋಗಿಸುವುದಿಲ್ಲ ಎನ್ನುವ ಹೇಳಿಕೆಯನ್ನು ನೀಡಿ, ಇಡೀ ಅಂತರ ರಾಷ್ಟ್ರೀಯ ಸಮುದಾಯದ, ಚೀನಾದ ವಿಶ್ವಾಸವನ್ನು ಗಳಿಸುವಲ್ಲಿ ವಾಜಪೇಯಿಯವರು ಯಶಸ್ವಿಯಾದರು.

ಪಾಕಿಸ್ತಾನದ ನಾಯಕ ನವಾಜ್ ಷರೀಫ್‌ರವರೊಡನೆ ವಿಶ್ವಾಸ ಮತ್ತು ನಂಬಿಕೆಯನ್ನು ಬೆಳೆಸಿಕೊಂಡ ವಾಜಪೇಯಿಯವರು ಪಾಕಿಸ್ತಾನದೊಡನೆ ಸಂಬಂಧವನ್ನು ಹೆಚ್ಚಿಸುವುದರಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟರು. ಅವರ ಲಾಹೋರ್ ಬಸ್‌ಯಾತ್ರೆ ಅಂತರರಾಷ್ಟ್ರೀಯ ಸಮುದಾಯದಿಂದಲೂ ಪ್ರಶಂಸೆಗೆ ಒಳಗಾಯಿತು. ಪಾಕಿಸ್ತಾನದ ಪ್ರಧಾನಿ ನವಾಜ್ ಷರೀಫ್‌ರವರೊಡನೆ ಮಾಡಿದ ಲಾಹೋರ್ ಘೋಷಣೆ ಅನ್ವಯ ಭಾರತ ಮತ್ತು ಪಾಕಿಸ್ತಾನ ಪರಸ್ಪರ ವಿಶ್ವಾಸ ಮೂಡಿಸುವ ದೆಸೆಯಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡವು. ಕಾಶ್ಮೀರವೂ ಸೇರಿದಂತೆ ಎಲ್ಲಾ ವಿಷಯಗಳಿಗೂ ಸಂಬಂಧಿಸಿದಂತೆ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆಗೆ ಲಾಹೋರ್ ಘೋಷಣೆ ನಾಂದಿಯಾಗಿತ್ತು. ಆದರೆ ಅನಿರೀಕ್ಷಿತವಾಗಿ ಆದ ಕಾರ್ಗಿಲ್ ಯುದ್ಧ ಮತ್ತು ನಂತರದಲ್ಲಿ ಆದ ನವಾಜ್ ಷರೀಫ್‌ರವರ ಪದಚ್ಯುತಿ ಮತ್ತು ಆಡಳಿತಕ್ಕೆ ಬಂದ ಮಿಲಿಟರಿ ಜನರಲ್ ಮುಷ್‌ರಫ್‌ರವರೊಡನೆ ಭಾರತದ ಸಂಬಂಧ ಕೆಟ್ಟಿತು. ಜನರಲ್ ಮುಷರಫ್ ಸರ್ಕಾರವು ಗಡಿಯಾಚೆಯಿಂದ ಮೂಡಿಬಂದ ಭಯೋತ್ಪಾದಕರಿಗೆ ವಿಶೇಷವಾಗಿ ನೀಡಿದ ಬೆಂಬಲದಿಂದಾಗಿ ಭಾರತ - ಪಾಕಿಸ್ತಾನ ನಡುವಣ ಸಂಬಂಧದಲ್ಲಿ ವೈಷಮ್ಯ ಮತ್ತು ಅಪನಂಬಿಕೆ ಮೂಡಿತು. ಆದರೂ ಸಹ ಪಾಕಿಸ್ತಾನದೊಡನೆ ಮೈತ್ರಿಯನ್ನು ಹೆಚ್ಚಿಸಿಕೊಳ್ಳಬೇಕೆನ್ನುವ ಮತ್ತು ಕಾಶ್ಮೀರ ಸಮಸ್ಯೆಗೆ ಒಂದು ಶಾಶ್ವತ ಪರಿಹಾರವನ್ನು ಕಲ್ಪಿಸಬೇಕೆನ್ನುವ ಮಹತ್ವಾಕಾಂಕ್ಷೆಯಿಂದ ವಾಜಪೇಯಿಯವರು ಪಾಕಿಸ್ತಾನದ ಅಧ್ಯಕ್ಷ ಮುಷರಫ್‌ರವರನ್ನು ಆಗ್ರಾಗೆ ಮಾತುಕತೆಗಾಗಿ ಆಹ್ವಾನಿಸಿದರು. ಜುಲೈ 2001ರಲ್ಲಿ ಜರುಗಿದ ಆಗ್ರಾ ಶೃಂಘ ಸಭೆಯು ಎಲ್ಲರ ಗಮನವನ್ನು ಸೆಳೆಯಿತು. ಮುಷರಫ್‌ರವರ ಕಾಶ್ಮೀರ ಸಮಸ್ಯೆಗೆ ಮೊದಲು ಪರಿಹಾರ ಕಂಡುಕೊಳ್ಳಬೇಕೆನ್ನುವ ಪಟ್ಟಿನಿಂದಾಗಿ ಮತ್ತು ಭಯೋತ್ಪಾದಕರಿಗೆ ಅವರು ಕೊಡುತ್ತಿದ್ದ ಪ್ರೋತ್ಸಾಹವನ್ನು ಸಮರ್ಥಿಸಿಕೊಂಡಿದ್ದರ ಫಲವಾಗಿ ಆಗ್ರಾ ಶೃಂಗಸಭೆ ವಿಫಲವಾಯಿತು.

ನಂತರದಲ್ಲಿ ಸ್ವಲ್ಪಕಾಲ ಭಾರತ ಪಾಕಿಸ್ತಾನ ನಡುವಿನ ಮಾತುಕತೆಗಳು ಕುಸಿದುಬಿದ್ದಿತು. ಜನವರಿ 2004ರಲ್ಲಿ ಸಾರ್ಕ್ ಶೃಂಗಸಭೆಯಲ್ಲಿ ಭಾಗವಹಿಸಿದ ವಾಜಪೇಯಿಯವರು ಪಾಕಿಸ್ತಾನದ ಅಧ್ಯಕ್ಷ ಜನರಲ್ ಮುಷರಫ್‌ರೊಡನೆ ದ್ವಿಪಕ್ಷೀಯ ಮಾತುಕತೆಯನ್ನು ನಡೆಸಿ, ಭಾರತ-ಪಾಕಿಸ್ತಾನ ನಡುವಿನ ರಾಯಭಾರತ್ವಕ್ಕೆ ಪುನಃ ಚಾಲನೆ ನೀಡಿದರು. ಅದರಿಂದಾಗಿ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ಪ್ರಾರಂಭವಾಯಿತು. ವಾಜಪೇಯಿಯವರು ಪಾಕಿಸ್ತಾನದೊಡನೆ ಸಂಬಂಧವನ್ನು ಸುಧಾರಿಸಿ ಕಾಶ್ಮೀರ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕೆನ್ನುವ ಮಹದಾಸೆ ಹೊಂದಿದ್ದರು ಎನ್ನುವುದು ಸ್ಪಷ್ಟವಾಗುತ್ತದೆ.

ವಾಜಪೇಯಿಯವರ ಸರ್ಕಾರದ ಅವಧಿಯಲ್ಲಿ ಭಾರತದ ಸಂಪರ್ಕ ಶ್ರೀಲಂಕ, ನೇಪಾಲ ಮತ್ತು ಬಾಂಗ್ಲದೇಶದೊಡನೆ ಕೂಡ ಸ್ನೇಹ ಸಹಕಾರ ಬೆಳೆಯಿತು. ಉನ್ನತ ಮಟ್ಟದಲ್ಲಿ ಪರಸ್ಪರ ಭೇಟಿ ವಿನಿಮಯಗಳಾಗಿದ್ದು ಗಮನಾರ್ಹ ಅಂಶವಾಗಿದ್ದೀತು.

ವಿಶೇಷವಾಗಿ ವಾಜಪೇಯಿಯವರ ಚೀನಾ ಭೇಟಿ ರಾಜಕೀಯ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಹಕಾರವನ್ನು ಬೆಳೆಸುವಲ್ಲಿ ಅತ್ಯಂತ ಫಲಪ್ರದವಾಯಿತು. ಮೊದಲ ಬಾರಿಗೆ ಭಾರತ ಚೀನಾ ನಡುವಣ ವ್ಯಾಪಾರ ಹೆಚ್ಚಿನ ಮಟ್ಟ ತಲುಪಿತು. ವಾಜಪೇಯಿಯವರು ತಾವು ಚೀನಾದಲ್ಲಿದ್ದಾಗ ಟಿಬೆಟ್‌ಗೆ ಸಂಬಂಧಿಸಿದಂತೆ ಚೀನಾ ದೇಶದ ಪರಮಾಧಿಕಾರವನ್ನು ತಾವು ಒಪ್ಪುವುದಾಗಿ ಹೇಳಿಕೆ ನೀಡಿದರ ಫಲವಾಗಿ ಚೀನಾ ಸಿಕ್ಕಿಂ ಅನ್ನು ಭಾರತದ ಅಂಗವೆಂದು ತನ್ನ ಮಾನ್ಯತೆಯನ್ನು ತದನಂತರದಲ್ಲಿ ಘೋಷಿಸಿತು.

ಭೂತಾನ್‌ನೊಡನೆ ಕೂಡ ಭಾರತದ ಸಂಬಂಧ ಸುಧಾರಿಸಿದ್ದರ ಒಂದು ಗಮನಾರ್ಹ ಅಂಶವೆಂದರೆ ಅಲ್ಲಿನ ದೊರೆಗಳು ಖುದ್ದಾಗಿ ಉಲ್ಫಾ ಉಗ್ರಗಾಮಿಗಳ ವಿರುದ್ಧ ಮಿಲಿಟರಿ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಡೆಸಿ ಭಾರತಕ್ಕೆ ಅನುಕೂಲಕರವಾದ ರೀತಿಯಲ್ಲಿ ನಡೆದುಕೊಂಡಿದ್ದು.

## 3.7 ಉಪಸಂಹಾರ

ಈ ಹಿಂದಿನ ಪುಟಗಳಲ್ಲಿ ಮೂಡಿಬಂದಿರುವಂತೆ, ಭಾರತವು ಜವಹರಲಾಲ್ ನೆಹರೂರವರ ಕಾಲದಿಂದಲೂ ನೆರೆರಾಷ್ಟ್ರಗಳೊಡನೆ ಸ್ನೇಹ ಮತ್ತು ಸೌಹಾರ್ದಪೂರ್ಣ ಸಂಬಂಧವನ್ನು ಕಲ್ಪಿಸುವ ರಾಯಭಾರತ್ವವನ್ನು ನಡೆಸಿಕೊಂಡು ಬಂದಿದೆ. ಶಾಂತಿ ಮತ್ತು ಯುದ್ಧ ರಹಿತವಾದ ಮೌಲ್ಯಾಧಾರಿತ ರಾಯಭಾರತ್ವಕ್ಕೆ ನೆಹರೂರವರು ಒತ್ತು ನೀಡಿದರು. ಶ್ರೀಮತಿ ಇಂದಿರಾಗಾಂಧಿಯವರು ಭಾರತದ ಮಿಲಿಟರಿ ಶಕ್ತಿಯನ್ನು ವೃದ್ಧಿಸಲು ಶ್ರಮಿಸಿದರೂ ಕೂಡ, ಅವರೂ ಸಹ ಪೂರ್ವ ಪಾಕಿಸ್ತಾನದ ಪೂರಕವಾಗಿ ಕಾರ್ಯಾಚರಣೆಯನ್ನು ನಡೆಸಿ, ಅದು ಒಂದು ನೂತನ ರಾಷ್ಟ್ರವಾಗಿ (ಬಾಂಗ್ಲಾ ದೇಶವಾಗಿ) ದಕ್ಷಿಣ ಏಷ್ಯಾದಲ್ಲಿ ಹುಟ್ಟಿಕೊಳ್ಳಲು ಕಾರಣೀಭೂತರಾದರು. ಇತ್ತೀಚೆಗೆ ವಾಜಪೇಯಿಯವರು ಭಾರತವನ್ನು ಅಣ್ವಸ್ತ್ರ ರಾಷ್ಟ್ರವನ್ನಾಗಿ ಮಾರ್ಪಡಿಸಿ, ಅಂತರರಾಷ್ಟ್ರೀಯ ಸಮುದಾಯವು, ವಿಶೇಷವಾಗಿ ಅಮೇರಿಕವು ಭಾರತದ ಶಕ್ತಿಯನ್ನು ಗುರುತಿಸುವಂತೆ ಮಾಡಿದರು. ಆದರೆ ಪಾಕಿಸ್ತಾನದೊಡನೆ ಅವರು ತಾವು ಅಧಿಕಾರದಲ್ಲಿದ್ದಾಗ, ಸಂಧಾನದ ಮೂಲಕ ಎರಡೂ ರಾಷ್ಟ್ರಗಳೂ ತನ್ನ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಒತ್ತು ನೀಡಿದರು. ಕಾಶ್ಮೀರ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವುದು ವಾಜಪೇಯಿಯವರ ರಾಯಭಾರತ್ವದ ಪ್ರಮುಖ ಗುರಿಯಾಗಿತ್ತು. ಆದರೆ ಅದು ಈಡೇರದೇ ಹೋದದ್ದು ನಿಜಕ್ಕೂ ದುರದೃಷ್ಟಕರ.

ಭಾರತದ ವಿದೇಶಾಂಗ ನೀತಿಯನ್ನು ಒಟ್ಟಾರೆ ಪರಿಶೀಲಿಸಿದಾಗ, ನೆರೆರಾಷ್ಟ್ರಗಳೊಡನೆ ಸಕಾರಾತ್ಮಕ ರಾಯಭಾರತ್ವವನ್ನು ಹೊಂದಿರುವುದು ಒಂದು ಗಮನಾರ್ಹ ಗುರಿಯಾಗಿ ಕಂಡು ಬರುತ್ತದೆ. ಭೌಗೋಳಿಕವಾಗಿ, ಆರ್ಥಿಕವಾಗಿ, ಭಾರತವು ದಕ್ಷಿಣ ಏಷ್ಯಾದಲ್ಲಿ ಬೃಹತ್ ರಾಷ್ಟ್ರವಾಗಿರುವುದು ಒಂದು ರೀತಿಯಲ್ಲಿ ಸಣ್ಣ ನೆರೆ ರಾಷ್ಟ್ರಗಳು ಭಾರತವನ್ನು ಹಲವೊಮ್ಮೆ ಅನುಮಾನದ ದೃಷ್ಟಿಯಿಂದ ನೋಡಿರುವುದು ಕಂಡುಬರುತ್ತದೆ. ಈ ವಾತಾವರಣದ ನಡುವೆಯೂ ಭಾರತದ ನಾಯಕರು ನೆರೆ ರಾಷ್ಟ್ರಗಳಲ್ಲಿ ನಮ್ಮ ಬಗ್ಗೆ ನಂಬಿಕೆ,

ವಿಶ್ವಾಸವನ್ನು ಮೂಡಿಸುವಂತಹ ರಾಯಭಾರತ್ವವನ್ನು ನಿಭಾಯಿಸಿದ್ದಾರೆ. ಈ ಹಿಂದೆ ತಿಳಿಸಿದಂತೆ, 1949ರಲ್ಲಿ ನೆಹರೂರವರು, ನಂತರದಲ್ಲಿ ಇಂದಿರಾಗಾಂಧಿಯವರು ಪಾಕಿಸ್ತಾನವನ್ನು ಯುದ್ಧರಹಿತ ಒಪ್ಪಂದಕ್ಕೆ ಸಹಿಹಾಕಲು ಸಲಹೆ ನೀಡಿದರು. ಆ ಸಲಹೆಯ ಮೂಲ ಉದ್ದೇಶವು ಭಾರತ ತನ್ನನ್ನು ಕಬಳಿಸುವ ಗುರಿಯನ್ನು ತಾಳಿದೆ ಎಂಬ ಪಾಕಿಸ್ತಾನದ ಅನುಮಾನವನ್ನು ದೂರಮಾಡುವುದಾಗಿತ್ತು. ಆದರೆ ಪಾಕಿಸ್ತಾನದ ನಾಯಕರು ಅದಕ್ಕೆ ಪೂರಕವಾಗಿ ಸ್ಪಂದಿಸಲಿಲ್ಲ.

ಇತ್ತೀಚೆಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರವೂ ಕೂಡ ನೆರೆ ರಾಷ್ಟ್ರಗಳೊಡನೆ ಸಂಬಂಧವನ್ನು ಹೆಚ್ಚಿಸುವ ರಾಯಭಾರತ್ವವನ್ನೇ ಹೊಂದಿದೆ. ವಿದೇಶಾಂಗ ಸಚಿವ ನಟವರ್‌ಸಿಂಗ್‌ರವರು ಮೊದಲು ಭೇಟಿ ನೀಡಿದ್ದು ನೆರೆ ರಾಷ್ಟ್ರವಾದ ನೇಪಾಳಕ್ಕೆ, ಚೀನಾ ಮತ್ತು ಪಾಕಿಸ್ತಾನದ ನಾಯಕರೊಡನೆ ಈಗಾಗಲೇ ಮಾತುಕತೆಗಳನ್ನು ನಡೆಸಿರುವ ವಿದೇಶಾಂಗ ಸಚಿವರು ಸಾರ್ಕ್‌ನ ಬೆಳವಣಿಗೆಗೆ ಪ್ರಾಧಾನ್ಯತೆಯನ್ನು ಕೊಡುವುದಾಗಿ ಘೋಷಿಸಿದ್ದಾರೆ.

## ನಿಮ್ಮ ಪ್ರಗತಿ ಪರಿಶೀಲನೆ - 3

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಪಾಕಿಸ್ತಾನಕ್ಕೆ ಸಂಬಂಧಿಸಿದಂತೆ ವಾಜಪೇಯಿಯವರ ನೆರೆ ರಾಷ್ಟ್ರಗಳೊಂದಿಗಿನ ರಾಯಭಾರತ್ವವನ್ನು ವಿಮರ್ಶಿಸಿ.**

..........................................................................................................................................................
..........................................................................................................................................................
..........................................................................................................................................................
..........................................................................................................................................................
..........................................................................................................................................................
..........................................................................................................................................................
..........................................................................................................................................................

**2. ವಾಜಪೇಯಿಯವರ ನೆರೆರಾಷ್ಟ್ರಗಳೊಂದಿಗಿನ ರಾಯಭಾರತ್ವದ ಇತಿಮಿತಿಗಳನ್ನು ಪರಿಶೀಲಿಸಿ.**

..........................................................................................................................................................
..........................................................................................................................................................
..........................................................................................................................................................
..........................................................................................................................................................
..........................................................................................................................................................
..........................................................................................................................................................
..........................................................................................................................................................

## 3.8 ಸಾರಾಂಶ

ನೆಹರೂರವರ ಕಾಲದಿಂದ ಇಂದಿನವರೆಗಿನ ಭಾರತದ ನೆರೆರಾಷ್ಟ್ರಗಳೊಂದಿಗಿನ ರಾಯಭಾರತ್ವವನ್ನು ಈ ಪಾಠದಲ್ಲಿ ವಿಮರ್ಶನಾತ್ಮಕವಾಗಿ ತಿಳಿಸಲಾಗಿದೆ. ನೆಹರೂ, ಇಂದಿರಾಗಾಂಧಿ, ರಾಜೀವ್‌ಗಾಂಧಿ, ಜನತಾ ಸರ್ಕಾರ, ಗುಜ್ರಾಲ್ ಸರ್ಕಾರ ಮತ್ತು

ವಾಜಪೇಯಿ ಸರ್ಕಾರಗಳು ನೆರೆರಾಷ್ಟ್ರಗಳಿಗೆ ಸಂಬಂಧಿಸಿದಂತೆ ಮಾಡಿದ ಪ್ರಸ್ತಾಪಗಳನ್ನು ವಿವರಿಸಲಾಗಿದೆ. ಒಟ್ಟಾರೆ, ಭಾರತವು ನೆರೆರಾಷ್ಟ್ರಗಳೊಂದಿಗೆ ಯಾವ ರೀತಿಯಲ್ಲಿ ತನ್ನ ರಾಯಭಾರತ್ವವನ್ನು ಮುಂದುವರೆಸಿಕೊಂಡು ಬಂದಿದೆ ಎನ್ನುವುದರ ಬಗ್ಗೆ ಈ ಪಾಠದಲ್ಲಿ ಮಾಹಿತಿ ನೀಡಲಾಗಿದೆ.

## 3.9 ಕಠಿಣ ಪದಗಳು

| | | |
|---|---|---|
| ಪಂಚಶೀಲ | - | ಚೀನಾದೊಡನೆ ಭಾರತವು ಶಾಂತಿ ಮತ್ತು ಸೌಹಾರ್ದತೆಯನ್ನು ಬೆಳೆಸಿಕೊಳ್ಳಲು ಮಾಡಿಕೊಂಡ ಒಪ್ಪಂದ. |
| ಸಿಮ್ಲಾ ಒಪ್ಪಂದ | - | ಭಾರತವು ಪಾಕಿಸ್ತಾನದೊಡನೆ 1972ರಲ್ಲಿ ಮಾಡಿಕೊಂಡ ಪ್ರಮುಖ ಒಪ್ಪಂದ-ಪರಸ್ಪರ ಶಾಂತಿಯುತ ಸಂಧಾನಕ್ಕೆ ಈ ಒಪ್ಪಂದ ಒತ್ತುಕೊಟ್ಟಿತು. |
| ಲಾಹೊರ್ ಘೋಷಣೆ | - | 2001 ರಲ್ಲಿ ವಾಜಪೇಯಿಯವರ ಪಾಕಿಸ್ತಾನದ ಪ್ರಧಾನಿ ನವಾಜ್ ಷರೀಫ್‌ರೊಡನೆ ಶಾಂತಿ ಮತ್ತು ಸಂಧಾನಕ್ಕೆ ಮಾಡಿಕೊಂಡ ಒಪ್ಪಂದ. |
| ಗುಜ್ರಾಲ್ ತತ್ವ | - | ಪಾಕಿಸ್ತಾನವನ್ನು ಹೊರತುಪಡಿಸಿ, ದಕ್ಷಿಣ ಏಷ್ಯಾದ ಸಣ್ಣ ರಾಷ್ಟ್ರಗಳಿಂದ ಏನನ್ನು ಪ್ರತಿಯಾಗಿ ನಿರೀಕ್ಷಿಸದೆ, ಭಾರತವು ಅವುಗಳಿಗೆ ನೀಡಿದ ವಿಶೇಷ ಸವಲತ್ತುಗಳನ್ನಾಧರಿಸಿದ ತತ್ವ. |

## 3.9 ಕೆಲವು ಉಪಯುಕ್ತ ಗ್ರಂಥಗಳು


ವಿ.ಪಿ. ದತ್ - ಇಂಡಿಯನ್ ಫಾರಿನ್ ಪಾಲಿಸಿ

ಕೆ.ಪಿ.ಮಿಶ್ರ - ಸ್ಟಡೀಸ್ ಇನ್ ಇಂಡಿಯಾಸ್ ಫಾರಿನ್ ಪಾಲಿಸಿ

ಹರೀಶ್ ಕಪೂರ್ - ಇಂಡಿಯಾಸ್ ಫಾರಿನ್ ಪಾಲಿಸಿ

ಸುರ್‌ಜೀರ್ ಮಾನ್‌ಸಿಂಗ್ - ಇಂಡಿಯಾಸ್ ಸರ್ಚ್ ಫಾರ್ ಪವರ್


## 3.10 ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> -1

1. ವಿಭಾಗ 3.2 ನೋಡಿ
2. ವಿಭಾಗ 3.3 ನೋಡಿ

<u>ನಿಮ್ಮ ಪ್ರಗತಿ ಪರಿಶೀಲನೆ</u> -2

1. ವಿಭಾಗ 3.4 ನೋಡಿ
2. ವಿಭಾಗ 3.5 ನೋಡಿ

<u>ನಿಮ್ಮ ಪ್ರಗತಿ ಪರಿಶೀಲನೆ</u> -3

1. ವಿಭಾಗ 3.6 ನೋಡಿ
2. ವಿಭಾಗ 3.7 ನೋಡಿ

## ಘಟಕ 4 ದಕ್ಷಿಣ ಏಷ್ಯಾದ ಪ್ರಭಾವಿ ಶಕ್ತಿರಾಷ್ಟ್ರವಾಗಿ ಭಾರತ

**ರಚನೆ**

4.0 ಉದ್ದೇಶಗಳು

4.1 ಪ್ರಸ್ತಾವನೆ

4.2 ನೆಹರೂರವರ ಕಾಲದಲ್ಲಿ ಪ್ರಭಾವಿ ಶಕ್ತಿ ರಾಷ್ಟ್ರವಾಗಿ ಭಾರತ

4.3 ಇಂದಿರಾಗಾಂಧಿಯವರ ಕಾಲದಲ್ಲಿ ಭಾರತದ ಪ್ರಭಾವ ಮತ್ತು ಶಕ್ತಿ

4.4 ಭಾರತವನ್ನು ಪ್ರಭಾವೀಶಕ್ತಿ ರಾಷ್ಟ್ರವನ್ನಾಗಿಸುವಲ್ಲಿ ರಾಜೀವ್ ಗಾಂಧಿಯವರ ಕೊಡುಗೆ

4.5 ಶೀತಲ ಸಮರೋತ್ತರದ ಕಾಲದಲ್ಲಿ ಭಾರತದ ಆರ್ಥಿಕ ರಾಯಭಾರತ್ವ ಮತ್ತು ಶಕ್ತಿ

4.6 ವಾಜಪೇಯಿಯವರ ಕಾಲದಲ್ಲಿ ಭಾರತದ ಶಕ್ತಿ ಮತ್ತು ಪ್ರಭಾವ

4.7 ಉಪಸಂಹಾರ

4.8 ಸಾರಾಂಶ

4.9 ಕಠಿಣ ಪದಗಳು

4.10 ಕೆಲವು ಉಪಯುಕ್ತ ಗ್ರಂಥಗಳು

4.11 ಪ್ರಗತಿ ಪರಿಶೀಲನೆಗೆ ಉತ್ತರಗಳು

## 4.0 ಉದ್ದೇಶಗಳು

ಈ ಪಾಠವನ್ನು ಓದುವುದರಿಂದ ನಿಮಗೆ, ಈ ಕೆಳಕಂಡ ವಿಷಯಗಳು ಅರ್ಥವಾಗುತ್ತದೆ.

* ಭಾರತದ ಭೌಗೋಳಿಕ ರಚನೆಯನ್ನು ಗಮನಿಸಿ, ನೆಹರೂರವರು ಯಾವ ರೀತಿಯಲ್ಲಿ ಮೌಲ್ಯಗಳನ್ನು ಪ್ರತಿಪಾದಿಸುವುದರ ಜೊತೆಯಲ್ಲಿಯೇ ಭಾರತವು ಪ್ರಭಾವಿ ಶಕ್ತಿಯಾಗುವುದರಲ್ಲಿ ಹಾಕಿಕೊಂಡ ಕಾರ್ಯಕ್ರಮಗಳು.
* ಯುದ್ಧರಹಿತವಾದ ವಾತಾವರಣದ ಸೃಷ್ಟಿಗೆ ನೆಹರೂರವರು ಮಾಡಿದ ಪ್ರಯತ್ನಗಳು
* ಇಂದಿರಾಗಾಂಧಿಯವರು ಭಾರತದ ಮಿಲಿಟರಿ ಶಕ್ತಿ ಮತ್ತು ಪ್ರಭಾವವನ್ನು ಹೆಚ್ಚಿಸಲು ಹಾಕಿಕೊಂಡ ನೀತಿಗಳು
* 1971 ರ ನಂತರದಲ್ಲಿ ವಿಶ್ವಸಮುದಾಯವು ಯಾವ ರೀತಿಯಲ್ಲಿ ಭಾರತವನ್ನು ದಕ್ಷಿಣ ಏಷ್ಯಾದಲ್ಲಿ ಪ್ರಭಾವಶಾಲೀ ರಾಷ್ಟ್ರವನ್ನಾಗಿ ಪರಿಗಣಿಸಿತು ಎನ್ನುವುದು.
* 70ರ ಮತ್ತು 80ರ ದಶಕದಲ್ಲಾದ ತಂತ್ರಜ್ಞಾನದ ಬೆಳವಣಿಗೆ ಮತ್ತು ಭಾರತದ ಶಕ್ತಿಯ ಮೇಲೆ ಅದರ ಪ್ರಭಾವ
* 90ರ ದಶಕದಿಂದ ಹೆಚ್ಚುತ್ತಿರುವ ಭಾರತದ ಗಣಕಯಂತ್ರ ಅಣ್ವಸ್ತ್ರ ರಾಷ್ಟ್ರವನ್ನಾಗಿಸಿದ್ದು ಭಾರತದ ಶಕ್ತಿ ಮತ್ತು ಪ್ರಧಾನ್ಯತೆಯ ಮೇಲೆ ಬೀರಿದ ಪ್ರಭಾವ.
* ವಾಜಪೇಯಿ ಸರ್ಕಾರವು 1998ರಲ್ಲಿ ಭಾರತವನ್ನು ಅಣ್ವಸ್ತ್ರ ರಾಷ್ಟ್ರವನ್ನಾಗಿಸಿದ್ದು ಭಾರತದ ಶಕ್ತಿ ಮತ್ತು ಪ್ರಭಾವದ ಮೇಲೆ ಅದರಿಂದಾದ ಪರಿಣಾಮ.

## 4.1 ಪ್ರಸ್ತಾವನೆ

ಭಾರತದ ಮೊದಲ ಪ್ರಧಾನಿ ಜವಹರಲಾಲ್ ನೆಹರೂರವರ ಭಾಷಣಗಳು ಮತ್ತು ತಜ್ಞರ ವಿಶ್ಲೇಷಣೆಗಳನ್ನು ಗಮನಿಸಿದಾಗ ಭಾರತದ ವಿದೇಶಾಂಗ ನೀತಿಯ ಎರಡು ಪ್ರಮುಖ ಅಂಗಗಳು ಮತ್ತು ಗುರಿಗಳು ಗೋಚರವಾಗುತ್ತದೆ. 1. ಮೊದಲನೆಯದಾಗಿ ಮೌಲ್ಯ ಮತ್ತು ಶಾಂತಿಯುತ ಮಾರ್ಗಕ್ಕೆ ಭಾರತವು ನೀಡಿದ ಮಹತ್ವವನ್ನು ಜವಹರಲಾಲ್ ನೆಹರೂರವರು ಒತ್ತಿ ಹೇಳಿದ್ದು, 2. ಎರಡನೆಯದಾಗಿ, ಬಹುಶಃ ಮೊದಲನೆಯ ಗುರಿಯಿಂದ ಭಿನ್ನವಾಗಿ ನೆಹರೂರವರೇ ಭಾರತವನ್ನು ಒಂದು ಬೃಹತ್ ರಾಷ್ಟ್ರವನ್ನಾಗಿ ಮಾಡಲು ನೀಡಿದ ಹೇಳಿಕೆಗಳು ಮತ್ತು ಹಾಕಿಕೊಂಡ ಕಾರ್ಯಕ್ರಮಗಳು. ನೆಹರೂರವರ ಕೆಲವು ಹೇಳಿಕೆಗಳನ್ನು ಹಾಗೂ ಭಾಷಣಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

## 4.2 ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಶಕ್ತಿಯುತ ಮತ್ತು ಪ್ರಭಾವಶಾಲೀ ರಾಷ್ಟ್ರವನ್ನಾಗಿಸುವ ನೆಹರೂ ಕಾಲದ ವಿದೇಶಾಂಗ ನೀತಿ ಮತ್ತು ತಂತ್ರಗಳು

ಭಾರತದ ಭೌಗೋಳಿಕ ಸ್ಥಾನ ಮತ್ತು ರಚನೆಯು ಭಾರತದ ಮೇಲೆ ಕೆಲವು ಉಪಯುಕ್ತತೆಗಳನ್ನು ಕೊಟ್ಟವು ಎನ್ನುವುದನ್ನು ನೆಹರೂರವರು ಈ ಕೆಳಕಂಡಂತೆ ಬಣ್ಣಿಸಿದರು.

"ಏಷ್ಯಾದಲ್ಲಿ ಭಾರತವು ಬಹಳ ಕುತೂಹಲಕಾರಿ ಮತ್ತು ಪರಿಣಾಮಕಾರೀ ರಾಷ್ಟ್ರವಾಗಿ ಬೆಳೆದಿರಲು ಅದರ ಭೌಗೋಳಿಕ ಸ್ಥಾನ ಮತ್ತು ಕೆಲವು ಅನ್ಯ ಅಂಶಗಳು ಮಹತ್ವದ ಪಾತ್ರ ಬೀರಿವೆ. ಏಷ್ಯಾದಲ್ಲಿ ಯಾವುದೇ ಸಮಸ್ಯೆಯನ್ನು ತೆಗೆದುಕೊಂಡರೂ,

ಭಾರತವನ್ನು ಗಮನಿಸಬೇಕಾಗುತ್ತದೆ. ಭಾರತದ ಭೌಗೋಲಿಕ ವಿಸ್ತೀರ್ಣ ಹೇಗಿದೆಯೆಂದರೆ, ಯಾವುದೇ ಒಂದು ಅಥವಾ ಗುಂಪುಗಳ ರಾಷ್ಟ್ರಗಳನ್ನು ಏಷ್ಯಾ ಖಂಡದಲ್ಲಿ ಗಮನಿಸಿದಾಗ, ಭಾರತದ ಚರಿತ್ರೆ, ಪರಂಪರೆಗಳನ್ನು ಮರೆಯುವಂತಿಲ್ಲ. ರಕ್ಷಣೆ, ಆರ್ಥಿಕ ಬೆಳವಣಿಗೆ, ವ್ಯಾಪಾರ ಹಾಗೂ ಯಾವುದೇ ವಿಷಯವನ್ನು ಪರಿಗಣಿಸಿದರೂ ಭಾರತವನ್ನು ಏಷ್ಯಾದಲ್ಲಿ ಕಡೆಗಣಿಸುವಂತಿಲ್ಲ. (ಜವಹರಲಾಲ್ ನೆಹರು).

ಬೇರೊಂದು ಸಮಯದಲ್ಲಿ ನೆಹರೂರವರು ಈ ಕೆಳಕಂಡಂತೆ ಹೇಳಿದರು. "ಏಷ್ಯಾ ಮತ್ತು ಇಡೀ ವಿಶ್ವದಲ್ಲಿ ಯುದ್ಧವನ್ನು ತಡೆಗಟ್ಟಲು ಭಾರತ ಬಹಳ ಮಹತ್ತರವಾದ ಪಾತ್ರವನ್ನು ನಿಭಾಯಿಸಬಲ್ಲದು. ಅದರಿಂದಾಗೆಯೇ ನಾವು ಅಂತರರಾಷ್ಟ್ರೀಯ ಮಟ್ಟದಲ್ಲಿ ಯಾವುದೇ ಶಕ್ತಿ ಬಣಕ್ಕೂ ಸೇರದೆ, ಯಾವುದೇ ರಾಷ್ಟ್ರದ ಅನುಯಾಯಿ ರಾಷ್ಟ್ರವಾಗದೇ, ಸ್ವತಂತ್ರವಾದ ವಿದೇಶಾಂಗ ನೀತಿಯನ್ನು ನಿರೂಪಿಸಿಕೊಂಡಿದ್ದೇವೆ".

ಈ ಮೇಲಿನ ಹೇಳಿಕೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ತಿಳಿಯುವುದೇನೆಂದರೆ ವಿಶ್ವ ರಾಜಕಾರಣದಲ್ಲಿ ಪ್ರಬಲವಾದ ಪಾತ್ರವನ್ನು ನಿಭಾಯಿಸಲೆಂದೇಭಾರತ ಅಲಿಪ್ತ ನೀತಿಯನ್ನು ತನ್ನ ವಿದೇಶಾಂಗ ನೀತಿಯಾಗಿ ಅಳವಡಿಸಿಕೊಂಡಿತು. ಭಾರತದ ಅಲಿಪ್ತ ನೀತಿಯ ಕಾರಣದಿಂದಲೇ ಭಾರತಕ್ಕೆ ವಿಶ್ವಸಂಸ್ಥೆಯು ಕೊರಿಯಾ ಯುದ್ಧದ ನಂತರ ಅಲ್ಲಿನ ಶಾಂತಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸತು. ಹಾಗೆಯೇ ಇಂಡೋ ಚೀನಾ ಪ್ರದೇಶದಲ್ಲೂ ಕೂಡ 50ರ ದಶಕದಲ್ಲಿ ಭಾರತ ತನ್ನ ಮಿಲಿಟರಿ ಶಕ್ತಿಗೆ ಮೀರಿದ ಪಾತ್ರವನ್ನು ನಿಭಾಯಿಸಲು ಸಾಧ್ಯವಾಯಿತು.

ದಕ್ಷಿಣ ಏಷ್ಯಾಕ್ಕೆ ಸಂಬಂಧಿಸಿದಂತೆ ಭಾರತವು ತನ್ನದೇ ಆದ ರೀತಿಯಲ್ಲಿ ಬೃಹತ್ ರಾಷ್ಟ್ರದ ಪಾತ್ರವನ್ನು ನಿಭಾಯಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿತು. ಪಾಕಿಸ್ತಾನಕ್ಕೆ ಯುದ್ಧ ನಿಷೇದ ಒಪ್ಪಂದಕ್ಕೆ ಸಹಿ ಹಾಕಲು ಕರೆಕೊಡುವುದರ ಮೂಲಕ ಭಾರತ - ಪಾಕಿಸ್ತಾನದ ನಡುವೆ ಭವಿಷ್ಯದಲ್ಲಿ ಜರುಗಬಹುದಾದ ಯುದ್ಧವನ್ನು ತಪ್ಪಿಸಲು ಪ್ರಯತ್ನಮಾಡಿತು. ನೆಹರೂ ಮತ್ತು ಇಂದಿರಾಗಾಂಧಿಯವರು ಈ ರೀತಿಯ ಸಲಹೆಗಳನ್ನು ಪಾಕಿಸ್ತಾನಕ್ಕೆ ಆಗಿಂದಾಗ ಮಾಡುತ್ತಲೇ ಬಂದರು. ಅವರ ದೃಷ್ಟಿಯಲ್ಲಿ ಪಾಕಿಸ್ತಾನವನ್ನು ಯುದ್ಧದ ಹಾದಿಯಿಂದ ಹೊರತಂದರೆ ಭಾರತ ತನ್ನ ದೃಷ್ಟಿಯನ್ನು ದಕ್ಷಿಣ ಏಷ್ಯಾ ಪ್ರದೇಶದ ಬೇರೆ ಸಮಸ್ಯೆಗಳತ್ತ ಹರಿಸಿ ಮಹತ್ತರವಾದ ಪಾತ್ರವನ್ನು ನಿಭಾಯಿಸುವುದು ಸಾಧ್ಯ ಎಂದಾಗಿತ್ತು. ಅಲ್ಲದೆ ಕಾಶ್ಮೀರ ಸಮಸ್ಯೆಯನ್ನು ಯುದ್ಧದ ಚೌಕಟ್ಟಿನಿಂದ ಹೊರತಂದು ಶಾಂತಿಯುತವಾಗಿ ಬಗೆಹರಿಸಲು ಸಾಧ್ಯ ಎನ್ನುವುದೂ ಕೂಡ ನಮ್ಮ ನಾಯಕರ ನಂಬಿಕೆಯಾಗಿತ್ತು. ಆದರೆ ಪಾಕಿಸ್ತಾನವು ವಿಷಯವನ್ನು ಬೇರೆ ದೃಷ್ಟಿಯಲ್ಲಿ ನೋಡಿ, ಕಾಶ್ಮೀರವನ್ನು ತನ್ನದಾಗಿಸಿಕೊಳ್ಳಲು ಯುದ್ಧವನ್ನು ಕೂಡ ತನ್ನ ವಿದೇಶಾಂಗ ನೀತಿಯ ಅಂಗವಾಗಿ ಉಳಿಸಿಕೊಳ್ಳಲು ನಿರ್ಧರಿಸಿತು.

ಜವಹರಲಾಲ್ ನೆಹರೂರವರ ಮತ್ತೊಂದು ಗುರಿಯು ಪಾಕಿಸ್ತಾನವು ಅಮೇರಿಕಾ ರಾಷ್ಟ್ರದೊಡನೆ ಮಿಲಿಟರಿ ಒಪ್ಪಂದವನ್ನು ಮಾಡಿಕೊಳ್ಳುವುದನ್ನು ತಪ್ಪಿಸುವುದಾಗಿತ್ತು. ಇದರಿಂದ ಶೀತಲ ಸಮರವನ್ನು ಉಪಖಂಡದಲ್ಲಿ ಪಾರುಮಾಡಬಹುದು ಎನ್ನುವುದು ಕೂಡ ಅವರ ಗುರಿಯಾಗಿತ್ತು. ಪಾಕಿಸ್ತಾನಕ್ಕೆ ಅಮೇರಿಕಾದಿಂದ ಮಿಲಿಟರಿ ನೆರವು ಸಿಗದಹಾಗೆ ಮಾಡಿ, ಅಮೇರಿಕಾವನ್ನು ಉಪಖಂಡದ ಸಮಸ್ಯೆಗಳಿಂದ ಹೊರಗಿಟ್ಟರೆ ಪಾಕಿಸ್ತಾನವನ್ನು ಭಾರತ ತನಗೆ ಸೂಕ್ತವಾದ ರೀತಿಯಲ್ಲಿ ನಿಭಾಯಿಸಬಹುದು, ನಿಯಂತ್ರಿಸಬಹುದು ಎನ್ನುವುದು ನೆಹರೂರವರ ಮೂಲ ಭಾವನೆಯಾಗಿತ್ತು. ಹೀಗೆ ಮಾಡುವುದರಿಂದ ಭಾರತ ಉಪಖಂಡದಲ್ಲಿ ತನ್ನ ಮೇಲುಗೈಯನ್ನು ಸ್ಥಾಪಿಸಲು, ಹಾಗೂ ಅದನ್ನು ಮುಂದುವರೆಸಿಕೊಂಡು ಹೋಗಲು ಸಾಧ್ಯ ಎನ್ನುವುದು ನೆಹರೂರವರ ನಂಬಿಕೆಯಾಗಿತ್ತು. ಆದರೆ ಪಾಕಿಸ್ತಾನವು ಭಾರತದ ಕರೆಗೆ, ಮತ್ತು ನಿರೀಕ್ಷಣೆಗೆ ಸ್ಪಂದಿಸದೆ ತನ್ನ ವಿದೇಶಾಂಗ ನೀತಿಯ ಗುರಿಯನ್ನು ಸಾಧಿಸಲು ಅಮೇರಿಕಾದೊಡನೆ ಶಸ್ತ್ರಾಸ್ತ್ರಗಳ ಸರಬರಾಜು ಪ್ರಾರಂಭವಾಯಿತು. ಪಾಕಿಸ್ತಾನದ ಗುರಿಯೂ ಕೂಡ, ಅಮೇರಿಕಾದ ಮಿಲಿಟರಿ ನೆರವು ಮತ್ತು ಸಂಪರ್ಕದಿಂದ ಭಾರತದೊಡನೆ ಮಿಲಿಟರಿ ಸಮಾನತೆಯನ್ನು ಗಳಿಸುವುದಾಗಿತ್ತು.

ಭಾರತದ ವಿದೇಶಾಂಗ ನೀತಿಯನ್ನು ವಿಶ್ಲೇಷಣೆ ಮಾಡಿರುವ ಹಲವಾರು ತಜ್ಞರು ದಕ್ಷಿಣ ಏಷ್ಯಾದಲ್ಲಿ ತನ್ನ ಪ್ರಾಧಾನ್ಯತೆಯನ್ನು ಸಾಧಿಸಲು ಪಾಕಿಸ್ತಾನವನ್ನು ನಿಯಂತ್ರಣದಲ್ಲಿಡುವುದು ಭಾರತದ ಗುರಿಯಾಗಿತ್ತೆಂದು ತಿಳಿಸಿದ್ದಾರೆ. ಪಾಕಿಸ್ತಾನವು ಇದಕ್ಕೆ ವಿರೋಧವಾಗಿ ನಡೆದುಕೊಂಡಿದ್ದರಿಂದ ಭಾರತವು ಭವಿಷ್ಯದಲ್ಲಿ ಪಾಕಿಸ್ತಾನದಿಂದ ಉಂಟಾಗಬಹುದಾಗಿದ್ದ ಸಮಸ್ಯೆಗಳನ್ನು ಪ್ರಾರಂಭದಲ್ಲಿಯೇ ತಪ್ಪಿಸಲಾಗಲಿಲ್ಲ ಎನ್ನುವುದು ಕೂಡ ಅವರ ಅಭಿಪ್ರಾಯ. ಪಾಕಿಸ್ತಾನದ ಪಾಶ್ಚಾತ್ಯ ನೀತಿಯಿಂದ ಉಂಟಾಗಬಹುದಾದ ದುಷ್ಪರಿಣಾಮಗಳನ್ನು ತಡೆಯುವುದಕ್ಕೆಂದು ಭಾರತವು 1956 ರಿಂದಲೇ ಸೋವಿಯತ್ ಒಕ್ಕೂಟದೊಡನೆ ವಿಶೇಷ ಸಂಬಂಧವನ್ನು ಕಲ್ಪಿಸಿಕೊಂಡಿತು. ಇದು ಗಮನಾರ್ಹ ಅಂಶ.

ಚೀನಾದೊಡನೆ ಭಾರತವು ಶಾಂತಿಯುತ ಸಹಬಾಳ್ವೆಯನ್ನು ಹೊಂದಿರುವ ದೃಷ್ಟಿಯಿಂದ ಮತ್ತು ಆ ರಾಷ್ಟ್ರದೊಡನೆ ಭವಿಷ್ಯದಲ್ಲಿ ಉಂಟಾಗಬಹುದಾದ ಶಕ್ತಿ ಸಮರವನ್ನು ತಡೆಗಟ್ಟಲು ನೆಹರೂರವರು ಪಂಚಶೀಲ ಒಪ್ಪಂದಕ್ಕೆ 1954 ರಲ್ಲಿ ಸಹಿ ಹಾಕಿದರು.

ಭಾರತವು ಚೀನಾದೊಡನೆ ಮಿಲಿಟರಿ ರಂಗದಲ್ಲಿ ಸಮಾನತೆಯನ್ನು ಸಾಧಿಸುವುದು ಅಂದಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲದ್ದರಿಂದ ಹಾಗೂ ಭವಿಷ್ಯದಲ್ಲಿ ಭಾರತ ಮತ್ತು ಚೀನಾದ ನಡುವೆ ಏಷ್ಯಾ ಖಂಡದಲ್ಲಿ ಶಕ್ತಿ ಸಮರದ ಸಾಧ್ಯತೆಗಳಿದ್ದರಿಂದ, ನೆಹರೂರವರು ಚೀನಾ ದೇಶವನ್ನು ಪಂಚಶೀಲ ಒಪ್ಪಂದದ ಮೂಲಕ ನಿಯಂತ್ರಣದಲ್ಲಿಟ್ಟು, ಪರಸ್ಪರ ಎರಡೂ ರಾಷ್ಟ್ರಗಳ ನಡುವೆ ಶಾಂತಿ ಮತ್ತು ಸೌಹಾರ್ದತೆ ಬೆಳೆಯುವಂತೆ ಮಾಡಲು ಪಂಚಶೀಲ ಒಪ್ಪಂದಕ್ಕೆ ಸಹಿ ಹಾಕಿ ಭಾರತ ಮತ್ತು ಚೀನಾ ರಾಷ್ಟ್ರಗಳು ಬದ್ಧರಾಗುವಂತೆ ಮಾಡಿದರು. ಪಂಚಶೀಲ ಒಪ್ಪಂದವು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಮಸ್ಯೆಗಳಿಗೆ ಶಾಂತಿಯುತವಾಗಿ ಪರಿಹಾರಗಳನ್ನು ಸಾಧಿಸಬೇಕೆನ್ನುವ ನೆಹರೂರವರ ನೀತಿಗೆ ಪೂರಕವಾಗಿತ್ತು ಕೂಡ. ಈ ಒಪ್ಪಂದದ ಮೂಲಕ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂದೂ ಕೂಡ ಘೋಷಿಸಿದವು. ಒಟ್ಟಾರೆ, ಚೀನಾದೊಡನೆ ಶಾಂತಿಯನ್ನು ಸಾಧಿಸುವುದು ಮತ್ತು ಭಾರತ - ಚೀನಾದೊಡನೆ ತಲೆದೋರುವಂತಿದ್ದ ಸಮರವನ್ನು ನಿಯಂತ್ರಣದಲ್ಲಿಡುವುದು ನೆಹರೂರವರ ನೀತಿಯ ಮೂಲ ಗುರಿಯಾಗಿತ್ತು. 1959ರ ನಂತರದಲ್ಲಿ ಚೀನಾ ರಾಷ್ಟ್ರವು ಪಂಚಶೀಲ ಒಪ್ಪಂದಕ್ಕೆ ಚ್ಯುತಿ ಬರುವ ರೀತಿಯಲ್ಲಿ ನಡೆದುಕೊಂಡು, 1962ರಲ್ಲಿ ಭಾರತದ ಗಡಿಮೇಲೆ ಆಕ್ರಮಣವನ್ನೇ ಮಾಡಿತು. ಈ ಘಟನೆಯಿಂದಾಗಿ ಭಾರತಕ್ಕೆ, ವಿಶೇಷವಾಗಿ ನೆಹರೂರವರಿಗೆ, ಅತಿದೊಡ್ಡ ಆಘಾತವೇ ಆಯಿತು.

ನೆಹರೂರವರು ಸಂಸತ್ತಿನಲ್ಲಿ ಮತ್ತು ಬೇರೆ ಬೇರೆ ಸಭೆಗಳಲ್ಲಿ ನೀಡಿದ ಕೆಲವು ಹೇಳಿಕೆಗಳನ್ನು ಗಮನಿಸಿದಾಗ ಗಮನಾರ್ಹವಾಗಿ ಕಂಡುಬರುವ ಇನ್ನೊಂದು ಅಂಶವೆಂದರೆ ಭಾರತದ ಶಕ್ತಿ ಮತ್ತು ಸ್ಥಾನವನ್ನು ದಕ್ಷಿಣ ಏಷ್ಯಾದಲ್ಲಿ ಹೆಚ್ಚಿಸಲು ಚೀನಾ ಮತ್ತು ಪಾಕಿಸ್ತಾನದೊಡನೆ ಮಿಲಿಟರಿ ಸಂಬಂಧ ಬೆಳೆಯದಿರುವಂತೆ ಮಾಡುವುದು. ಹಲವು ವಿಶ್ಲೇಷಕರ ಪ್ರಕಾರ ನೆಹರೂರವರು ಚೀನಾ ಮತ್ತು ಪಾಕಿಸ್ತಾನದ ನಡುವೆ ಮೈತ್ರಿ ಮತ್ತು ಮಿಲಿಟರಿ ಸಂಬಂಧವು ಬೆಳೆದರೆ ಅದರಿಂದಾಗಿ ಭಾರತಕ್ಕೆ ಧಕ್ಕೆಯುಂಟಾಗುವ ಸಂಬಂಧವಿದ್ದು, ಆ ಕಾರಣದಿಂದಲೂ ನೆಹರೂರವರು ಚೀನಾದೊಡನೆ ಪಂಚಶೀಲ ಒಪ್ಪಂದಕ್ಕೆ ಸಹಿ ಹಾಕಿದರು ಎನ್ನುವುದು. ಬಹುಶಃ ಈ ರೀತಿಯ ವಿಶ್ಲೇಷಣೆಯಲ್ಲಿ ಸತ್ಯಾಂಶವಿದೆ ಎನ್ನಿಸುತ್ತದೆ. ಮಿಲಿಟರಿ ದೃಷ್ಟಿಯಲ್ಲಿ ಬಲಹೀನವಾಗಿದ್ದ ಭಾರತವು ಚೀನಾ ಮತ್ತು ಪಾಕಿಸ್ತಾನ ಎರಡೂ ರಾಷ್ಟ್ರಗಳಿಂದ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಮಿಲಿಟರಿ ಪೈಪೋಟಿಯನ್ನು ಎದುರಿಸಲು ಸಾಧ್ಯವಾಗಿರಲಿಲ್ಲ. ಆ ಕಾರಣದಿಂದಲೂ ಪಂಚಶೀಲ ಒಪ್ಪಂದಕ್ಕೆ ಭಾರತ ಚೀನಾದೊಡನೆ ಸಹಿ ಹಾಕಿರಬಹುದು. ಚೀನಾ ಮತ್ತು ಪಾಕಿಸ್ತಾನದ ನಡುವೆ ಮಿಲಿಟರಿ ಸಂಬಂಧವು ಬೆಳೆಯುವುದನ್ನು ನೆಹರೂರವರು ತಾವು ಅಧಿಕಾರದಲ್ಲಿದ್ದಾಗ ತಪ್ಪಿಸುವಲ್ಲಿ ಯಶಸ್ಸು ಸಾಧಿಸಿದರು ಎಂದರೆ ತಪ್ಪಾಗಲಾರದು. ಚೀನಾ ಮತ್ತು ಪಾಕಿಸ್ತಾನದ ನಡುವೆ ಮಿಲಿಟರಿ ಸಂಬಂಧವು 1963ರ ನಂತರದಲ್ಲಿಯೇ ಪ್ರಾರಂಭವಾಯಿತು.

ಭಾರತದ ಸಣ್ಣ ನೆರೆರಾಷ್ಟ್ರವಾದ ನೇಪಾಳದ ಬಗ್ಗೆ ನೆಹರೂರವರ ನಿಲುವು ಸ್ಪಷ್ಟವಾಗಿತ್ತು. ಅವರ ಆ ನಿಲುವು ಭಾರತದ ಭೌಗೋಳಿಕ ಸ್ಥಾನವನ್ನು ಆಧರಿಸಿ ಎರಡು ಅಂಶಗಳನ್ನು ಅವಲಂಬಿಸಿತ್ತು. 1. ನೇಪಾಳದ ರಾಜರೊಂದಿಗೆ ಎಲ್ಲಾ ರೀತಿಯಲ್ಲಿಯೂ

ವಿಶೇಷವಾದ ಸಂಬಂಧವನ್ನು ಬೆಳೆಸಿಕೊಳ್ಳುವುದು. 2. ಬೇರೆ ಯಾವ ರಾಷ್ಟ್ರವೂ ನೇಪಾಳದ ಆಂತರಿಕ ವಿಷಯಗಳಲ್ಲಿ ಭಾರತದ ಹಿತಾಸಕ್ತಿಯನ್ನು ಕಡೆಗಾಣಿಸುವಂತೆ ಹಸ್ತಕ್ಷೇಪ ಮಾಡದಿರುವುದು. ನೇಪಾಳದಲ್ಲಿ ಭಾರತದ ಹಿತಾಸಕ್ತಿಗಳನ್ನು ಗಮನಿಸಿ, ನೆಹರೂರವರು ಈ ಕೆಳಕಂಡ ಗಮನಾರ್ಹವಾದ ಹೇಳಿಕೆಯನ್ನು ನೀಡಿದರು.

'ಅನಾದಿಕಾಲದಿಂದಲೂ, ಹಿಮಾಲಯ ಪರ್ವತವು ಭಾರತಕ್ಕೆ ಒಂದು ಮಹತ್ತರವಾದ ಬೇಲಿ ಅಥವಾ ತಡೆಯಾಗಿ ಮೂಡಿಬಂದಿದೆ. ಅಂತಹ ಒಂದು ಬೇಲಿ ಅಥವಾ ತಡೆಯನ್ನು ಯಾವ ರಾಷ್ಟ್ರವು ಭೇದಿಸಲು ನಾವು ಬಿಡುವುದಿಲ್ಲ. ಅದರಿಂದಾಗಿ ನಾವು ನೇಪಾಳದ ಸ್ವಾತಂತ್ರ್ಯ ಎಷ್ಟೇ ಸಮರ್ಥಿಸಿದಾಗ್ಯೂ ಸಹ, ನೇಪಾಳದಲ್ಲಿ ಬೇರೆ ರಾಷ್ಟ್ರದ ಹಸ್ತಕ್ಷೇಪದಿಂದ ಯಾವ ಬದಲಾವಣೆಯೂ ಆಗಲು ಬಿಡುವುದಿಲ್ಲ. ಹಾಗೆ ಬಿಡುವುದು ಭಾರತ ಸುರಕ್ಷತೆಗೆ ವಿರೋಧವಾಗಿರುತ್ತದೆ'.

ಅದೇ ರೀತಿಯ ನಿಲುವನ್ನು ಮುಂದುವರಿಸುತ್ತಾ ನೆಹರೂರವರು ಹೆಚ್ಚು ಪರಿಣಾಮಕಾರಿ ರೀತಿಯಲ್ಲಿ ಕೆಳಗಿನ ಮತ್ತೊಂದು ಹೇಳಿಕೆಯನ್ನು ನೀಡಿದರು.

"ಬಿಚ್ಚು ಮನಸ್ಸಿನಿಂದ ಹೇಳಿದರೆ, ನೇಪಾಳದಲ್ಲಿ ಯಾವ ರಾಷ್ಟ್ರದ ಹಸ್ತಕ್ಷೇಪವನ್ನು ನಾವು ಸಹಿಸಲಾರೆವು. ನೇಪಾಳದೊಡನೆ ನಾವು ಬೆಳೆಸಿಕೊಂಡಿರುವಷ್ಟು ನಿಕಟ ಸಂಬಂಧವನ್ನು ಬೇರೆ ಯಾವ ರಾಷ್ಟ್ರವೂ ಹೊಂದಲಾರದು".

ನೆಹರೂರವರ ಈ ಮೇಲಿನ ಹೇಳಿಕೆಯು ಬಹುಶಃ ಚೀನಾಕ್ಕೆ ಅನ್ವಯಿಸುವಂತಿತ್ತು. ಭಾರತ ಸರ್ಕಾರವು 1950ರಲ್ಲಿ ನೇಪಾಳದೊಂದಿಗೆ ಒಂದು ಒಪ್ಪಂದಕ್ಕೆ ಸಹಿಹಾಕುವ ಮೂಲಕ, ನೇಪಾಳದೊಂದಿಗಿನ ತನ್ನ ವಿಶೇಷ ಸಂಬಂಧಕ್ಕೆ ತಳಹದಿಹಾಕಿತು. ಅವರು ಅಧಿಕಾರದಲ್ಲಿದ್ದಷ್ಟು ಕಾಲವೂ, ನೆಹರೂರವರು ನೇಪಾಳದಲ್ಲಿ ಬೇರೆ ಯಾವ ರಾಷ್ಟ್ರದ ಹಸ್ತಕ್ಷೇಪವಾಗದಿರುವಂತೆ ಭಾರತದ ವಿಶೇಷ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾದರು.

ಭಾರತವು ದಕ್ಷಿಣ ಏಷ್ಯಾ ಪ್ರದೇಶದಲ್ಲಿ ತನ್ನ ಶಕ್ತಿ ಮತ್ತು ಪ್ರಾಧಾನ್ಯತೆಯನ್ನು ಕಾಪಾಡಿಕೊಂಡು ಹೋಗುವುದಕ್ಕಾಗಿ ನೆಹರೂರವರು ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರಕ್ಕೂ ಕೂಡ ಒತ್ತು ನೀಡಿದರು. ಆದರೆ ಅದು ಅವರ ಕಾಲದಲ್ಲಿ ಸಾಂಸ್ಥೀಕರಣಗೊಳ್ಳಲಿಲ್ಲ.

ಬೃಹತ್ ಕೈಗಾರಿಕೆಗಳಿಗೆ, ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಮತ್ತು ಅಣುಶಕ್ತಿಯನ್ನು ಇಂಧನಕ್ಕಾಗಿ ಬಳಸುವ ಕಾರ್ಯಕ್ರಮಗಳಿಗೆ ನೆಹರೂರವರು ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುವ ಮೂಲಕ ಭಾರತವನ್ನು ಏಷ್ಯಾದಲ್ಲಿ ಒಂದು ಬಲಿಷ್ಠ ಪ್ರಭಾವಶಾಲೀ ರಾಷ್ಟ್ರವನ್ನಾಗಿ ಮಾಡುವ ಅವರ ಗುರಿಗೆ ಪೂರಕವಾಗಿ ನೆಹರೂರವರು ಶ್ರಮಿಸಿದರು.

ಪ್ರೊ || ಹೆಡ್ಲಿ ಬುಲ್‌ರವರು ಬರೆದಿರುವಂತೆ ನೆಹರೂರವರ ಕಾಲದಲ್ಲಿ ಭಾರತವು ಶಕ್ತಿಶಾಲಿ ರಾಷ್ಟ್ರವಾಗದಿದ್ದರೂ ಒಂದು ಪ್ರಭಾವಶಾಲೀ ರಾಷ್ಟ್ರವಾಗಿ ಅಂತರರಾಷ್ಟ್ರೀಯ ಮತ್ತು ಪ್ರಾಂತೀಯ ಮಟ್ಟದಲ್ಲಿ ತನ್ನ ಪಾತ್ರವನ್ನು ನಿಭಾಯಿಸಿತು.

## ನಿಮ್ಮ ಪ್ರಗತಿ ಪರಿಶೀಲನೆ -1

ಸೂಚನೆ: 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1.** ಭಾರತವನ್ನು ಬಲಿಷ್ಠ ಮತ್ತು ಶಕ್ತಿಶಾಲಿ ರಾಷ್ಟ್ರವನ್ನಾಗಿ ಮಾಡುವ ಬಗೆಗೆ ನೆಹರೂರವರು ನೀಡಿದ ಹೇಳಿಕೆಗಳನ್ನು ವಿವರಿಸಿ.

.................................................................................................................................................

.................................................................................................................................................

.................................................................................................................................................

.................................................................................................................................................

.................................................................................................................................................

.................................................................................................................................................

.................................................................................................................................................

**2.** ಚೀನಾ ಮತ್ತು ಪಾಕಿಸ್ತಾನಕ್ಕೆ ಸಂಬಂಧಿಸಿದಂತೆ ನೆಹರೂರವರು ಹಾಕಿಕೊಂಡ ನೀತಿಯನ್ನು ಪರಾಮರ್ಶಿಸಿ.

.................................................................................................................................................

.................................................................................................................................................

.................................................................................................................................................

.................................................................................................................................................

.................................................................................................................................................

.................................................................................................................................................

.................................................................................................................................................

## 4.3 ಇಂದಿರಾಗಾಂಧಿ ಮತ್ತು ದಕ್ಷಿಣ ಏಷ್ಯಾದಲ್ಲಿ ಭಾರತದ ಪ್ರಭಾವಶಾಲೀ ಸ್ಥಾನ

ನೆಹರೂರವರಿಗೆ ಹೋಲಿಸಿದರೆ, ಇಂದಿರಾಗಾಂಧಿಯವರು ವಾಸ್ತವವಾದಿಯಾಗಿದ್ದರು. ನೆಹರೂರವರ ವಿದೇಶಾಂಗ ನೀತಿಯ ಇತಿಮಿತಿಗಳನ್ನು ನಿವಾರಿಸಿ, ಭಾರತವನ್ನು ಬಲಿಷ್ಠ ರಾಷ್ಟ್ರವನ್ನಾಗಿ ಮಾಡಿ, ಭಾರತದ ಪ್ರಭಾವವನ್ನು ಹೆಚ್ಚಿಸುವುದು ಇಂದಿರಾ ಗಾಂಧಿಯವರ ವಿದೇಶಾಂಗ ನೀತಿಯ ಒಂದು ಮುಖ್ಯ ಗುರಿಯಾಗಿತ್ತು. ಈ ನಿಟ್ಟಿನಲ್ಲಿ ಇಂದಿರಾಗಾಂಧಿಯವರು ಭಾರತದ ಮಿಲಿಟರಿ ಶಕ್ತಿಯನ್ನು ಹೆಚ್ಚಿಸಲು ಬದ್ಧರಾಗಿ, ರಕ್ಷಣಾ ಯೋಜನೆಯನ್ನು ಕಾರ್ಯರೂಪಕ್ಕೆ ತಂದರು. ಸೋವಿಯತ್ ಒಕ್ಕೂಟದೊಂದಿಗೆ ಒಪ್ಪಂದ ಮಾಡಿಕೊಂಡು ಮಿಗ್-21 ವಿಮಾನಗಳನ್ನು ಭಾರತದ ವಿಮಾನ ಪಡೆಗೆ ಸೇರಿಸಿದರು. ಕ್ರಮೇಣ ಮಿಗ್ -21 ವಿಮಾನಗಳನ್ನು ಭಾರತದಲ್ಲೇ ತಯಾರಿಸುವಲ್ಲಿ ಕೂಡ ಸಫಲರಾದರು.

ಅಣ್ವಸ್ತ್ರ ಪ್ರಸರಣ ನಿಷೇದಕ್ಕೆ ಸಂಬಂಧಿಸಿದ ಜಿನಿವಾ ಸಂಧಾನದಲ್ಲಿ ಭಾರತವು ತನ್ನ ವಿರೋಧವನ್ನು ವ್ಯಕ್ತಪಡಿಸುವಂತೆ ಪ್ರಧಾನಿ ಇಂದಿರಾಗಾಂಧಿಯವರು ರಾಜತಂತ್ರ ಹಾಕಿಕೊಂಡರು. ಅಣ್ವಸ್ತ್ರ ಪ್ರಸರಣ ನಿಷೇದ ಒಪ್ಪಂದವು ಅಸಮಾನತೆ ಮತ್ತು ತಾರತಮ್ಯತೆಗಳಿಂದ ಕೂಡಿದೆಯೆಂದು ಅದನ್ನು ವಿರೋಧಿಸಿ ಭಾರತವು ಅಣ್ವಸ್ತ್ರ ತಯಾರಿಕೆಗೆ ಸಂಬಂಧಿಸಿದಂತೆ ತನ್ನ ನೀತಿಯ ಇಚ್ಛೆಯನ್ನು ಕಾಪಾಡಿಕೊಂಡು ಹೋಗುವಂತೆ ಮಾಡಿದರು.

ಸೋವಿಯತ್ ಒಕ್ಕೂಟದೊಂದಿಗೆ 20 ವರ್ಷಗಳ ಮೈತ್ರಿ ಮತ್ತು ಸಹಕಾರ ಒಪ್ಪಂದಕ್ಕೆ ಸಹಿ ಹಾಕುವುದರ ಮೂಲಕ ಭಾರತದ ರಕ್ಷಣಾ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಯಶಸ್ವಿಯಾದರು.

ಪೂರ್ವ ಪಾಕಿಸ್ತಾನವನ್ನು ಪಾಕಿಸ್ತಾನದ ಆಂತರಿಕ ಪೋಷಣೆಯಿಂದ ಮುಕ್ತವನ್ನಾಗಿ ಮಾಡಿ, ಉಪಖಂಡದಲ್ಲಿ ಬಾಂಗ್ಲಾದೇಶದ ಅಸ್ತಿತ್ವಕ್ಕೆ ಕಾರಣರಾದರು. ಇದರಿಂದ ಭಾರತದ ಶಕ್ತಿ ಮತ್ತು ಪ್ರಭಾವ ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಗಮನಾರ್ಹವಾಗಿ ಹೆಚ್ಚಿತು. 1971 ರ ಯುದ್ಧದ ವಿಜಯದ ನಂತರದಲ್ಲಿ ಅಮೇರಿಕಾದ ರಾಷ್ಟ್ರಾಧ್ಯಕ್ಷರಾದ ನಿಕ್ಸನ್ ಮತ್ತು ಅವರ ವಿದೇಶಾಂಗ ಸಚಿವ ಡಾ|| ಹೆನ್ರಿ ಕಿಸಿಂಜರ್ ಭಾರತವನ್ನು ಪ್ರಾಂತೀಯ ಬೃಹತ್ ರಾಷ್ಟ್ರವೆಂದು ಘೋಷಿಸಿದರು.

ಪ್ರೊ . ಜಾನ್ ಮೆಲ್ಲರ್‌ರವರು (ಅಮೇರಿಕಾದ ವಿದ್ವಾಂಸರು) ಭಾರತವನ್ನು ಬೆಳೆಯುತ್ತಿರುವ ಮಧ್ಯಮ ರಾಷ್ಟ್ರವೆಂದು ತಮ್ಮ ಗ್ರಂಥದಲ್ಲಿ ಬಣ್ಣಿಸಿದರು.

ಇಂದಿರಾಗಾಂಧಿಯವರು ನೇಪಾಳದೊಡನೆ ಕೂಡ ಭಾರತದ ಸಂಬಂಧವು ವೃದ್ಧಿಸಿ ಆ ರಾಷ್ಟ್ರವೂ ಕೂಡ ಭಾರತದ ಶಕ್ತಿಯನ್ನು ಗಣನೆಗೆ ತೆಗೆದುಕೊಳ್ಳುವಂತೆ ಮಾಡಿದರು. ಶ್ರೀಲಂಕಾದ ಪರಮಾಧಿಕಾರವನ್ನು ಮನ್ನಿಸಿ ದ್ವೀಪದಲ್ಲಿ ಸಮುದ್ರಯಾನ ಮತ್ತು ಮೀನುಗಾರಿಕೆ ಕೆಲಸವನ್ನು ಭಾರತದ ಮೀನುಗಾರರು ಮುಂದುವರೆಸಿಕೊಂಡು ಹೋಗಲು ಬೇಕಾದ ಅವಕಾಶಗಳನ್ನು ಕಲ್ಪಿಸಿದರು. ಶಾಂತಿಯುತ ಅಣ್ವಸ್ತ್ರ ಪ್ರಸರಣೆಯನ್ನು (1974) ಮಾಡಿ ಭಾರತ ಅಣ್ವಸ್ತ್ರ ಸಾಮರ್ಥ ರಾಷ್ಟ್ರವೆಂದುಪ ವಿಶ್ವದಾದ್ಯಂತ ಪರಿಗಣಿಸಲ್ಪಡುವಲ್ಲಿ ಇಂದಿರಾಗಾಂಧಿಯವರು ಕೀರ್ತಿಯನ್ನು ಸಾಧಿಸಿದರು.

ಚೀನಾದೊಡನೆ ರಾಯಭಾರಿ ಸಂಬಂಧವನ್ನು (1976) ರಲ್ಲಿ ಪುನರ್‌ಸ್ಥಾಪಿಸಿ, ಭಾರತ - ಚೀನಾ ನಡುವಣ ಭವಿಷ್ಯದ ಸಂಧಾನ ಮತ್ತು ಮಾತುಕತೆಗೆ ದಾರಿಮಾಡಿಕೊಟ್ಟರು. ಈ ರೀತಿಯಾಗಿ ಇಂದಿರಾ ಗಾಂಧಿಯವರು ಏಷ್ಯಾ ಖಂಡದಲ್ಲಿ ಭಾರತದ ಶಕ್ತಿ ಮತ್ತು ಪ್ರಭಾವವನ್ನು ಹೆಚ್ಚಿಸುವುದರಲ್ಲಿ ಯಶಸ್ವಿ ರಾಯಭಾರತ್ವವನ್ನು ನಿಭಾಯಿಸಿದರು.

## 4.4 ರಾಜೀವ್‌ಗಾಂಧಿಯವರ ಕಾಲದಲ್ಲಿ ಭಾರತದ ದಕ್ಷಿಣ ಏಷ್ಯಾ ಸಂಬಂಧಿತ ಶಕ್ತಿ ಮತ್ತು ಪ್ರಭಾವ

ಯುವ ಪೀಳಿಗೆಯನ್ನು ಪ್ರತಿನಿಧಿಸುತ್ತಾ, ಭಾರತದ ಪ್ರಧಾನಮಂತ್ರಿಯಾಗಿ ರಾಜೀವ್‌ಗಾಂಧಿಯವರು ದಕ್ಷಿಣ ಏಷ್ಯಾ ಮತ್ತು ಅಂತರರಾಷ್ಟ್ರೀಯ ಸಮುದಾಯಕ್ಕೆ ಸಂಬಂಧಿಸಿದ ಭಾರತದ ಹಿಂದಿನ ನೀತಿಗಳನ್ನು ಮುಂದುವರೆಸುವುದರ ಜೊತೆಗೆ, ಕೆಲವು ಹೊಸ ನೀತಿಗಳಿಗೂ ಕಾರಣಕರ್ತರಾದರು.

ಪ್ರಮುಖವಾಗಿ ಭಾರತದ ತಂತ್ರಜ್ಞಾನ ಬೆಳವಣಿಗೆಯ ಬಗ್ಗೆ ಕಾಳಜಿ ಹೊಂದಿದ್ದ ರಾಜೀವ್‌ಗಾಂಧಿಯವರು ಭಾರತ -ಅಮೇರಿಕಾ ನಡುವಿನ ತಂತ್ರಜ್ಞಾನ ಸಹಕಾರವನ್ನು ವೃದ್ಧಿಸಿದರು.

ಚೀನಾ ಮತ್ತು ಪಾಕಿಸ್ತಾನದೊಡನೆ ಭಾರತದ ಮೈತ್ರಿ ಮತ್ತು ಸಹಕಾರವನ್ನು ಹೆಚ್ಚಿಸಲು ಶ್ರಮಿಸಿದರು. ಅವರ ಚೀನಾ ಭೇಟಿ, ಪರಸ್ಪರ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಬಂಧವನ್ನು ಹೆಚ್ಚಿಸುವಲ್ಲಿ ಫಲಪ್ರದವಾಯಿತು.

ಪಾಕಿಸ್ತಾನದ ಯುವ ಪ್ರಧಾನಿ ಬೆನ್‌ಜಿರ್ ಭುಟ್ಟೋರವರೊಡನೆ ಮಾತುಕತೆ ನಡೆಸಿ, ಪರಸ್ಪರ ವಿಶ್ವಾಸ ಹೆಚ್ಚಿಸುವ ಒಪ್ಪಂದಕ್ಕೆ ಸಹಿ ಹಾಕಿದರು.

ಸೋವಿಯತ್ ಒಕ್ಕೂಟದೊಡನೆ ನಿಕಟ ಸಂಬಂಧವನ್ನು ಮುಂದುವರೆಸಿ ಭಾರತದ ರಕ್ಷಣಾ ಶಕ್ತಿಯನ್ನು ಹೆಚ್ಚಿಸಿ, ಅಲ್ಲಿನ ಅಧ್ಯಕ್ಷ ಗೋರ್‌ಬಚನ್‌ರವರೊಡನೆ ವಿಶ್ವಶಾಂತಿ ಮತ್ತು ನಿಶ್ಶಸ್ತ್ರೀಕರಣಕ್ಕೆ ಸಂಬಂಧಿಸಿದಂತೆ ಮಹತ್ತರವಾದ ಘೋಷಣೆ ಮಾಡಿದರು.

ಭಾರತದ ಶಕ್ತಿ ಮತ್ತು ಪ್ರಭಾವವನ್ನು ಬಳಸಿಕೊಂಡು ಹೋಗುವ ದೃಷ್ಟಿಯಿಂದ ರಾಜೀವ್‌ಗಾಂಧಿಯವರು ಶ್ರೀಲಂಕಾ ರಾಷ್ಟ್ರದೊಡನೆ ಅಲ್ಲಿನ ಜನಾಂಗೀಯ ಸಮಸ್ಯೆಯನ್ನು ಬಗೆಹರಿಸಲು ಭಾರತದ ಸೈನ್ಯವನ್ನು ಕಳುಹಿಸುವ ಮಹತ್ತರ, ವಿವಾದಾಸ್ಪದ, ಒಪ್ಪಂದಕ್ಕೆ ಸಹಿ ಹಾಕಿದರು. ಅವರ ದೃಷ್ಟಿಯಲ್ಲಿ ಭಾರತವು ತನ್ನ ಸೈನ್ಯವನ್ನು ಕಳುಹಿಸಿದ್ದರೆ, ದ್ವೀಪ ರಾಷ್ಟ್ರವು ಪಾಕಿಸ್ತಾನ ಅಥವಾ ಇಸ್ರೇಲ್‌ನಿಂದ ಯೋಧರನ್ನು ಬರಮಾಡಿಕೊಳ್ಳುತ್ತಿತ್ತು. ಅಂತಹ ಪರಿಸ್ಥಿತಿಯು ಭೌಗೋಳಿಕವಾಗಿ ಭಾರತದ ಹಿತಾಸಕ್ತಿಗೆ ಮಾರಕವಾಗಿರುತ್ತಿತ್ತು. ಈ ಕಾರಣದಿಂದ ಸಂಪುಟ ಸದಸ್ಯರ ಒಪ್ಪಿಗೆಯನ್ನು ಪಡೆಯದೆ, ರಾಜೀವ್‌ಗಾಂಧಿಯವರು ಏಕಾಏಕಿ ಶ್ರೀಲಂಕಾದ ರಾಷ್ಟ್ರಪತಿ ಜಯವರ್ಧನೆಯವರೊಂದಿಗೆ ಭಾರತದ ಸೈನ್ಯವನ್ನು ದ್ವೀಪ ರಾಷ್ಟ್ರಕ್ಕೆ ಕಳುಹಿಸುವ ಒಪ್ಪಂದಕ್ಕೆ ಸಾಹಿ ಹಾಕಿದರು. ರಾಜೀವ್‌ಗಾಂಧಿಯವರ ನಿರೀಕ್ಷೆಗೆ ಮಾರಕವೆಂಬಂತೆ, ಜಯವರ್ಧನೆ ಸರ್ಕಾರವು ಭಾರತದ ಸೈನ್ಯವನ್ನು ಎಲ್.ಟಿ.ಟಿ.ಇ ವಿರುದ್ಧ ಉಪಯೋಗಿಸಿ, ಭಾರತದ ಸೈನಿಕರಿಂದ ತಮಿಳರ ಹತ್ಯೆಯಾಗುವಂತೆ ಮಾಡಿ (ಇದರಲ್ಲಿ ಭಾರತದ ಸೈನಿಕರೂ ಕೂಡ ಭಾರಿ ಸಂಖ್ಯೆಯಲ್ಲಿ ಮರಣವನ್ನಪ್ಪಿದರು).ಭಾರತ ಮತ್ತು ಎಲ್.ಟಿ.ಟಿ.ಇ. ನಡುವೆ ವಿರಸ ಹುಟ್ಟುವಂತೆ ಮಾಡಿದರು. ಭಾರತದಲ್ಲಿ, ವಿಶೇಷವಾಗಿ ತಮಿಳುನಾಡಿನಲ್ಲಿ, ಭಾರಿ ವಿರೋಧವೇ ವ್ಯಕ್ತಪಟ್ಟಿತು. ನಂತರದಲ್ಲಿ ಎಲ್.ಟಿ.ಟಿ.ಇ. ರಾಜೀವ್‌ಗಾಂಧಿಯವರ ದುರಂತದ ಹತ್ಯೆಗೂ ಕಾರಣವಾಯಿತು. ಭಾರತವು ಶ್ರೀಲಂಕಾದ ಜನಾಂಗೀಯ ಸಮಸ್ಯೆಯ ಪರಿಹಾರ ಪ್ರಕ್ರಿಯೆಯಿಂದ ದೂರವಿರುವಂತೆ ಕೂಡ ಆಯಿತು. ಒಟ್ಟಾರೆ, ರಾಜೀವ್ ಗಾಂಧಿಯವರ ಶ್ರೀಲಂಕಾ ನೀತಿ ವಿಫಲವಾಯಿತು.

## ನಿಮ್ಮ ಪ್ರಗತಿ ಪರಿಶೀಲನೆ -2

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಭಾರತವನ್ನು ಶಕ್ತಿ ಮತ್ತು ಪ್ರಭಾವಿ ರಾಷ್ಟ್ರವನ್ನಾಗಿಸುವಲ್ಲಿ ಇಂದಿರಾ ಗಾಂಧಿಯವರ ನೀತಿಯನ್ನು ಪರಾಮರ್ಶಿಸಿ.**

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

**2. ರಾಜೀವ್‌ಗಾಂಧಿಯವರ ಶ್ರೀಲಂಕಾ ನೀತಿಯನ್ನು ವಿಮರ್ಶಿಸಿ.**

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

## 4.5 ಶೀತಲ ಸಮರೋತ್ತರದ ಬೆಳವಣಿಗೆಗಳು ಮತ್ತು ಭಾರತದ ಪ್ರಭಾವ.

ಶೀತಲ ಸಮರೋತ್ತರದ ಯುಗದಲ್ಲಿ ವಿಶ್ವದಾದ್ಯಂತ ಜಾಗತೀಕರಣದ ಅಲೆ ಎದ್ದು, ಭಾರತದ ವಿದೇಶಾಂಗ ನೀತಿಯ ಮೇಲೆ ಅದರ ನೇರ ಪರಿಣಾಮ ಕಂಡುಬಂದಿತು. ಭಾರತದ ವಿದೇಶಾಂಗ ನೀತಿಯಲ್ಲಿ ವ್ಯಾಪಾರ ಮತ್ತು ವಾಣಿಜ್ಯಕ್ಕೆ ಪ್ರಾಶಸ್ತ್ಯ ದೊರಕಿ, ಭಾರತವು ಅಮೇರಿಕಾ, ಯುರೋಪ್ ಮತ್ತು ದಕ್ಷಿಣ ಪೂರ್ವ ಏಷ್ಯಾದ ಕಡೆಗೆ ತನ್ನ ಗಮನ ಹರಿಸಿತು. ಭಾರತದ ಆರ್ಥಿಕ ಪರಿಸ್ಥಿತಿ ಮತ್ತು ಅಂತರರಾಷ್ಟ್ರೀಯ ಬಂಡವಾಳ ಹೂಡಿಕೆ, ಭಾರತವು ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಆರ್ಥಿಕ ಮತ್ತು ತಂತ್ರಜ್ಞರ ಶಕ್ತಿಯಾಗಿ ಬೆಳೆಯತೊಡಗಿತು. ಸಾರ್ಕ್‌ನಲ್ಲಿ ಕೂಡ ಭಾರತದ ಪ್ರಭಾವ ಮತ್ತು ಪ್ರತಿಷ್ಠೆ ಹೆಚ್ಚಿತು. ಇದರಿಂದಾಗಿ ಪಾಕಿಸ್ತಾನ ಮತ್ತು ಕೆಲವು ಸಣ್ಣ ನೆರೆರಾಷ್ಟ್ರಗಳು ಭಾರತದ ಬಗ್ಗೆ ಸಂಶಯಾಸ್ಪದವಾಗಿ ನೋಡಿದರೂ ಕೂಡ, ಭಾರತವು ಸಾರ್ಕ್ ರಾಷ್ಟ್ರಗಳ ನಡುವೆ ವ್ಯಾಪಾರಕ್ಕೆ ಒತ್ತುಕೊಡುತ್ತಾ ಬಂದು ಸಾರ್ಕ್‌ಗೆ ಹೊಸ ಆಯಾಮವನ್ನೇ ಕೊಟ್ಟಿತು.

ದಕ್ಷಿಣ ಕ್ಷೇತ್ರದಲ್ಲಿ ಭಾರತದ ಕ್ಷಿಪಣಿ ಉಡಾವಣೆಗಳೂ ಹೆಚ್ಚಿ ಭಾರತದ ಶಕ್ತಿ/ ಪ್ರಭಾವವು ಬೆಳೆಯುವಂತೆ ಆಯಿತು.

1990 ರ ದಶಕದಲ್ಲಿ ಭಾರತ ಮತ್ತು ಚೀನಾ ನಡುವಿನ ಆರ್ಥಿಕ ಹಾಗೂ ವ್ಯಾಪಾರ ಸಂಬಂಧವೂ ಹೆಚ್ಚಿತು. ದಕ್ಷಿಣ ಏಷ್ಯಾ ಪ್ರಾಂತ್ಯದ ಬೆಳವಣಿಗೆಗೆ ಇವು ಪೂರಕವೇ ಆಯಿತು ಎಂದರೆ ತಪ್ಪಾಗಲಾರದು.

## 4.6 ವಾಜಪೇಯಿಯವರ ನಾಯಕತ್ವ ಮತ್ತು ಭಾರತದ ಪ್ರಭಾವ

ದಕ್ಷಿಣ ಏಷ್ಯಾದಲ್ಲಿ ಭಾರತದ ಬಲಿಷ್ಟ ರಾಷ್ಟ್ರ ಗುರಿಗೆ ವಾಜಪೇಯಿ ನೇತೃತ್ವದ ಎನ್.ಡಿ.ಎ ಸರ್ಕಾರವು ಒಂದು ಹೊಸ ಅಧ್ಯಾಯವನ್ನೇ ಪ್ರಾರಂಬಿಸಿತು ಎನ್ನುವುದು ಗಮನಾರ್ಹವಾದ ಅಂಶ. ಬಿ.ಜೆ.ಪಿ. ಪಕ್ಷವು ಜನಸಂಘವಾಗಿದ್ದಾಗಿನಿಂದಲೂ ಭಾರತವನ್ನು ಅಣ್ವಸ್ತ್ರ ರಾಷ್ಟ್ರವನ್ನಾಗಿ ಪರಿವರ್ತಿಸಬೇಕೆಂಬ ಮಹದಾಕಾಂಕ್ಷೆಯನ್ನು ಹೊಂದಿತ್ತಾದ್ದರಿಂದ, ಅಧಿಕಾರಕ್ಕೆ ಬಂದ ಅಲ್ಪ ಅವಧಿಯಲ್ಲಿಯೇ ವಾಜಪೇಯಿ ಸರ್ಕಾರವು (13ಮೇ, 1998ರಂದು) ಐದು ಅಣ್ವಸ್ತ್ರ ಸ್ಫೋಟಗಳನ್ನು ಅತ್ಯಂತ ಗೋಪ್ಯತೆಯಿಂದ ನಡೆಸಿ, ಭಾರತವು ಅಣ್ವಸ್ತ್ರ ರಾಷ್ಟ್ರವಾಗಿ ಮಾರ್ಪಾಡಾಗಿದೆ ಎಂದು ಘೋಷಿಸಿತು. ಇದರಿಂದಾಗಿ ಪಾಕಿಸ್ತಾನವೂ (ಕೇವಲ 15 ದಿನಗಳಲ್ಲಿ) ಅಣ್ವಸ್ತ್ರ ರಾಷ್ಟ್ರವನ್ನಾಗಿ ಮಾರ್ಪಾಡಾಯಿತು.

ಶಾಂತಿ ಮತ್ತು ನಿಶ್ಯಸ್ತ್ರೀಕರಣಕ್ಕೆ ಬದ್ಧರಾಗಿದ್ದ ವಾಜಪೇಯಿಯವರು ತಕ್ಷಣದಲ್ಲಿಯೇ ಅಣ್ವಸ್ತ್ರ ಉಪಯೋಗ ನಿಷೇದ ಹೇಳಿಕೆಯ ಭರವಸೆಯನ್ನು ಅಂತರರಾಷ್ಟ್ರೀಯ ಸಮುದಾಯಕ್ಕೆ ನೀಡಿದರು. ಅಮೇರಿಕಾ ಮತ್ತು ಪಾಶ್ಚಿಮಾತ್ಯ ಸರ್ಕಾರಗಳು ವಾಜಪೇಯಿಯವರ ಹೇಳಿಕೆಯನ್ನು ಮೆಚ್ಚಿ ಭಾರತದ ಜವಾಬ್ದಾರಿ ನಡವಳಿಕೆಯನ್ನು ಪ್ರಶಂಸಿದವು. ಆದರೆ ಪಾಕಿಸ್ತಾನ ಈ ತರಹದ ಘೋಷಣೆಯನ್ನು ನೀಡಲು ತಿರಸ್ಕರಿಸಿತು. ಎರಡೂ ರಾಷ್ಟ್ರಗಳೂ ತಮ್ಮದೇ ಅಣ್ವಸ್ತ್ರ ತತ್ವಗಳನ್ನು ಬೆಳೆಸಿಕೊಂಡು ಅಲ್ಪ ಪ್ರಮಾಣದಲ್ಲಿ ಅಣ್ವಸ್ತ್ರಗಳನ್ನು ತಯಾರಿಸಿವೆ. ಭಾರತ ಮತ್ತು ಪಾಕಿಸ್ತಾನದ ಕ್ಷಿಪಣಿ ಬಲವೂ ಕೂಡ ಹೆಚ್ಚಿದೆ. ಆಶ್ಚರ್ಯದ ಸಂಗತಿ ಎಂದರೆ ಅಮೇರಿಕಾ ಮತ್ತು ಚೀನಾ ರಾಷ್ಟ್ರಗಳು ಪ್ರಾರಂಬದಲ್ಲಿ ಭಾರತದ ಅಣ್ವಸ್ತ್ರ ಶಕ್ತಿಯನ್ನು ಕಟುವಾಗಿ ಟೀಕಿಸಿದ್ದರೂ ಕೂಡ, ಭಾರತದೊಂದಿಗಿನ ತಮ್ಮ ಸಂಬಂಧವನ್ನು ಸುಧಾರಿಸಲು ಮುಂದೆ ಬಂದವು. ಅವರಿಗೆ ಸಂತಸವನ್ನು ತಂದ ಬೆಳವಣಿಗೆ ಎಂದರೆ, ವಾಜಪೇಯಿಯವರು ಪ್ರಧಾನಮಂತ್ರಿಯಾಗಿದ್ದ ಕಾಲದಲ್ಲಿ ಪಾಕಿಸ್ತಾನ ಮತ್ತು ಚೀನಾದೊಡನೆ ಶಾಂತಿ, ಮೈತ್ರಿ ಮತ್ತು ಸಹಕಾರವನ್ನು ಹೆಚ್ಚಿಸಲು ಮಾಡಿದ ನಿರಂತರ ಪ್ರಯತ್ನಗಳು. ವಾಜಪೇಯಿಯವರ ಲಾಹೋರ್ ಬಸ್‌ಯಾತ್ರೆ, ಲಾಹೋರ್ ಘೋಷಣೆ, ನಂತರದಲ್ಲಿ ಜನರಲ್ ಮುಷರಫ್‌ರೊಡನೆ ನಡೆಸಿದ ಆಗ್ರ ಶೃಂಗಸಭೆ ಮತ್ತು ರಾಜಕೀಯ ಹಾಗೂ ಅಧಿಕಾರಿಗಳ ಮಟ್ಟದಲ್ಲಿ ಸಮಸ್ಯೆಗಳ ಸಂಧಾನಕ್ಕಾಗಿ ಪ್ರಾರಂಭವಾದ ಮಾತುಕತೆಗಳು ಭಾರತವನ್ನು ಅಮೇರಿಕಾದ ಪ್ರಶಂಸೆಗೆ ಒಳಮಾಡಿತು. ವಾಜಪೇಯಿಯವರ ಚೀನಾ ಭೇಟಿ ಮತ್ತು

ಆದರಿಂದ ತಿಳಿಯಾದ ವಾತಾವರಣದಿಂದಾಗಿ ಚೀನಾ ರಾಷ್ಟ್ರವು ಸಿಕ್ಕಿಂ ರಾಜ್ಯವನ್ನು ಭಾರತದ ಅವಿಭಾಜ್ಯ ಅಂಗವೆಂದು ಪರಿಗಣಿಸಿತು. ಈ ಎಲ್ಲಾ ಬೆಳವಣಿಗೆಗಳೂ ಭಾರತದ ಪ್ರಭಾವ ಮತ್ತು ಸ್ಥಾನವು ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಹೆಚ್ಚಲು ಪೂರಕವಾದವು. ಅದ್ವಾನಿಯವರು ಆಗಿಂದಾಗ್ಗೆ ಭಾರತವನ್ನು ಬೃಹತ್ ರಾಷ್ಟ್ರವನ್ನಾಗಿ ಮಾಡುವ ಬಗ್ಗೆ ನೀಡುವ ಹೇಳಿಕೆಗಳು ಮತ್ತು ರಾಷ್ಟ್ರಪತಿ ಡಾ || ಅಬ್ದುಲ್ ಕಲಾಂರವರು 2020 ರೊಳಗೆ ಭಾರತವನ್ನು ಮುಂದುವರೆದ ಬಲಾಢ್ಯ ರಾಷ್ಟ್ರವನ್ನಾಗಿ ಮಾರ್ಪಡಿಸಲು ತಳೆದ ಧೋರಣೆಗಳು ಭಾರತದ ಶಕ್ತಿ ಮತ್ತು ಪ್ರಭಾವಶಾಲೀ ರಾಷ್ಟ್ರ ಕಲ್ಪನೆಗೆ ಪೂರಕವಾಗಿದೆ.

## 4.7 ಉಪಸಂಹಾರ

ಈ ಮೇಲಿನ ವಿಶ್ಲೇಷಣೆಯಿಂದ ಗಮನಾರ್ಹವಾಗಿ ತಿಳಿದುಬರುವುದೇನೆಂದರೆ ನೆಹರೂರವರ ಕಾಲದಿಂದ, ಇಂದಿನವರೆವಿಗೂ, ಭಾರತವನ್ನು ಶಕ್ತಿಶಾಲಿ, ಪ್ರಭಾವಶಾಲಿ ರಾಷ್ಟ್ರವನ್ನಾಗಿಸುವಲ್ಲಿ ನಡೆದಿರುವ ನಿರಂತರ ಪ್ರಯತ್ನ. ಅಲಿಪ್ತ ನೀತಿಯನ್ನು ಉಪಯೋಗಿಸಿಕೊಂಡು ನೆಹರೂರವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಮತ್ತು ಏಷ್ಯಾಖಂಡದಲ್ಲಿ ಭಾರತವನ್ನು ಶಕ್ತಿ ಮತ್ತು ಪ್ರಭಾವಿ ರಾಷ್ಟ್ರವನ್ನಾಗಿಸುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ದಕ್ಷಿಣ ಏಷ್ಯಾದಲ್ಲಿ ಭಾರತದ ಪ್ರಭಾವ ಮತ್ತು ಸ್ಥಾನಮಾನವನ್ನು ಹೆಚ್ಚಿಸಲು ಪ್ರಯತ್ನಿಸಿದರು. ಇಂದಿರಾ ಗಾಂಧಿಯವರು ಭಾರತವನ್ನು ಮಿಲಿಟರಿಯಾಗಿ ಬಲಶಾಲೀ ರಾಷ್ಟ್ರವನ್ನಾಗಿಸುವಲ್ಲಿ ಸಮರ್ಥರಾದರು. ಅಮೇರಿಕಾದ ಅಧ್ಯಕ್ಷರೂ ಕೂಡ 1971ರ ನಂತರದಲ್ಲಿ ಭಾರತವನ್ನು ಪ್ರಾಂತೀಯ ಬೃಹತ್ ರಾಷ್ಟ್ರವೆಂದು ಬಣ್ಣಿಸಿದರು. ರಾಜೀವ್‌ಗಾಂಧಿ ಮತ್ತು ಗುಜ್ರಾಲ್‌ರವರೂ ಕೂಡ ದಕ್ಷಿಣ ಏಷ್ಯಾದಲ್ಲಿ ಭಾರತದ ಪ್ರಭಾವವನ್ನು ಹೆಚ್ಚಿಸಲು ಹಾಗೂ ನೆರೆರಾಷ್ಟ್ರಗಳೊಡನೆ ಸಂಬಂಧವನ್ನು ಸುಧಾರಿಸಲು ಶ್ರಮಿಸಿದರು. ವಾಜಪೇಯಿ ಸರ್ಕಾರವು ಭಾರತವನ್ನು ಅಣ್ವಸ್ತ್ರ ರಾಷ್ಟ್ರವನ್ನಾಗಿಸುವ ದಿಟ್ಟ ಹೆಜ್ಜೆಯನ್ನು ಹಾಕಿತು. ಶಾಂತಿಗಾಗಿ ವಾಜಪೇಯಿಯವರು ಮಾಡಿದ ಪ್ರಯತ್ನಗಳು ಗಮನಾರ್ಹ. ಭಾರತದ ಸಂಬಂಧವು ಪಾಕಿಸ್ತಾನ ಮತ್ತು ಚೀನಾದೊಡನೆ ಸಕಾರಾತ್ಮಕವಾಗಿ ಬೆಳೆಯಲು ವಾಜಪೇಯಿ ಸರ್ಕಾರವು ನಿರಂತರವಾಗಿ ಪ್ರಯತ್ನಿಸಿತು.

### ನಿಮ್ಮ ಪ್ರಗತಿ ಪರಿಶೀಲನೆ -3

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಭಾರತದ ಶಕ್ತಿ ಹಾಗೂ ಪ್ರಭಾವದ ಬೆಳವಣಿಗೆಗೆ ವಾಜಪೇಯಿ ಸರ್ಕಾರದ ಕೊಡುಗೆಯನ್ನು ತಿಳಿಸಿ.**

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

**2.** ವಾಜಪೇಯಿ ಸರ್ಕಾರದ ದಕ್ಷಿಣ ಏಷ್ಯಾ ನೀತಿಯ ಇತಿಮಿತಿಗಳನ್ನು ವಿವರಿಸಿ.

..................................................................................................................................................

..................................................................................................................................................

..................................................................................................................................................

..................................................................................................................................................

..................................................................................................................................................

..................................................................................................................................................

..................................................................................................................................................

## 4.8 ಸಾರಾಂಶ

ಈ ಘಟಕದಲ್ಲಿ ನೆಹರೂರವರು ದಕ್ಷಿಣ ಏಷ್ಯಾದಲ್ಲಿ ಭಾರತದ ಶಕ್ತಿ ಮತ್ತು ಪ್ರಭಾವವನ್ನು ಭೌಗೋಳಿಕ ಅಂಶಾದಾರಿತವಾಗಿ ಹೆಚ್ಚಿಸಲು ಹಾಕಿಕೊಂಡ ನೀತಿ ಮತ್ತು ಕಾರ್ಯಕ್ರಮಗಳನ್ನು ವಿಮರ್ಶಾತ್ಮಕವಾಗಿ ತಿಳಿಸಿದೆ. ಈ ನಿಟ್ಟಿನಲ್ಲಿ ಇಂದಿರಾಗಾಂಧಿಯವರ ನೀತಿಯ ಬದಲಾವಣೆಗಳು ಮತ್ತು ಯಶಸ್ಸನ್ನೂ ಕೂಡ ವಿಶ್ಲೇಷಿಸಲಾಗಿದೆ. ರಾಜೀವ್‌ಗಾಂಧಿ, ಗುಜ್ರಾಲ್ ಮತ್ತಿತರರು ದಕ್ಷಿಣ ಏಷ್ಯಾಕ್ಕೆ ಸಂಬಂಧಿಸಿದಂತೆ ಮಾಡಿದ ಪ್ರಯತ್ನಗಳನ್ನು ವಿವರಿಸಲಾಗಿದೆ. ಕೊನೆಯದಾಗಿ, ವಾಜಪೇಯಿ ಸರ್ಕಾರವು ಭಾರತದ ಪ್ರಭಾವವನ್ನು ಹೆಚ್ಚಿಸಲು ಹಾಗೂ ದಕ್ಷಿಣ ಏಷ್ಯಾದಲ್ಲಿ ಶಾಂತಿ ಸೌಹಾರ್ದತೆಯನ್ನು ಬೆಳೆಸಲು ಹಮ್ಮಿಕೊಂಡ ನೀತಿ ನಿಯಮಗಳನ್ನು ತಿಳಿಸಲಾಗಿದೆ. 2020 ರ ಅವಧಿಯಲ್ಲಿ ಭಾರತವನ್ನು ಬಲಾಢ್ಯ ಮತ್ತು ಬೃಹತ್ ರಾಷ್ಟ್ರವನ್ನಾಗಿ ಮಾಡುವುದು ತಮ್ಮ ಗುರಿಯೆಂದು ಅಂದಿನ ಉಪಪ್ರಧಾನಿ ಅಡ್ವಾನಿ ಮತ್ತು ರಾಷ್ಟ್ರಪತಿ ಡಾ|| ಅಬ್ದುಲ್ ಕಲಾಂರವರು ನೀಡಿರುವ ಘೋಷಣೆಗಳನ್ನು ಪ್ರಸ್ತಾಪಿಸಲಾಗಿದೆ.

## 4.9 ಕೆಲವು ಪ್ರಮುಖ ಪದಗಳು

ಪ್ರಭಾವಶಾಲೀ ರಾಷ್ಟ್ರ - ಈ ಪದವು ನಕಾರಾತ್ಮಕವಾಗಿರದೆ ಭಾರತವು ಯಾವ ರೀತಿಯಲ್ಲಿ ದಕ್ಷಿಣ ಏಷ್ಯಾದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಬೆಳೆಸಲು ಉಪಯೋಗಿಸಿತು ಎನ್ನುವುದನ್ನು ತಿಳಿಸುತ್ತದೆ.

ಪಂಚಶೀಲ - ಚೀನಾದೊಡನೆ ಭಾರತವು ಶಾಂತಿ ಮತ್ತು ಸೌಹಾರ್ದತೆಯನ್ನು ಬೆಳೆಸಿಕೊಳ್ಳಲು ಮಾಡಿಕೊಂಡ ಒಪ್ಪಂದ.

## 4.10 ಕೆಲವು ಉಪಯುಕ್ತ ಗ್ರಂಥಗಳು


ವಿ.ಪಿ. ದತ್ - ಇಂಡಿಯನ್ ಫಾರಿನ್ ಪಾಲಿಸಿ

ಬಿಮಲ್ ಪ್ರಸಾದ್ - ಇಂಡಿಯಾಸ್ ಫಾರಿನ್ ಪಾಲಿಸಿ.

ಹರೀಶ್ ಕಪೂರ್ - ಇಂಡಿಯಾಸ್ ಫಾರಿನ್ ಪಾಲಿಸಿ

ನಾಯರ್ ಅಂಡ್ ಪಾಲ್ - ಇಂಡಿಯಾ ಇನ್ ದಿ ವರ್ಲ್ಡ್ ಆರ್ಡರ್ ಸರ್ಚ್ ಫಾರ್ ಎ ಮೇಜರ್ ಪವರ್ ಸ್ಟೇಟಸ್

## 4.11 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

**ನಿಮ್ಮ ಪ್ರಗತಿ ಪರಿಶೀಲನೆ -1**

1. ವಿಭಾಗ 4.2 ನೋಡಿ
2. ವಿಭಾಗ 4.3 ನೋಡಿ

**ನಿಮ್ಮ ಪ್ರಗತಿ ಪರಿಶೀಲನೆ -2**

1. ವಿಭಾಗ 4.4 ನೋಡಿ
2. ವಿಭಾಗ 4.5 ನೋಡಿ

**ನಿಮ್ಮ ಪ್ರಗತಿ ಪರಿಶೀಲನೆ -3**

1. ವಿಭಾಗ 4.6 ನೋಡಿ
2. ವಿಭಾಗ 4.7 ನೋಡಿ

# ಘಟಕ 5 ಪ್ರಾದೇಶಿಕ ಸಹಕಾರಕ್ಕೆ ಭಾರತದ ಕಾರ್ಯಕ್ರಮಗಳು

## ರಚನೆ


5.0 ಉದ್ದೇಶಗಳು

5.1 ಪ್ರಸ್ತಾವನೆ

5.2 ಭಾರತ, ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರಕ್ಕೆ ಸಂಬಂಧಿಸಿದ ವಿಷಯಗಳು

5.2.1 ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘ(ಸಾರ್ಕ್)ದ ವಿಕಾಸ

5.2.2 ಸಾರ್ಕ್‌ನ ಸಾಧನೆಗಳು

5.2.3 ಸಾರ್ಕ್ ಎದುರಿಸುತ್ತಿರುವ ಸಮಸ್ಯೆಗಳು

5.2.4 ಸಾರ್ಕ್‌ನ ಗುರಿಗಳು, ತತ್ವಗಳು ಮತ್ತು ಕಾರ್ಯವೈಖರಿ

5.3 ಭಾರತ ಮತ್ತು ಇತರೆ ಪ್ರಾದೇಶಿಕ ಸಹಕಾರ ಸಂಘಗಳು

5.3.1 ಭಾರತ ಮತ್ತು ಐ.ಓ.ಆರ್.

5.3.2 ಭಾರತ ಮತ್ತು ಆಸಿಯನ್ಸ್

5.3.3 ಭಾರತ ಮತ್ತು ಭಿಮ್‌ಸ್ಟಾಕ್ (BIMST-EC)

5.4 ಸಮಾಪ್ತಿಗೊಳಿಸೋಣ

5.5 ಕೆಲವು ಪ್ರಮುಖ ಪದಗಳು

5.6 ಕೆಲವು ಉಪಯುಕ್ತ ಗ್ರಂಥಗಳು

5.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 5.1 ಉದ್ದೇಶಗಳು

ಈ ಪಾಠವನ್ನು ಓದುವುದರಿಂದ ನಿಮಗೆ, ಈ ಕೆಳಕಂಡ ವಿಷಯಗಳು ಅರ್ಥವಾಗುತ್ತದೆ.

* ನೂತನ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಹಾಗೂ ದಕ್ಷಿಣ-ದಕ್ಷಿಣ ರಾಷ್ಟ್ರಗಳ ಸಹಕಾರದ ಹಿನ್ನಲೆಯಲ್ಲಿ, ಪ್ರಾದೇಶಿಕ ಸಹಕಾರದ ಅವಶ್ಯಕತೆ.
* ದಕ್ಷಿಣ ಏಷ್ಯಾ ಸಹಕಾರ ಸಂಘದ (ಸಾರ್ಕ್‌ನ) ವಿಕಾಸ, ಧ್ಯೇಯಗಳು ವಾಸ್ತವತೆಯ ನಡುವಣ ಅಂತರ
* ಸಾರ್ಕ್‌ನ ಸಾಧನೆಗಳು ಮತ್ತು ಅದು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಅಡಚಣೆಗಳು ಮತ್ತು
* ಭಾರತವು ಹಲವು ಅನ್ಯ ಸಹಕಾರ, ಸಂಸ್ಥೆಗಳೊಂದಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು

## 5.1 ಪ್ರಸ್ತಾವನೆ

ಎರಡನೇ ಮಹಾಯುದ್ಧದ ನಂತರದಲ್ಲಿ ಅಸ್ತಿತ್ವಕ್ಕೆ ಬಂದ ನೂತನ ರಾಷ್ಟ್ರಗಳು (ಏಷ್ಯಾ ಮತ್ತು ಆಫ್ರಿಕಾ ಖಂಡಗಳಲ್ಲಿ) ಪ್ರಾದೇಶಿಕ ಸಹಕಾರವನ್ನು ಬೆಳೆಸಿಕೊಳ್ಳಲು ಕಂಡ ಕನಸುಗಳ ಹಿನ್ನಲೆಯಲ್ಲಿ ಪ್ರಾದೇಶಿಕ ಸಹಕಾರವನ್ನು ಅರ್ಥಮಾಡಿಕೊಳ್ಳುವುದು ಉಚಿತ. ವಸಾಹತುಗಳಾಗಿದ್ದ ರಾಷ್ಟ್ರಗಳು ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ರಾಷ್ಟ್ರಗಳ ವಿರುದ್ಧ ರಾಜಕೀಯ ಸಹಕಾರ ಮತ್ತು ಐಕ್ಯತೆಯನ್ನು ಬೆಳೆಸಿಕೊಂಡಿದ್ದವಾದ್ದರಿಂದ, ಅವರು ಅಸ್ತಿತ್ವಕ್ಕೆ ಬದ ನಂತರ ಸ್ವಾಭಾವಿಕವಾಗಿ ಆರ್ಥಿಕ ಮತ್ತಿತರ ಸಹಕಾರವನ್ನು ಸ್ಥಾಪಿಸಲು ಯೋಚಿಸಿದ್ದು ಮತ್ತು ಹಾಕಿಕೊಂಡ ಕಾರ್ಯಕ್ರಮಗಳು ಆಶ್ಚರ್ಯದ ಸಂಗತಿಯಾಗಿರಲಿಲ್ಲ. ಆರ್ಥಿಕ ವ್ಯವಸ್ಥೆಯನ್ನು ಬದಲಾಯಿಸುವಲ್ಲಿ ಮತ್ತು ಸಹಕಾರವನ್ನು ಬೆಳೆಸಿಕೊಳ್ಳುವಲ್ಲಿ ಈ ರಾಷ್ಟ್ರಗಳ ನಾಯಕರು ಹಲವು ಕಾರ್ಯಕ್ರಗಳನ್ನು ಹಮ್ಮಿಕೊಂಡರು. ಪ್ರೊ. ಸಿಸಿರ್ ಗುಪ್ತರವರು India and Regional Integration in Asia ಕೃತಿಯಲ್ಲಿ ಬರೆದಿರುವಂತೆ ನೆಹರೂರವರು ಏಷ್ಯಾ ಖಂಡದಲ್ಲಿ ಆರ್ಥಿಕ ಸಹಕಾರದ ಬಗ್ಗೆ ಧೀರ್ಘವಾಗಿ ಯೋಚನೆ ಮಾಡಿದ್ದರು. ಅವರ ದೃಷ್ಟಿಯಲ್ಲಿ ಆರ್ಥಿಕ ಸಹಕಾರವು ಪ್ರಾದೇಶಿಕ ಐಕ್ಯತೆಯನ್ನು ಸಹಬಾಳ್ವೆಯನ್ನು ಬೆಳೆಸುವುದಕ್ಕೆ ಪೂರಕವಾಗಬೇಕಿತ್ತು. ಆದರೆ ಭಾರತ ಹಾಗೂ ಇತರೆ ಏಷ್ಯಾ ಖಂಡದ ರಾಷ್ಟ್ರಗಳ ಪ್ರಥಮ ಗುರಿಯು 50ರ ಮತ್ತು 60ರ ದಶಕದಲ್ಲಿ ರಾಜಕೀಯ ಸ್ವಾತಂತ್ರವನ್ನು ದೊರಕಿಸಿಕೊಳ್ಳುವುದಾಗಿದ್ದರಿಂದ, ಆರ್ಥಿಕ ಸಹಕಾರದತ್ತ ಹೆಚ್ಚಾಗಿ ಗಮನ ಹರಿಸಲಿಲ್ಲ. ಒಂದು ರೀತಿಯಲ್ಲಿ ಇದು ತಪ್ಪಾಗಿಯೂ ಇರಲಿಲ್ಲ.

1955ರಲ್ಲಿ ಬಾಂಡೂಂಗ್ (ಇಂಡೋನೇಷ್ಯದಲ್ಲಿ)ನಲ್ಲಿ ಜರುಗಿದ ಏಷ್ಯಾ ಆಫ್ರಿಕಾ ಸಮ್ಮೇಳನದಲ್ಲಿ ನೆಹರೂ, ಸುಕಾರ್ನೋ, ಚೂವ್ಯಾನ್ ಲಾಯ್ ಮತ್ತಿತರ ನಾಯಕರು ಮಾಡಿದ ಭಾಷಣಗಳನ್ನು ಅವಲೋಕಿಸಿದಾಗ ಹೊರಬರುವುದೇನೆಂದರೆ ಆ ನಾಯಕರು ಸದೃಢ ಏಷ್ಯಾ- ಆಫ್ರಿಕಾ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿ, ಸಹಕಾರ ಮತ್ತು ಸಹಬಾಳ್ವೆಗೆ ಕೊಟ್ಟ ಮಹತ್ವ. ಸಾಂಸ್ಥಿಕ ಸಹಕಾರದ ಬಗ್ಗೆ ನಿರ್ಧಿಷ್ಟವಾದ ನೀಲಿನಕ್ಷೆಯು ಹೊರಬರದಿದ್ದರೂ, ಆರ್ಥಿಕ ಶೋಷಣೆಗೆ ಒಳಗಾಗಿದ್ದ ಈ ರಾಷ್ಟ್ರಗಳು ಬಡತನ ನಿರ್ಮೂಲನೆ ಕೈಗಾರಿಕಾ ಅಭಿವೃದ್ಧಿ. ಪರಸ್ಪರ ವ್ಯಾಪಾರ ಇತ್ಯಾದಿ ಗುರಿಗಳ ಸಾಧನೆಗೆ ಕೊಟ್ಟ ಮಹತ್ವ ಹಾಗೂ ಅದರ ಅನಿವಾರ್ಯತೆ ನೇರವಾಗಿ ಕಂಡುಬರುತ್ತದೆ.

ಈ ಮೇಲೆ ತಿಳಿಸಿದ ಕಾಳಜಿಯ ಹಿನ್ನಲೆಯಲ್ಲಿ ಅಲಿಪ್ತ ಚಳುವಳಿಯ ಹುಟ್ಟು ಮತ್ತು ಸಾಂಸ್ಥೀಕರಣವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. 1961ರಲ್ಲಿನ ಅಲಿಪ್ತ ಚಳುವಳಿಯ ಸ್ಥಾಪನೆ ಹಾಗೂ 1964ರಲ್ಲಿ ಅಸ್ತಿತ್ವಕ್ಕೆ ಬಂದ ಗ್ರೂಪ್ ಆಫ್ 77 (ಜಿ-77) ಮುಂದುವರಿಯುತ್ತಿರುವ (ದಕ್ಷಿಣ) ರಾಷ್ಟ್ರಗಳ ಆರ್ಥಿಕ ಕ್ಷೇತ್ರದಲ್ಲಿ ಸಾಮೂಹಿಕ ಕಾರ್ಯ ಚಟುವಟಿಕೆ ಪ್ರಾದೇಶಿಕ

ಸಹಕಾರದ ವಿಕಾಸಕ್ಕೆ ಕಾರಣವೆಂದು ಪರಿಗಣಿಸಬೇಕಾಗುತ್ತದೆ. ಮುಂದುವರೆದ (ಉತ್ತರ) ರಾಷ್ಟ್ರಗಳ ಮೇಲಿನ ತಮ್ಮ ಅವಲಂಬನೆಯನ್ನು ಹೋಗಲಾಡಿಸಿಕೊಳ್ಳಲು, ತೃತೀಯ ಜಗತ್ತಿನ (ದಕ್ಷಿಣ) ರಾಷ್ಟ್ರಗಳು ಪರಸ್ಪರವಾಗಿ ಹಾಗೂ ಸಾಮೂಹಿಕವಾಗಿ ಆರ್ಥಿಕ ಸಂಪರ್ಕಗಳನ್ನು ಬೆಳೆಸುವತ್ತ ತಮ್ಮ ನೀತಿಗಳನ್ನು ಹಾಕಿಕೊಂಡರು.

1960ರ ದಶಕದಲ್ಲಿ ಅಭಿವೃದ್ಧಿಯನ್ನು ಸುಗಮವಾಗಿ ಸಾಗಿಸಲು ಲ್ಯಾಟಿನ್ ಅಮೇರಿಕಾ ಮತ್ತು ಕ್ಯಾರಿಬಿಯನ್ ರಾಷ್ಟ್ರಗಳು ಮುಂದೆ ಬಂದು ಕೆಲವು ಪ್ರಾಂತೀಯ ಮತ್ತು ಉಪಪ್ರಾಂತೀಯ ಸಹಕಾರ ಸಂಘಗಳನ್ನು ರಚಿಸಿದವು. ಲ್ಯಾಟಿನ್ ಅಮೇರಿಕನ್ ಮುಕ್ತ ವ್ಯಾಪಾರ ಸಂಘ (ಲಾಪ್‌ಟಾ)ವನ್ನು 1960ರಲ್ಲಿ ಸ್ಥಾಪಿಸಿ, ಅರ್ಜಂಟೈನಾ, ಬ್ರೆಜಿಲ್, ಮೆಕ್ಸಿಕೊ, ಪರಾಗುವೇ, ಪೆರು ಮತ್ತು ಉರುಗವೇ ರಾಷ್ಟ್ರಗಳು ಸದಸ್ಯರಾದರು. ಪ್ರಾದೇಶಿಕ ಆರ್ಥಿಕ ಸಹಕಾರವನ್ನು ಸಮರ್ಪಕವಾಗಿಯೇ ಸಾಧಿಸುತ್ತಾ ಬಂದ ಈ ಸಂಘದ ವಿಸ್ತರಣೆಯಾಗಿ 1981ರಲ್ಲಿ ಈಕ್ವೆಡಾರ್, ಕೊಲಂಬಿಯಾ, ವೆನೆಜುವಾಲ, ಮತ್ತು ಬೊಲಿವಿಯಾ ರಾಷ್ಟ್ರಗಳೂ ಸದಸ್ಯರಾಗಿ ಸಂಘವನ್ನು ಲ್ಯಾಟಿನ್ ಅಮೇರಿಕನ್ ಐಕ್ಯತಾ ಸಂಘ ಎಂದು ಪುನರ್ ನಾಮಕರಣಮಾಡಿದರು. ಪ್ರಾಂತ್ಯದ ಐಕ್ಯತೆಗೆ ಅವರು ಕೊಟ್ಟ ಮಹತ್ವ ಇದಾಗಿತ್ತು. ಪ್ರಮುಖ ಉಪಸಂಘಗಳಾಗಿಸ ಮಧ್ಯಲಾಟೀನ್ ಅಮೇರಿಕನ್ ಕಾಮನ್ ಮಾರ್ಕೆಟ್, ಕ್ಯಾರಿಬಿಯನ್ ಮುಕ್ತ ವ್ಯಾಪಾರ ಸಂಘ, ಆಂಡ್ರಿಯನ್ ಗುಂಪು ಹಾಗೂ ಪೂರ್ವ ಕ್ಯಾರಿಬಿಯನ್ ಕಾಮನ್ ಮಾರ್ಕೆಟ್ ಕೆಲಸ ಮಾಡುತ್ತಲಿವೆ.

ಆಫ್ರಿಕಾ ಖಂಡದಲ್ಲಿ, ಈಸ್ಟ್ ಆಫ್ರಿಕನ್ ಕಮ್ಯುನಿಟಿ ಮತ್ತು ಸೆಂಟ್ರಲ್ ಆಫ್ರಿಕನ್ ಕಸ್ಟಂ ಮತ್ತು ಎಕನಾಮಿಕ್ ಯೂನಿಯನ್‌ಗಳು 1960ರ ದಶಕದಲ್ಲಿ ಅಸ್ತಿತ್ವಕ್ಕೆ ಬಂದವು. ಏಷ್ಯಾ ಖಂಡದಲ್ಲಿ ಅಸೋಸಿಯೇಷನ್ ಆಫ್ ಸೌತ್ ಈಸ್ಟ್ ಏಷ್ಯನ್ ನೇಷನ್ಸ್(ಆಸಿಯಾನ್) ಅದೇ ಕಾಲದಲ್ಲಿ ಪ್ರಾರಂಭವಾಗಿ ಪ್ರಾಂತೀಯ ಸಹಕಾರಕ್ಕಾಗಿ ಶ್ರಮಿಸಲಾರಂಭಿಸಿತು.

1970 ರ ದಶಕದಲ್ಲಿ ವಿಶ್ವಸಂಸ್ಥೆಯ ಆಶ್ರಯದಲ್ಲಿ ನೂತನ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಸಂಬಂ ಉತ್ತರ-ದಕ್ಷಿಣ ಸಂವಾದವು ಆರಂಭವಾಯಿತು. ಹೆಚ್ಚು ಫಲಕಾರಿಯಾದ ಅನುಕೂಲಗಳೇನೂ ಈ ಸಂವಾದದಿಂದ ಹೊರಬರದ ಕಾರಣ, ಅಲಿಪ್ತ ಚಳುವಳಿಯ ಹಾಗೂ ಗ್ರೂಪ್ ಆಫ್ 77 (ಜಿ. 77) ಆಶ್ರಯದಲ್ಲಿ, ದಕ್ಷಿಣ-ದಕ್ಷಿಣ ಸಹಕಾರಕ್ಕೆ ಸಂಬಂಧಿಸಿದಂತೆ ಸಂವಾದವನ್ನು ಆರಂಭಿಸಲಾಯಿತು. ಅದರ ಪರಿಣಾಮವಾಗಿ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಪ್ರಾದೇಶಿಕ ಸಹಕಾರಕ್ಕೆ ಸಂಬಂಧಿಸಿದ ಚಟುವಟಿಕೆಗಳು ಬಿರುಸಾದವು.

## 5.2 ಪ್ರಾದೇಶಿಕ ಸಹಕಾರಕ್ಕೆ ಸಂಬಂಧಿಸಿದ ವಿಷಯಗಳು ಮತ್ತು ಭಾರತ

ಪ್ರಾದೇಶಿಕ ಸಹಕಾರ ಮತ್ತು ಐಕ್ಯತೆಗೆ ಸಂಬಂಧಿಸಿದಂತೆ, ದಕ್ಷಿಣ ಏಷ್ಯಾ ಪ್ರದೇಶವು, ಚಾರಿತ್ರಿಕ ಮತ್ತು ಭೌಗೋಳಿಕವಾಗಿ ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದರೂ ಈ ಪ್ರದೇಶದಲ್ಲಿ 1985ರವರೆವಿಗೂ ಔಪಚಾರಿಕವಾಗಿ ಸಹಕಾರ ಸಂಘ ಅಸ್ತಿತ್ವಕ್ಕೆ ಬರಲೇ ಇಲ್ಲ. ಇದಕ್ಕೆ ಪ್ರದೇಶದ ರಾಜಕೀಯ ಬೆಳವಣಿಗೆಗಳೇ ಕಾರಣವೆನ್ನಬಹುದು. ಭಾರತವು ನೆಹರೂರವರ ನೇತೃತ್ವದಲ್ಲಿ ಏಷ್ಯಾ ಖಂಡಕ್ಕೆ ಸಂಬಂಧಿಸಿದಂತೆ ಎರಡು ಬಾರಿ ಸಮ್ಮೇಳನಗಳನ್ನು ನಡೆಸಿ, ಏಷ್ಯಾ ಖಂಡವು ಶೀತಲ ಯುದ್ಧದ ಸಮರದಲ್ಲಿ ಭಾಗಿಯಾಗದೇ, ತನ್ನ ಪ್ರದೇಶದ ಆರ್ಥಿಕ ಮತ್ತು ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡಬೇಕೆಂದು ತೀವ್ರವಾದ ಆಸಕ್ತಿಯನ್ನು ತೋರಿಸಿದ್ದರೂ ಕೂಡ, ಔಪಚಾರಿಕವಾಗಿ ಪ್ರಾದೇಶಿಕ ಸಹಕಾರ ಸಂಘ ಅಸ್ತಿತ್ವಕ್ಕೆ ಬರಲೇಇಲ್ಲ. ಬಹುಶಃ ಇದಕ್ಕೆ ಭಾರತ ಪಾಕಿಸ್ತಾನದ ನಡುವಣ ವೈಷಮ್ಯವೇ ಕಾರಣವೆಂದು ಕಾಣುತ್ತದೆ. ಅಲ್ಲದೇ ಪಾಕಿಸ್ತಾನವು 1960ರ ದಶಕದಲ್ಲಿ ಚೀನಾ ರಾಷ್ಟ್ರದೊಡನೆ ಮಿಲಿಟರಿ ಸಂಬಂಧವನ್ನು ಬೆಳೆಸಿಕೊಂಡ ಹಿನ್ನಲೆಯಲ್ಲಿ ಮತ್ತು 1905ರಲ್ಲಿ ಭಾರತ ಪಾಕಿಸ್ತಾನದ ನಡುವೆ ಯುದ್ಧವಾದ ಸನ್ನಿವೇಶದಲ್ಲಿ ಪ್ರಾದೇಶಿಕ ಆರ್ಥಿಕ ಸಹಕಾರ ಮೂಡಿಬರುವುದು ದುಸ್ಸಾಧ್ಯವಾಗಿತ್ತು. ಭೌಗೋಳಿಕವಾಗಿ ಭಾರತದ ಬೃಹತ್ ಸ್ಥಾನ, ಜನಸಂಖ್ಯೆ, ಆರ್ಥಿಕ ಮತ್ತು ಕೈಗಾರಿಕಾ

ಅಭಿವೃದ್ಧಿಯೂ ಕೂಡ ದಕ್ಷಿಣ ಏಷ್ಯಾ ಪ್ರದೇಶದ ಸಣ್ಣ ರಾಷ್ಟ್ರಗಳು ಭಾರತವನ್ನು ಅನುಮಾನದ ದೃಷ್ಟಿಯಲ್ಲಿ ನೋಡಲು ಕಾರಣವಾಯಿತು. ಈ ಕಾರಣದಿಂದ ಕೂಡ, ಪ್ರಾದೇಶಿಕ ಸಹಕಾರ ಸಾಂಸ್ಥೀಕರಣವು ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಮೂಡಿಬರಲಿಲ್ಲ. ಆದರೆ ದಕ್ಷಿಣ ಪೂರ್ವ ಏಷ್ಯಾ ಪ್ರದೇಶದ ರಾಷ್ಟ್ರಗಳು 1960ರ ದಶಕದಲ್ಲಿ ತಮ್ಮ ನಡುವೆ ರಾಜಕೀಯ ಭಿನ್ನಾಭಿಪ್ರಾಯಗಳಿದ್ದಾಗ್ಯೂ, ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಆಸಿಯಾನ್ ಅನ್ನು ಸ್ಥಾಪಿಸಿದವು.

ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಭಾರತವು ಪಾಕಿಸ್ತಾನವನ್ನು ಹೊರತುಪಡಿಸಿ, ಬೇರೆ ಎಲ್ಲಾ ರಾಷ್ಟ್ರಗಳೊಡನೆ ಆರ್ಥಿಕ ಮತ್ತು ವ್ಯಾಪಾರವನ್ನು ಬೆಳೆಸಿಕೊಂಡಿದ್ದು ಗಮನಾರ್ಹ ಅಂಶ. ಅಂಕಿ ಅಂಶಗಳ ಅನುಸಾರವಾಗಿ, ಭಾರತವು ದಕ್ಷಿಣ ಏಷ್ಯಾ ಪ್ರದೇಶದ ಸಣ್ಣ ರಾಷ್ಟ್ರಗಳಾದ ಶ್ರೀಲಂಕ (ಅಂದಿನ ಸಿಲೋನ್) ನೇಪಾಳ, ಭೂತಾನ್, ಮಾಲ್ಡೀವ್ಸ್ ರಾಷ್ಟ್ರಗಳಿಗೆ ಯಥೇಚ್ಚವಾಗಿ ಆರ್ಥಿಕ ನೆರವನ್ನು ನೆಹರೂರವರ ಕಾಲದಿಂದಲೇ ನೀಡುತ್ತ ಬಂದಿದೆ. ಶ್ರೀಮತಿ ಇಂದಿರಾ ಗಾಂಧಿಯವರು 70 ರ ದಶಕದಲ್ಲಿ ಈ ರೀತಿಯ ಆರ್ಥಿಕ ನೆರವಿಗೆ ಹೆಚ್ಚು ಪುಷ್ಟಿ ನೀಡಿದರು. ಹಲವು ವಿಶ್ಲೇಷಕರ ಪ್ರಕಾರ, ಈ ರೀತಿಯಲ್ಲಿ ಹೇರಳವಾಗಿ ಆರ್ಥಿಕ ನೆರವನ್ನು ನೀಡುವುದರ ಮೂಲಕ ಭಾರತವು ದಕ್ಷಿಣ ಏಷ್ಯಾ ಪ್ರದೇಶದ ಸಣ್ಣ ರಾಷ್ಟ್ರಗಳನ್ನು ತನ್ನ ಪರವಾಗಿಸಿಕೊಂಡು, ಉಪಖಂಡದಲ್ಲಿನ ಭಾರತ-ಪಾಕಿಸ್ತಾನ ಶಕ್ತಿ ಸಮರದಲ್ಲಿ ತನ್ನ ಪರವಾಗಿ ಪ್ರಭಾವವನ್ನು ಹೆಚ್ಚಿಸಿಕೊಳ್ಳುವ ಗುರಿಯನ್ನು ಅನುಸರಿಸಿತು. ಕೆಲವೊಮ್ಮೆ ಭಾರತವು ವಿಶ್ವಬ್ಯಾಂಕ್‌ನಿಂದ ತನ್ನ ಅಭಿವೃದ್ಧಿ ಕಾರ್ಯಕ್ರಮಗಳಿಗೆಂದು ತೆಗೆದುಕೊಂಡ ಸಾಲದಲ್ಲಿನ ಒಂದು ಭಾಗವನ್ನು ದಕ್ಷಿಣ ಏಷ್ಯಾ ಪ್ರದೇಶದ ಸಣ್ಣ ರಾಷ್ಟ್ರಗಳಿಗೆ ಆರ್ಥಿಕ ನೆರವಾಗಿ ನೀಡಿತ್ತು ಎಂದು ಕೂಡ ಹಲವರು ವಾದಿಸಿದ್ದಾರೆ. ಹಲವೊಮ್ಮೆ ಈ ಸಣ್ಣ ರಾಷ್ಟ್ರಗಳ ರಕ್ಷಣ ನೆರವಿಗೂ ಭಾರತವು ಮುಂದಾಗಿ ಅವುಗಳು ಭಾರತದ ಕೃತಜ್ಞತೆಗೂ ಪಾತ್ರವಾಗಿದ್ದು ಕೂಡ ನಾವು ಸ್ಮರಿಸಬೇಕಾದ ಅಂಶ.

ಇನ್ನೊಂದು ಗಮನಾರ್ಹವಾದ ಹಾಗೂ ವಾಸ್ತವವಾದ ಅಂಶವೆಂದರೆ ದಕ್ಷಿಣ ಏಷ್ಯಾ ಪ್ರದೇಶದ ಸಹಕಾರ ಸಂಘದ ಸ್ಥಾಪನೆಯ ಬಗ್ಗೆ ಔಪಚಾರಿಕವಾಗಿ ಭಾರತವು ಪ್ರಸ್ತಾಪಿಸಿದಾಗೆಲ್ಲಾ ಪಾಕಿಸ್ತಾನವು ಅದನ್ನು ಭಾರತವು ದಕ್ಷಿಣ ಏಷ್ಯಾ ಪ್ರದೇಶದಲ್ಲಿ ತನ್ನ ದಬ್ಬಾಳಿಕೆಯನ್ನು ಬೆಳಸಿ, ಉಳಿಸಿಕೊಳ್ಳುವ ಹಾಕಿಕೊಂಡಿರುವ ತಂತ್ರವೆಂದು ಬಣ್ಣಿಸಿ ಪ್ರಚಾರ ಮಾಡಿತು. ಪ್ರದೇಶದ ಸಣ್ಣ ರಾಷ್ಟ್ರಗಳು ಭಾರತ ಪಾಕಿಸ್ತಾನದ ಸಮಸ್ಯೆಗಳಲ್ಲಿ ಭಾಗಿಗಳಾಗಲು ಇಚ್ಚಿಸದ ಕಾರಣ ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಔಪಚಾರಿಕವಾಗಿ ಬೆಳೆಯಲು ಸಾಧ್ಯವಾಗಲಿಲ್ಲ. ಈ ಅಂಶವನ್ನು ಇಂದಿರಾಗಾಂಧಿಯವರು ಹಲವಾರ ಬಾರಿ ಪ್ರಸ್ತಾಪಿಸಿದ್ದರು. 1971ರ ಭಾರತ-ಪಾಕಿಸ್ತಾನದ ಯುದ್ಧದ ನಂತರದಲ್ಲಿ, ಇಂದಿರಾಗಾಂಧಿಯವರು ಭಾರತ-ಪಾಕಿಸ್ತಾನದ ಸಂಬಂಧಗಳಲ್ಲಿ ವೈಷಮ್ಯವನ್ನು ನಿವಾರಿಸಲು ಜುಲೈ 1972ರಲ್ಲಿ ಪಾಕಿಸ್ತಾನದೊಡನೆ ಮಾಡಿಕೊಂಡ ಸಿಮ್ಲಾ ಒಪ್ಪಂದವು ಭಾರತ-ಪಾಕಿಸ್ತಾನದ ಸಂಬಂಧಗಳನ್ನು ಬಹಳಷ್ಟು ಮಟ್ಟಿಗೆ ಸುಧಾರಿಸಿತು.

### 5.2.1 ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರದ (ಸಾರ್ಕ್‌ನ)ವಿಕಾಸ

ದಕ್ಷಿಣ ಏಷ್ಯಾ ಪ್ರದೇಶದ ಸಹಕಾರದ ಬಗ್ಗೆ 1977ರಲ್ಲಿ. ಈ ಪ್ರದೇಶದ ಪ್ರವಾಸ ಕೈಗೊಂಡಿದ್ದ ಬಾಂಗ್ಲಾದೇಶದ ಅಧ್ಯಕ್ಷ ಜನರಲ್ ಜಿಯಾವುರ್ ರೆಹಮಾನ್‌ರವರು ಪ್ರಸ್ತಾಪ ಮಾಡಿದರು. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ತಾಂತ್ರಿಕ ಕ್ಷೇತ್ರಗಳಲ್ಲಿ ದಕ್ಷಿಣ ಏಷ್ಯಾ ರಾಷ್ಟ್ರಗಳು ಸಹಕಾರವನ್ನು ಮೂಡಿಸಿಕೊಳ್ಳಬೇಕೆಂಬ ವಿಷಯಕ್ಕೆ ಸಂಬಂಧಿಸಿದಂತೆ ಬಾಂಗ್ಲಾದೇಶದ ರಾಷ್ಟ್ರಪತಿಯವರು ಒಂದು ಕರಡು ಒಪ್ಪಂದ ಪತ್ರವನ್ನು ಪ್ರದೇಶದ ನಾಯಕರುಗಳಿಗೆ ಕೊಟ್ಟು ಅವರ ಪ್ರತಿಕ್ರಿಯೆಯನ್ನು ಅಪೇಕ್ಷಿಸಿದರು. ಪ್ರದೇಶದ ರಾಷ್ಟ್ರಗಳ ವಿದೇಶಾಂಗ ಸಚಿವಾಲಯಗಳು ದೀರ್ಘ ಸಮಾಲೋಚನೆ ನಡೆಸಿ, ತಮ್ಮ ಶಿಫಾರಸ್ಸುಗಳನ್ನು ಮುಂದಿಟ್ಟರು. 1977 ರಿಂದ 1981ರವರೆಗೂ ಚರ್ಚೆಗಳು ಹಾಗೂ ಕಾರ್ಯಾಗಾರಗಳು ನಡೆದವು. ಇವುಗಳ ಫಲವಾಗಿ ಆಗಸ್ಟ್ 1983ರಲ್ಲಿ ದೆಹಲಿಯಲ್ಲಿ ಜರುಗಿದ ವಿದೇಶಾಂಗ ಸಚಿವರ ಸಮ್ಮೇಳನದಲ್ಲಿ ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರಕ್ಕೆ ಸಂಬಂಧಿಸಿದಂತೆ ಒಂದು ಕಾರ್ಯಸೂಚಿ ಮತ್ತು ನೀಲಿನಕ್ಷೆಯನ್ನು ಒಪ್ಪಿಕೊಳ್ಳಲಾಯಿತು. ನಂತರದಲ್ಲಿ ಜುಲೈ 1984ರಲ್ಲಿ ಮಾಲೇಯಲ್ಲಿ ಮತ್ತು ಭೂತಾನಿನ ತಿಂಪೊನಲ್ಲಿ ಮೇ

1985ರಲ್ಲಿ ಅಧಿಕಾರಿಗಳ ಮತ್ತು ವಿದೇಶಾಂಗ ಸಚಿವರ ಮಟ್ಟದಲ್ಲಿ ನಡೆದ ಸಮಾಲೋಚನೆಗಳು ಫಲಪ್ರದವಾದವು. ಡಿಸೆಂಬರ್ 1985ರಲ್ಲಿ ಪ್ರದೇಶದ ಪ್ರಧಾನಮಂತ್ರಿಗಳ ಅಧ್ಯಕ್ಷರ ನಡುವಿನ ಪ್ರಥಮ ದಕ್ಷಿಣ ಏಷ್ಯಾ ಶೃಂಗಸಭೆ ಜರುಗಿತು. ಈ ಶೃಂಗಸಭೆಯು ನಿಜಕ್ಕೂ ದಕ್ಷಿಣ ಏಷ್ಯಾ ಪ್ರದೇಶದ ಚಾರಿತ್ರಿಕ ಸಮ್ಮೇಳನವಾಯಿತು. ಈ ಶೃಂಗ ಸಭೆಯಲ್ಲಿ ಭಾಗವಹಿಸದ್ದ ಭಾರತ, ಪಾಕಿಸ್ತಾನ, ಬಾಂಗ್ಲದೇಸ, ನೇಪಾಳ, ಭೂತಾನ್, ಶ್ರೀಲಂಕ ಮತ್ತು ಮಾಲ್ಡೀವ್‌ನ ನಾಯಕರುಗಳು ತಮ್ಮ ರಾಷ್ಟ್ರಗಳನ್ನು ವಿಧಿವತ್ತಾಗಿ ಸಾರ್ಕ್‌ನ ಸದಸ್ಯರಾಷ್ಟ್ರಗಳನ್ನಾಗಿ ಮಾಡಿ ಪ್ರದೇಶದ ಆರ್ಥಿಕ ಮತ್ತಿತರ ಸಹಕಾರಕ್ಕೆ ಶ್ರಮಿಸಲು ಸಂಕಲ್ಪ ಮಾಡಿ ಸಾರ್ಕ್ ಪ್ರಣಾಳಿಕೆಗೆ ಸಹಿ ಹಾಕಿದರು. ಮೊದಲಿಗೆ ಸಾರ್ಕ್(ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ)ವೆಂದು ನಾಮಾಂಕಿತವಾದ ಸಾರ್ಕ್ ಕ್ರಮೇಣವಾಗಿ ಸಾರ್ಕ್(ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘ) ಎಂದು ಘೋಷಿತವಾಯಿತು. ಸದಸ್ಯ ರಾಷ್ಟ್ರಗಳಿಗೆ ಸಂಬಂಧಿಸಿದ ರಾಜಕೀಯ ವಿಷಯಗಳು ಮತ್ತು ಸಮಸ್ಯೆಗಳನ್ನು ಸಾರ್ಕ್‌ನ ಚೌಕಟ್ಟಿನಿಂದ ದೂರವಿಡಲು ಸದಸ್ಯ ರಾಷ್ಟ್ರಗಳು ಒಪ್ಪಿದವು. ಅದಕ್ಕೆ ಮುಖ್ಯ ಕಾರಣವೆಂದರೆ ಆರ್ಥಿಕ, ಸಾಮಾಜಿಕ, ಮತ್ತಿತರ ಸಹಕಾರಕ್ಕೆಂದು ಸ್ಥಾಪಿತವಾಗಿರುವ ಸಂಘದಲ್ಲಿ ರಾಜಕೀ ಯ ವಿಷಯಗಳು, ಸಮಸ್ಯೆಗಳನ್ನು ಪ್ರಸ್ತಾಪಿಸಿದರೆ ಪ್ರಾದೇಶಿಕ ಸಹಕಾರಕ್ಕೆ ಅಡಚಣೆಯಾಗುತ್ತದೆ ಎನ್ನುವ ಸರ್ವಾನುಮತ. ಪಾಕಿಸ್ತಾನದ ನಾಯಕರು ಈ ನಿರ್ಧಾರದ ಬಗ್ಗೆ ಉತ್ಸುಕರಾಗಿಲ್ಲದಿದ್ದರೂ (ಅವರ ಉದ್ದೇಶವು ಕಾಶ್ಮೀರ ಸಮಸ್ಯೆಯನ್ನು ಪ್ರಸ್ತಾಪಿಸಿ ಭಾರತದ ಮೇಲೆ ಅದರ ಪರಿಹಾರಕ್ಕೆ ಒತ್ತಡ ತರುವುದಾಗಿತ್ತು ಹಾಗೂ ಇಂದಿಗೂ ಪಾಕಿಸ್ತಾನ ಅದನ್ನು ಅಪೇಕ್ಷಿಸುತ್ತದೆ) ಪ್ರದೇಶದ ಹಿತದೃಷ್ಟಿಯಿಂದ ಸರ್ವಾನುಮತಕ್ಕೆ ತಮ್ಮ ಇಂಗಿತ ನೀಡಿದರು.

### 5.2.2 ಸಾರ್ಕ್‌ನ ಗುರಿಗಳು, ತತ್ವಗಳು ಮತ್ತು ಕಾರ್ಯವೈಖರಿ

ಸಾರ್ಕ್‌ನ ಉದ್ದೇಶಗಳು ಪ್ರಣಾಳಿಕೆಯ ವಿಧಿ 7ರಲ್ಲಿ ನಮೂದಿಸಿರುವಂತೆ ಈ ಕೆಳಕಂಡಂತಿದೆ.

1. ದಕ್ಷಿಣ ಏಷ್ಯಾ ಪ್ರದೇಶದ ಜನರ ಕಲ್ಯಾಣಕ್ಕಾಗಿ ಶ್ರಮಿಸಿ, ಅವರ ಜೀವನದ ಗುಣ ಮಟ್ಟವನ್ನು ಹೆಚ್ಚಿಸುವುದು.
2. ಪ್ರದೇಶದ ಆರ್ಥಿಕ ಬೆಳವಣಿಗೆ, ಸಾಮಾಜಿಕ ಪ್ರಗತಿ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯನ್ನು ಹೆಚ್ಚಿಸುವುದು.
3. ದಕ್ಷಿಣ ಏಷ್ಯಾ ಪ್ರದೇಶದ ರಾಷ್ಟ್ರಗಳ ನಡುವೆ ಸಾಮೂಹಿಕ ಸ್ವಾಲಂಬನೆಯನ್ನು ಬೆಳೆಸುವುದು
4. ಸದಸ್ಯ ರಾಷ್ಟ್ರಗಳ ನಡುವಿನ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವರ ನಡುವೆ ಪರಸ್ಪರ ನಂಬಿಕೆ/ವಿಶ್ವಾಸವನ್ನು ಮೂಡಿಸುವುದು
5. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ತಾಂತ್ರಿಕ ಮತ್ತು ವೈಜ್ಞಾನಿಕ ಸಹೋದ್ಯೋಗವನ್ನು ಸದಸ್ಯ ರಾಷ್ಟ್ರಗಳ ನಡುವೆ ವೃದ್ಧಿಸುವುದು
6. ಮುಂದುವರಿಯುತ್ತಿರುವ ಇತರೇ ರಾಷ್ಟ್ರಗಳೊಡನೆ ಸಹಕಾರವನ್ನು ವರ್ಧಿಸುವುದು
7. ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದಂತೆ ಸದಸ್ಯ ರಾಷ್ಟ್ರಗಳ ನಡುವೆ ಸಹಕಾರವನ್ನು ಹೆಚ್ಚಿಸುವುದು ಹಾಗೂ
8. ಸಮಾನ ಗುರಿಗಳು/ಧ್ಯೇಯೋದ್ದೇಶಗಳನ್ನು ಹೊಂದಿರುವ ಇತರೇ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಸಂಘಟನೆಗಳೊಂದಿಗೆ ಸಹಕಾರವನ್ನು ಬೆಳೆಸಿಕೊಳ್ಳುವುದು.

ಮೇಲೆ ತಿಳಿಸಿದ ಗುರಿಗಳ ಸಾಧನೆಗಳಿಗಾಗಿ ಸಾರ್ಕ್ ತನ್ನ ಪ್ರಣಾಳಿಕೆಯ ವಿಧಿ 2ರಲ್ಲಿ ನಮೂದಿಸಿದ ಕೆಲವು ಅತ್ಯಮೂಲ್ಯವಾದ ತತ್ವಗಳು ಈ ಕೆಳಕಂಡಂತಿವೆ.

1. ಸಾರ್ಕ್ ರಾಷ್ಟ್ರಗಳ ನಡುವಿನ ಸಹಕಾರವು ಸದಸ್ಯ ರಾಷ್ಟ್ರಗಳ ಪರಮಾಧಿಕಾರ ಸಮಾನ ಗಡಿ ಪ್ರದೇಶಗಳ ಸಂರಕ್ಷಣೆ, ರಾಜಕೀಯ ಸ್ವಾತಂತ್ರ, ಆಂತರಿಕ ವಿಷಯಗಳಲ್ಲಿನ ಹಸ್ತಕ್ಷೇಪದ ನಿಷೇದ ಹಾಗೂ ಪರಸ್ಪರ ಲಾಭಗಳಿಗೆ ಸಂಬಧಿಸಿದ ತತ್ವಗಳ ಪಾಲನೆಯ ಮೇಲೆ ನಿಂತಿರುವುದು.
2. ಪ್ರಾದೇಶಿಕ ಸಹಕಾರವು ರಾಷ್ಟ್ರಗಳ ನಡುವಿನ ಪರಸ್ಪರ ಸಂಬಂಧಗಳಿಂದ ಹಾಗೂ ಬಹುಪಕ್ಷೀಯ ಸಂಬಂಧಗಳಿಂದ ಭಿನ್ನವಾಗಿಲ್ಲ, ಒಂದು ಇನ್ನೊಂದಕ್ಕೆ ಪೂರಕವಾಗಿವೆ.
3. ಪ್ರಾದೇಶಿಕ ಸಹಕಾರವು ರಾಷ್ಟ್ರಗಳ ನಡುವಣ ಪರಸ್ಪರ ಮತ್ತು ಬಹು ಪಕ್ಷೀಯ ಬಾಧ್ಯತೆಗಳಿಗೆ ಅಸಂಬದ್ಧವಾಗಿರುವುದಿಲ್ಲ.

ಸಾರ್ಕ್ ಸಂಘಟನೆಯ ಸಚಿವಾಲಯವು ನೇಪಾಳದಲ್ಲಿದೆ. ತನ್ನ ಗುರಿಸಾಧನೆಯ ಕಾರ್ಯಾಚರಣೆಯಲ್ಲಿ ಸಾರ್ಕ್ ಹಲವು ಸಮಿತಿಗಳನ್ನು ಸ್ಥಾಪಿಸಿದೆ, ಮುಖ್ಯವಾದದು ಈ ಕೆಳಕಂಡಂತಿದೆ.

1. ತಾಂತ್ರಿಕ ಸಮಿತಿಗಳು: ವರ್ಷದಲ್ಲಿ ಒಮ್ಮೆ ಸಭೆ ಸೇರುವ ಈ ಸಮಿತಿಗಳು ನಿಗದಿತ ಕ್ಷೇತ್ರಗಳಲ್ಲಿನ ಗುರಿಸಾಧನೆಯ ಸಂಯೋಜನೆ, ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತವೆ.
2. ಸ್ಟಾಂಡಿಂಗ್ ಸಮಿತಿಗಳು: ಸದಸ್ಯ ರಾಷ್ಟ್ರಗಳ ವಿದೇಶಾಂಗ ಕಾರ್ಯದರ್ಶಿಗಳನ್ನು ಆಧರಿಸಿದ ಈ ಸಮಿತಿಯು ಪ್ರಾದೇಶಿಕ ಸಹಕಾರಕ್ಕೆ ಸಂಬಂಧಿಸಿದ ಯೋಜನೆಗಳನ್ನು ಅಂಗೀಕರಿಸಿ ಅವುಗಳ ಕಾರ್ಯಾಚರಣೆಯ ಬಗ್ಗೆ ನಿರ್ಧರಿಸುತ್ತದೆ.
3. ಮಂತ್ರಿಗಳ ಸಮಿತಿಗಳು: ಸದಸ್ಯ ರಾಷ್ಟ್ರಗಳ ವಿದೇಶಾಂಗ ಮಂತ್ರಿಗಳನ್ನೊಳಗೊಂಡ ಈ ಸಮಿತಿಯು ಪ್ರಾದೇಶಿಕ ಸಹಕಾರಕ್ಕೆ ಸಂಬಂಧಿಸಿದ ಮುಖ್ಯ ನೀತಿಗಳನ್ನು ನಿರ್ಧರಿಸಿ, ಅವುಗಳ ಕಾರ್ಯಚರಣೆಯ ಪ್ರಗತಿಯನ್ನು ಪರಿಶೀಲಿಸುತ್ತದೆ.
4. ಶೃಂಗ ಸಭೆಗಳು: ವರ್ಷಕ್ಕೊಮ್ಮೆ ಜರುಗುವ ಶೃಂಗಸಭೆಗಳಲ್ಲಿ ಸದಸ್ಯ ರಾಷ್ಟ್ರಗಳ ಪ್ರಧಾನಮಂತ್ರಿಗಳು/ ಅಧ್ಯಕ್ಷರು ಭಾಗವಹಿಸಿ ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರಕ್ಕೆ ಅನ್ವಯಿಸುವ ತತ್ವಗಳು ಹಾಗೂ ಗುರಿಗಳನ್ನು ಅಂಗೀಕರಿಸಿ ಅವುಗಳ ಕಾರ್ಯಚರಣೆಗೆ ಬೇಕಾದ ನೀತಿಗಳು ಮತ್ತು ಸಲಹೆಗಳನ್ನು ನೀಡುತ್ತಾರೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಭಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಪ್ರಾದೇಶಿಕ ಸಹಕಾರದ ಮೂಲಕಲ್ಪನೆ ಹಾಗೂ ಧ್ಯೇಯಗಳನ್ನು ವಿವರಿಸಿ.**

........................................................................................................................
........................................................................................................................
........................................................................................................................
........................................................................................................................
........................................................................................................................
........................................................................................................................
........................................................................................................................
........................................................................................................................

2. **ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರದ ವಿಕಾಸ ಮತ್ತು ಉದ್ದೇಶಗಳನ್ನು ಪರಿಶೀಲಿಸಿ.**

................................................................................................................................................
................................................................................................................................................
................................................................................................................................................
................................................................................................................................................
................................................................................................................................................
................................................................................................................................................
................................................................................................................................................
................................................................................................................................................

### 5.2.3 ಸಾರ್ಕ್‌ನ ಸಾಧನೆಗಳು

ಏಷ್ಯಾ ಖಂಡದಲ್ಲಿ ಪ್ರಾದೇಶಿಕ ಸಹಕಾರದ ಬಗ್ಗೆ ಅನ್ಯ ಪ್ರದೇಶದಲ್ಲಿ ಸಹಕಾರ ಸಂಘುಗಳು 60ರ ದಶಕದಲ್ಲಿಯೇ ಅಸ್ತಿತ್ವಕ್ಕೆ ಬಂದರೂ ದಕ್ಷಿಣ ಏಷ್ಯಾ ಪ್ರಾದೇಶಿಕ ಸಂಘವು 1985ರಲ್ಲಿ ಸ್ಥಾಪಿತಗೊಂಡಿತು. ಸಾರ್ಕ್‌ಗೆ ಕೇವಲ ಹನ್ನೆರಡು ವರ್ಷಗಳಾಗಿದ್ದರೂ ಕೂಡ, ಹಲವು ಗಮನಾರ್ಹ ಸಾಧನೆಗಳನ್ನು ಸಾರ್ಕ್ ತನ್ನದಾಗಿಸಿಕೊಂಡಿದೆ. ಮುಖ್ಯವಾದ ಸಾಧನೆಗಳು ಈ ಕೆಳಕಂಡಂತಿವೆ.

1. ದಕ್ಷಿಣ ಏಷ್ಯಾ ಪ್ರಾದೇಶಿಕಕ್ಕೆ ಸಂಬಂಧಿಸಿದಂತೆ ಅಸ್ತಿತ್ವಕ್ಕೆ ಬಂದಿರುವ ಆಹಾರ ಧಾನ್ಯಗಳ ಸಂಗ್ರಹಣೆ: 1989ರಲ್ಲಿಂದ ಜಾರಿಯಲ್ಲಿರುವ ಆಹಾರ ಧಾನ್ಯಗಳ ಸಂಗ್ರಹಣೆಯ ಬಗೆಗಿನ ನಿರ್ಧಾರವನ್ನು ಸಾರ್ಕ್ ರಾಷ್ಟ್ರಗಳು ತೆಗೆದುಕೊಂಡಿವೆ. ಆಗಿಂದಾಗ್ಗೆ ಸದಸ್ಯ ರಾಷ್ಟ್ರಗಳು ಎದುರಿಸುತ್ತಿರುವ ಆಹಾರ ಧಾನ್ಯಗಳ ಕೊರತೆಯನ್ನು ನೀಗಿಸಲು ಸ್ಥಾಪಿತವಾದ ಈ ವ್ಯವಸ್ಥೆಯ ಅಡಿಯಲ್ಲಿ ಎಲ್ಲಾ ಸದಸ್ಯರ ಒಪ್ಪಿಗೆಯ ಮೇರೆಗೆ ಆಹಾರ ಧಾನ್ಯಗಳ ಕಾಣಿಕೆ ನೀಡಿ, ಪ್ರದೇಶದ ಯಾವುದೇ ರಾಷ್ಟ್ರ ಆಹಾರ ಸಾಮಗ್ರಿಗಳ ಅಭಾವವನ್ನು ತೀವ್ರವಾಗಿ ಪ್ರಕೃತಿಯ ವಿಕೋಪಕ್ಕೆ ಎದುರಿಸಿದಾಗ ಅವರ ನೆರವಿಗೆ ಆಹಾರ ಧಾನ್ಯಗಳ ಸರಬರಾಜು ಮಾಡುತ್ತಾ ಬಂದಿದೆ. ಬಾಂಗ್ಲದೇಶ ತೀವ್ರ ಪ್ರವಾಹಕ್ಕೆ ಒಳಗಾದಾಗ ಆಹಾರ ಧಾನ್ಯಗಳನ್ನು ಈ ವ್ಯವಸ್ಥೆಯಡಿ ನೀಡಲಾಗಿದೆ, ಪ್ರದೇಶದ ಇತರೇ ರಾಷ್ಟ್ರಗಳೂ ಕೂಡ ಇದರ ಲಾಭವನ್ನು ಪಡೆಯುತ್ತ ಬಂದಿವೆ.

2. ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಿನಿಮಯ, ದಕ್ಷಿಣ ಏಷ್ಯಾ ಪ್ರದೇಶದ ರಾಷ್ಟ್ರಗಳು 80ರ ದಶಕದಿಂದಲೇ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಮಟ್ಟದಲ್ಲಿ ವಿದ್ಯಾರ್ಥಿಗಳ, ಅಧ್ಯಾಪಕರುಗಳ, ಕಲಾಕಾಲರ ವಿನಿಮಯಕ್ಕೆ ಮಾಡಿಕೊಂಡ ಈ ಒಪ್ಪಂದದ ಮೂಲಕ ಪ್ರದೇಶದ ರಾಷ್ಟ್ರಗಳ ನಡುವೆ ಬಾಂಧವ್ಯ ಮತ್ತು ಮೈತ್ರಿ ಹೆಚ್ಚುತ್ತಾ ಬಂದಿದೆ. ಸಂಗೀತ, ನೃತ್ಯ, ನಾಟ್ಯ, ಸಿನಿಮಾ ಮತ್ತು ಮಾಧ್ಯಮ ರಂಗದಲ್ಲಿ ಈ ರೀತಿಯ ವಿನಿಮಯಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಿವೆ. ಸಾರ್ಕ್ ಸಂಗೀತ ಹಬ್ಬಗಳು ಅತ್ಯಂತ ಜನಪ್ರಿಯವಾದವು. ದಕ್ಷಿಣ ಏಷ್ಯಾ ಪ್ರದೇಶದ ಸಾಮ್ಯತೆ ಮತ್ತು ವಿಭಿನ್ನತೆಯನ್ನು ಪ್ರತಿಬಿಂಬಿಸುವುದರ ಮೂಲಕ ವಾಸ್ತವತೆಯನ್ನು ಎತ್ತಿ ಹಿಡಿಯಲು ಸಹಾಯಕವಾಗಿವೆ.

3. ಪ್ರದೇಶದ ಹವಾಗುಣವನ್ನು ಪೂರ್ವಭಾವಿಯಾಗಿ ಜನರಿಗೆ ತಲುಪುವಂತೆ ಮಾಡಲು ಸಾರ್ಕ್ ಮೇಟಿರಿಯಲಾಜರಲ್ ಸೆಂಟರ್‌ನ ಸ್ಥಾಪನೆಯಾಗಿ ಈ ಸಂಸ್ಥೆಯು ಉತ್ತಮ ಕಾರ್ಯ ನಿರ್ವಹಿಸುತ್ತಿದೆ.

4. ಆರ್ಥಿಕ ಮತ್ತು ವಾಣಿಜ್ಯ ಕ್ಷೇತ್ರದಲ್ಲಿನ ಸಹಕಾರವೇ ಸಾರ್ಕ್‌ನ ಅತಿಮುಖ್ಯ ಸಾಧನೆಯಾಗಿದೆ. ಮಂದಗತಿಯಲ್ಲಾದರೂ 90ರ ದಶಕದಲ್ಲಿ ದಕ್ಷಿಣ ಏಷ್ಯಾ ಪ್ರದೇಶದ ರಾಷ್ಟ್ರಗಳ ನಡುವೆ ಅವುಗಳ ಇಚ್ಛೆಯ ಮೇರೆಗೆ ವ್ಯಾಪಾರ ವಿನಿಮಯ ಪ್ರಾರಂಭವಾಯಿತು. ಇದಪ ಅನ್ವಯ ಸಾರ್ಕ್‌ನ ಸದಸ್ಯ ರಾಷ್ಟ್ರಗಳು ತಮ್ಮ ಅನುಕೂಲಕ್ಕನುಗುಣವಾಗಿ ಪರಸ್ಪರ ವ್ಯಾಪಾರದಲ್ಲಿ ತೊಡಗಿ ತಮ್ಮ ಹಾಗೂ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಕಾರಣವಾಗಬಹದು. ನಿರ್ಧಿಷ್ಟಿತವಾದ ವಸ್ತುಗಳ ವಿಷಯದಲ್ಲಿ ನಿರ್ಬಂದಗಳನ್ನು ತೆಗೆದು ವಿನಾಯಿತಿಯನ್ನು ಘೋಷಿಸಿ ಸದಸ್ಯರು ತಮ್ಮ ಆರ್ಥಿಕ ಹಾಗೂ ವ್ಯಾಪಾರ ಕ್ಷೇತ್ರದಲ್ಲಿ ಲಾಭ ಪಡೆಯಬಹುದು. 1993ರಲ್ಲಿ ಅಸ್ತಿತ್ವಕ್ಕೆ ಬಂದ ಈ ವ್ಯವಸ್ಥೆಯಲ್ಲಿ ಸಪ್ತಾ-1ಅನ್ವಯ 226 ವಸ್ತುಗಳಿಗೆ ಮತ್ತು ಸಪ್ತ-2 ಪ್ರಕಾರ994 ವಸ್ತುಗಳಿಗೆ ನಿರ್ಬಂಧಗಳ ವಿನಾಯಿತಿ ಘೋಷಿಸಿ ಪ್ರದೇಶದ ರಾಷ್ಟ್ರಗಳ ವ್ಯಾಪಾರದ ಮೂಲಕ ಲಾಭ ಪಡೆಯುತ್ತಾ ಬಂದಿವೆ. ಕೊಲಂಬೊದಲ್ಲಿ ಜರುಗಿದ ಹತ್ತನೇ ಸಾರ್ಕ್ ಸಮ್ಮೇಳನದಲ್ಲಿ ಭಾರತದ ಪ್ರಧಾನ ಮಂತ್ರಿ ವಾಜಪೇಯಿಯವರು 2000 ವಸ್ತುಗಳ ಮೇಲಿನ ನಿರ್ಬಂಧನೆಗಳನ್ನು ತೆಗೆದು ಪ್ರದೇಶದ ರಾಷ್ಟ್ರಗಳು ಭಾರತದ ವಸ್ತುಗಳನ್ನು ಸುಲಭವಾಗಿ ಪಡೆದುಕೊಳ್ಳಲು ಅವಕಾಶಮಾಡಿಕೊಟ್ಟರು. ಭಾರತದ ನಿರ್ಧಾರವನ್ನು ಮಿತ್ರ ರಾಷ್ಟ್ರಗಳು ಸ್ವಾಗತಿಸಿದವು.

5. 1995ರಲ್ಲಿ ನವದೆಹಲಿಯಲ್ಲಿ ನಡೆದ ಶೃಂಗ ಸಭೆಯಲ್ಲಿ ದಕ್ಷಿಣ ಏಷ್ಯಾ ಅಭಿವೃದ್ಧಿ ನಿಧಿಯ ಸ್ಥಾಪನೆಯಾಯಿತು. ರಾಷ್ಟ್ರಗಳು ಕಾಣಿಗೆ ನೀಡುವುದರ ಮೂಲಕ ಪ್ರದೇಶದ ಸಾಮಾನ್ಯ ಹಿತರಕ್ಷಣೆಗೆ ಸಂಬಂಧಿಸಿದ ಕೈಗಾರಿಕಾ ಕ್ಷೇತ್ರಗಳಲ್ಲಿ ಈ ನಿಧಿಯಿಂದ ಲಭ್ಯವಾಗುವ ಹಣವನ್ನು ಉಪಯಾಗಿಸುವ ನಿರ್ಧಾರವನ್ನು ತೆಗೆದುಕೊಂಡವು.

6. 1990ರ ದಶಕದಲ್ಲಿಯೇ ಭಯೋತ್ಪಾದನೆಯ ನಿಗ್ರಹಕ್ಕೆ ಸಂಬಂಧಿಸಿದಂತೆ ಸಾರ್ಕ್ ಸದಸ್ಯ ರಾಷ್ಟ್ರಗಳು ಒಂದು ಒಪ್ಪಂದಕ್ಕೆ ಸಹಿ ಹಾಕಿದವು. ಈ ಒಪ್ಪಂದದ ಅನ್ವಯ ಸದಸ್ಯ ರಾಷ್ಟ್ರಗಳು ಭಯೋತ್ಪಾದಕರಿಗೆ ಯಾವುದೇ ತರಹದ ಸಹಾಯವನ್ನು ಕೊಡುವುದಿಲ್ಲವೆಂದು ಘೋಷಿಸಿದವು. ಆದರೆ 90ರ ದಶಕದಿಂದ ಇಂದಿನವರೆವಿಗೂ ಪಾಕಿಸ್ತಾನ ಈ ಒಪ್ಪಂದವನ್ನು ಉಲ್ಲಂಗಿಸಿ ಕಾಶ್ಮೀರ ಕಣಿವೆಯಲ್ಲಿ ಭಯೋತ್ಪಾದಕರಿಗೆ ಎಲ್ಲಾ ತರಹದ ಸಹಾಯವನ್ನು ನೀಡುತ್ತಲೇ ಬಂದಿದೆ. ಅಲ್ಲಿನ ನಾಯಕರ ಹೇಳಿಕೆಯಂತೆ ಕಾಶ್ಮೀರದಲ್ಲಿ ನಡೆಯುತ್ತಿರುವುದು ಸ್ವಾತಂತ್ರ ಹೋರಾಟ, ಭಯೋತ್ಪಾದನಾ ಕೃತ್ಯವಲ್ಲ, ನಿಜಕ್ಕೂ ವಿಷಾದಕರವಾದ ಸಂಗತಿ.

ಜನವರಿ 2004ರಲ್ಲಿ ನಡೆದ 12ನೇ ಸಾರ್ಕ್ ಸಮ್ಮೇಳನದಲ್ಲಿ ಪ್ರಾಂತೀಯ ಮುಕ್ತ ವ್ಯಾಪಾರ, ಸಾರಿಗೆ ಮತ್ತು ಸಂಪರ್ಕ ಕ್ಷೇತ್ರದಲ್ಲಿನ ಅಭಿವೃದ್ಧಿ ಮತ್ತು ಇಂಧನ ಸಹಕಾರವನ್ನು ಹೆಚ್ಚಿಸಲು ನಿರ್ಧಾರ ತೆಗೆದುಕೊಳ್ಳಲಾಯಿತು. ಭಾರತದ ಪ್ರಧಾನಿ ವಾಜಪೇಯಿಯರವರು ದಕ್ಷಿಣ ಏಷ್ಯಾ ರಾಷ್ಟ್ರಗಳು ಸಾಮೂಹಿಕವಾಗಿ ಶ್ರೀಮಂತ ರಾಷ್ಟ್ರಗಳಾಗುವ ಸಾರ್ಕ್‌ನ್ನು ಕೊಂಡುಹೋಗಲು ಕರೆ ನೀಡಿದರು.

ದಕ್ಷಿಣ ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ ಸ್ಥಾಪನೆಗೂ ನಾಯಕರು ಒಪ್ಪಿದ್ದಾರೆ. ಅತಿಮುಖ್ಯವಾದುದು ಎಂದರೆ ಸಾರ್ಕ್ ರಾಷ್ಟ್ರಗಳು ದಕ್ಷಿಣ ಏಷ್ಯಾ ಮುಕ್ತ ವ್ಯಾಪಾರಕ್ಕೆ (South Asian Free Trade Area- SAFTA) ಸಹಿ ಹಾಕಿದವು. ಇದರಿಂದಾಗಿ ವ್ಯಪಾರಕ್ಕಿರುವ ಅಡಚಣೆಗಳು 2 ವರ್ಷಗಳಲ್ಲಿ ನಿವಾರಣೆಯಾಗುತ್ತವೆ. 2016ರ ಅವಧಿಗೆ ಸಂಪೂರ್ಣವಾಗಿ ವ್ಯಾಪಾರದ ಅಡಚಣೆಗಳನ್ನು ತೆಗೆಯಲು ನಿರ್ಧರಿಸಲಾಗಿದೆ.

### 5.2.4 ಸಾರ್ಕ್ ಎದುರಿಸುತ್ತಿರುವ ಅಡಚಣೆಗಳು ಮತ್ತು ಸಮಸ್ಯೆಗಳು

ಸಾರ್ಕ್ ಎದುರಿಸುತ್ತಿರುವ ಮುಖ್ಯ ಅಡಚಣೆಗಳು ಮತ್ತು ಸಮಸ್ಯೆಗಳು ಹೀಗಿವೆ.